ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 6 ಶುಕ್ರವಾರ 2026

46

ಸಂಪುಟ: 46 | ಸಂಚಿಕೆ: 315 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ರಾಜ್ಯ ಸರ್ಕಾರ ದಲಿತರ ಮೀಸಲು ನಿಧಿಯ ಹಗಲು ದರೋಡೆ ಮಾಡುತ್ತಿದೆ

ಮಾಜಿ ಶಾಸಕ ಹರ್ಷವರ್ಧನ್ ಆರೋಪ



ಮಾಜಿ ಶಾಸಕ ಹರ್ಷವರ್ಧನ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮಾ.5(ಬಿಎಲ್‌ಯು)– ಎಸ್ ಸಿಎಸ್‌ಪಿ–ಟಿಎಸ್‌ಪಿ ಹಣ ದುರ್ಬಳಕೆ ಮಾಡಿಕೊಳ್ಳುತ್ತಿರುವ ರಾಜ್ಯ ಸರ್ಕಾರ ದಲಿತರ ಮೀಸಲು ನಿಧಿಯ ಹಗಲು ದರೋಡೆ ಮಾಡುತ್ತಿದೆ ಎಂದು ಮಾಜಿ ಶಾಸಕ ಹರ್ಷವರ್ಧನ್ ಆರೋಪಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ ಅನುಷ್ಠಾನಕ್ಕಾಗಿ ಕಳೆದ ಮೂರು ವರ್ಷಗಳಿಂದ ಎಸ್ ಸಿಎಸ್ ಪಿ– ಟಿಎಸ್ ಪಿಗೆ ಸೇರಿದ 39 ಸಾವಿರ ಕೋಟಿ ಹಣವನ್ನು ದುರುಪಯೋಗ ಮಾಡಿಕೊಂಡಿದೆ ಎಂದು ಆಪಾದಿಸಿದರು.

ನಾಳೆ ಮಂಡಿಸುತ್ತಿರುವ ಬಜೆಟ್‌ನಲ್ಲಿ ಮತ್ತೊಮ್ಮೆ 15 ಸಾವಿರ ಕೋಟಿ ರೂಪಾಯಿ ದುರ್ಬಳಕೆ ಮಾಡಿಕೊಳ್ಳಲು ಸಜ್ಜಾಗಿದ್ದಾರೆ. ಈ ಮೂಲಕ ರಾಜ್ಯ ಸರ್ಕಾರ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಹರ್ಷವರ್ಧನ್ ದೂರಿದರು.

ಎಸ್ ಸಿಎಸ್ ಪಿ– ಟಿಎಸ್ ಪಿ ಕಾಯ್ದೆ ಬಲಪಡಿಸಿದ್ದೆ ನಾವು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಬೆನ್ನು ತಾವೆ ತಟ್ಟಿಕೊಳ್ಳುತ್ತಿದ್ದಾರೆ. ಆದರೆ ಒಳಗೊಳಗೆ ದಲಿತರ ನಿಧಿಗೆ ಕನ್ನ ಹಾಕುತ್ತಿದ್ದಾರೆ ಎಂದರು.

ಇಷ್ಟೆಲ್ಲಾ ಆದರೂ ಗ್ಯಾರಂಟಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲದೆ ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ನಿಖರ ಹಾಗೂ ಸತ್ಯವಾದ ಡಾಟಾವನ್ನು ನೀಡದೆ ಜನರಿಗೆ ಮೋಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಈ ಸರ್ಕಾರ ಆಕ್ಸಿಜನ್‌ನಂತೆ ಉಸಿರು ನೀಡುತ್ತಿದೆ. ಈ ಸರ್ಕಾರದ ಅವಧಿ ಮುಗಿದ ಕೂಡಲೇ ಕಾಂಗ್ರೆಸ್ ಪಕ್ಷ ಅವನತಿಯತ್ತ ಸಾಗುತ್ತದೆ ಎಂದು ಹರ್ಷವರ್ಧನ್ ಭವಿಷ್ಯ ನುಡಿದರು.

ಮೈಸೂರು ನಗರ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ, ಪ್ರಧಾನ ಕಾರ್ಯದರ್ಶಿ ವಿ.ಸೋಮಸುಂದರ್, ನಗರ ವಕ್ತಾರ ಮೋಹನ್, ಮಾಧ್ಯಮ ವಕ್ತಾರ ಮಹೇಶ್‌ರಾಜ್ ಅರಸ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನ್ಯಾ.ನಾಗಮೋಹನ್ ದಾಸ್ ವರದಿಯನ್ವಯ ನಿಗದಿಪಡಿಸಿರುವ ಒಳಮೀಸಲಾತಿ ರದ್ದುಪಡಿಸಿ

ಮೈಸೂರು, ಮಾ.5(ಜಿಎ)–ಪರಿಶಿಷ್ಟ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸುವ ನ್ಯಾ.ನಾಗಮೋಹನದಾಸ್ ವರದಿಯು ಅವೈಜ್ಞಾನಿಕವಾಗಿದ್ದು, ವರದಿ ಅನ್ವಯ ಮಾಡಲಾದ ಮೀಸಲಾತಿ ನಿಗದಿಯನ್ನು ರಾಜ್ಯ ಸರ್ಕಾರ ನಿಷೇಧಿಸಬೇಕು ಎಂದು ದಲಿತ ಮಹಾಸಭಾ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಭಾದ ಅಧ್ಯಕ್ಷ ಎಸ್.ರಾಜೇಶ್ ಮಾತನಾಡಿ, ಈ ವರದಿಯಿಂದ ಎಸ್‌ಸಿ ಸಮುದಾಯವು ಒಡೆದ ಕನ್ನಡಿಯಂತಾಗಿದೆ. ಪಕ್ಷಪಾತ ಧೋರಣೆ ಅನುಸರಿಸಲಾಗಿದೆ. ಇದರಿಂದ ಕೆಲ ಮುಖಂಡರು ಪರಸ್ಪರ ದ್ವೇಷ ಕಾರುತ್ತಿದ್ದಾರೆ. ಇದನ್ನು ತಡೆಯುವ ಮೂಲಕ ಎಲ್ಲರಿಗೂ ಸಮಾನ ಅವಕಾಶ ದೊರಕಿಸಲು ಸರ್ಕಾರ ಮುಂದಾಗಬೇಕು ಎಂದರು. ಗೋಷ್ಠಿಯಲ್ಲಿ ಅಶೋಕಪುರಂ ಮಹೇಶ್, ಪುಟ್ಟರಾಜು, ಮರಿದೇವಯ್ಯ, ನಂಜುಂಡಸ್ವಾಮಿ, ಶಿವಶಂಕರಮೂರ್ತಿ ಇದ್ದರು.

ಅಭಿನಂದನೆ...



ಕಿರಿಯ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಮೈಸೂರು ಸಾತಗಳ್ಳಿ ಘಟಕದ ಚಾಲಕ ಕಂ ನಿರ್ವಾಹಕ ಸಿ.ರಾಜೇಂದ್ರ ಅವರ ಪುತ್ರ ವರುಣ್‌ರಾಜ್ ಅವರನ್ನು ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಎಂಪ್ಲಾಯಿಸ್ ಕೋ–ಆಪರೇಟಿವ್ ಕ್ಯಾಂಟೀನ್ ಸಹಕಾರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಕ್ಯಾಂಟೀನ್ ಸಹಕಾರ ಸಂಘದ ಅಧ್ಯಕ್ಷ ಶಿವಾನಂದ ದೇಸಾಯಿ, ಕಾರ್ಮಿಕ ಮುಖಂಡ ಎಂ.ಎಂ.ವಿಜಯ್‌ಕುಮಾರ್, ಎಂ.ವಿ.ಶಿವಕುಮಾರ, ಎಚ್.ರಾಜೇಶ್, ಮಂಜಪ್ಪ ರಾಜೂರ, ದೇವರಾಜಕುಮಾರ್ ಸೇರಿದಂತೆ ಮುಖಂಡರನ್ನು ಕಾಣಬಹುದು.

ಮಾ.8, ಮಹಿಳೆಯರ ರಂಗೋಲಿ ಸ್ಪರ್ಧೆ



ಮೈಸೂರು,ಮಾ.5(ಜಿಎ)–ಒಂಟಿಕೊಪ್ಪಲ್ ಗ್ರಾಮದೇವತೆ ಉತ್ಸವ ಪ್ರಯುಕ್ತ ಒಂಟಿಕೊಪ್ಪಲಿನ ಮಾರಮ್ಮ ದೇವಸ್ಥಾನ ಆವರಣದಲ್ಲಿ ಮಾ.8ರಂದು ಬೆಳಿಗ್ಗೆ 8 ಗಂಟೆಗೆ ಸರಸ್ವತಿ ಶಿವಣ್ಣ ಸ್ಮಾರಕದ ವತಿಯಿಂದ ಮಹಿಳೆಯರ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷೆ ಆರ್.ಮಂಜುಳಾ ಈ ವಿಷಯ ತಿಳಿಸಿ, ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್(ಜೆಪಿ) ನೇತೃತ್ವದಲ್ಲಿ ಸ್ಪರ್ಧೆ ನಡೆಸಲಾಗುತ್ತಿದೆ. 18 ವರ್ಷಗಳ ಒಳಗಿನ ಹಾಗೂ ಮೇಲ್ಪಟ್ಟ, ಎರಡು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಎಲ್ಲರಿಗೂ ಪ್ರವೇಶ ಉಚಿತವಿದ್ದು, ಮಾ.7ರಂದು ಸಂಜೆ 7ರೊಳಗೆ ಹೆಸರು ನೋಂದಣಿ ಮಾಡಬೇಕು. ಮಾಹಿತಿ ಹಾಗೂ ನೋಂದಣಿಗಾಗಿ ಮೊ.ಸಂ. 81479 47535, 9901125951 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಆರ್.ಶ್ರೀನಿವಾಸ್, ಮಂಜುಳಾ ಬಾಯಿ, ಮಂಜುಳಾ ಲಕ್ಷ್ಮಣ್, ಬೇಬಿ ರತ್ನಾಚಾರ್ ಉಪಸ್ಥಿತರಿದ್ದರು.

ಸರ್ಕಾರಿ ಶಾಲೆ, ಸ್ಮಶಾನಕ್ಕೆ ಜಾಗ ಕೊಡದ ತಹಸೀಲ್ದಾರ್

ಮೈಸೂರು,ಮಾ.5(ಜಿಎ)–ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಬೆಟ್ಟಂದೂರು ಗ್ರಾಮದಲ್ಲಿ ಸರ್ಕಾರಿ ಶಾಲೆ ಮತ್ತು ಸಾರ್ವಜನಿಕ ಸ್ಮಶಾನಕ್ಕೆ ಜಾಗ ಮಂಜೂರು ಮಾಡುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿ ಸಾಕಷ್ಟು ದಿನ ಕಳೆದರೂ ತಹಶೀಲ್ದಾರ್ ಕ್ರಮ ವಹಿಸುತ್ತಿಲ್ಲ ಎಂದು ಸಾಮಾಜಿಕ ಹೋರಾಟಗಾರ ರವಿಕುಮಾರ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲೆಗೆ ಸೂಕ್ತ ಆಟದ ಮೈದಾನವಿಲ್ಲ, ಊರಿನಲ್ಲಿ ಸ್ಮಶಾನ ಜಾಗವೂ ಇಲ್ಲ. ಇದಕ್ಕೆ ಅನುಕೂಲ ಕಲ್ಪಿಸಲು ಗ್ರಾಮದ ಗೋಮಾಳದ ಸರ್ಕಾರಿ ಜಮೀನಲ್ಲಿ ತಲಾ 2 ಎಕರೆ ಮಂಜೂರು ಮಾಡುವಂತೆ ಕಳೆದ ವರ್ಷ ಡಿಸೆಂಬರ್‌ನಲ್ಲಿ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ತಹಶೀಲ್ದಾರ್ ಕಚೇರಿಯಿಂದ ಉಪವಿಭಾಗಾಧಿಕಾರಿ ಕಾರ್ಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲು ವಿಳಂಬ ಮಾಡಲಾಗುತ್ತಿದೆ. 15 ದಿನಗಳೊಳಗೆ ಕ್ರಮವಹಿಸದಿದ್ದರೆ ತಹಶೀಲ್ದಾರ್ ಕಚೇರಿ ಎದುರು ಗ್ರಾಮಸ್ಥರೊಂದಿಗೆ ಧರಣಿ ಆರಂಭಿಸಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಗ್ರಾಮಸ್ಥರಾದ ಕಾಂತರಾಜು ಅಶೋಕ್, ಮರಿಗೌಡ ಉಪಸ್ಥಿತರಿದ್ದರು.

ಉಚಿತ ಡಯಾಲಿಸಿಸ್ ವೋಚರ್ ವಿತರಣೆ

ಮೈಸೂರು, ಮಾ.5(ಜಿಎ)–ಸಾಮಾಜಿಕ ಕಾರ್ಯಕರ್ತ ಮದನ್ ಹುಟ್ಟುಹಬ್ಬದ ಅಂಗವಾಗಿ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಮಾ.6ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ರಕ್ತದಾನ ಶಿಬಿರ, ಉಚಿತ ಡಯಾಲಿಸಿಸ್ ವೋಚರ್ ವಿತರಣೆ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಎಜುಕೇಶನ್ ಕಿಟ್ ವಿತರಣೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೋಟರಿ ಮೈಸೂರು ನಿಯೋಜಿತ ಅಧ್ಯಕ್ಷ ಸಮೀರ್ ಕಶ್ಯಪ್ ಈ ವಿಷಯ ತಿಳಿಸಿ, ಸುಮಾರು 2 ಸಾವಿರ ವಿದ್ಯಾರ್ಥಿಗಳಿಗೆ ಕಿಟ್ ವಿತರಣೆ ನಡೆಯಲಿದೆ. ಕಾರ್ಯಕ್ರಮಕ್ಕೆ ನಟರಾದ ದುನಿಯಾ ವಿಜಯ್, ಅಭಿಷೇಕ್ ಅಂಬರೀಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದರು. ಗೋಷ್ಠಿಯಲ್ಲಿ ರಘು, ರಶ್ಮಿ ಎನ್.ರಾಜು, ನಾಗರಾಜ್, ಮದನ್, ಪವನ್ ಇದ್ದರು.



ಬಿಜೆಪಿಗೆ ನೇಮಕ

ಮೈಸೂರು: ಬಿಜೆಪಿಯ ಮೈಸೂರು ವಿಭಾಗದ ಸಹ ಪ್ರಭಾರಿಯಾಗಿ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಅವರನ್ನು ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇಮಕ ಮಾಡಿ ಆದೇಶಿಸಿದ್ದಾರೆ.

ಮಾಸ್ತಿ ಸಂಪಾದಕತ್ವದ ಕುಮಾರವ್ಯಾಸನ 'ಕರ್ನಾಟ ಭಾರತ ಕಥಾಮಂಜರಿ' ಕೃತಿ ಮರು ಲೋಕಾರ್ಪಣೆ

ಕುಮಾರವ್ಯಾಸರದ್ದೇ ಅತ್ಯುತ್ತಮ ಕಾವ್ಯ: ಸಿಪಿಕೆ



ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಕುಮಾರವ್ಯಾಸ ಮಹಾಕವಿಯ 'ಕರ್ನಾಟ ಭಾರತ ಕಥಾಮಂಜರಿ' ಕೃತಿಯನ್ನು ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಮರು ಲೋಕಾರ್ಪಣೆ ಮಾಡಿದರು.

ಮೈಸೂರು,ಮಾ.5(ಎಂಟಿವೈ)– ಕನ್ನಡದ ಮಹಾಕಾವ್ಯಗಳಲ್ಲೇ ಅತ್ಯುನ್ನತವಾದ ಕಾವ್ಯ ಕುಮಾರವ್ಯಾಸ ಭಾರತ ಎಂದು ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಗುರುವಾರ ಕುವೆಂಪು ಮತ್ತು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಸಂಪಾದಕತ್ವದ ಕುಮಾರವ್ಯಾಸನ 'ಕರ್ನಾಟ ಭಾರತ ಕಥಾಮಂಜರಿ' ಕೃತಿಯ ಮರು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಂಪ, ಕುಮಾರವ್ಯಾಸ ಮತ್ತು ಕುವೆಂಪು ಸೀಮಾ ಪುರುಷರಾಗಿದ್ದು, ಇವರು ಯುಗಾಂತರದ ಕವಿಗಳಾಗಿದ್ದಾರೆ. ಕುಮಾರವ್ಯಾಸದಲ್ಲಿ ಬಹುಮುಖ್ಯವಾದದ್ದು ಭಾವಾವೇಶ. ಪಂಪನಲ್ಲೂ ಅಷ್ಟಾಗಿ ಕಂಡುಬರುವುದಿಲ್ಲ. ಪ್ರಾಚೀನ ಕಾವ್ಯಗಳ ಪುನರ್ ಮುದ್ರಣ ಅತ್ಯಗತ್ಯ. ಕುಮಾರವ್ಯಾಸ ಯೋಗೀಂದ್ರ ಮತ್ತು ಕವೀಂದ್ರ. ಹಿಂದೆ ಆತನ ಕಾವ್ಯದ ವಾಚನ ಮನೆಗಳಲ್ಲಿ ನಡೆಯುತ್ತಿತ್ತು. ಇಂದೂ ಮುಂದುವರಿಯಲಿ ಎಂದು ಪ್ರಸಾರಾಂಗ ಮರು ಮುದ್ರಿಸಿದೆ. ಪ್ರಸಾರಾಂಗದ ಇತಿಹಾಸದಲ್ಲಿ ಪರ್ವದಿನ ಎಂದರು.

ಅಮೆರಿಕದ ನ್ಯೂಯಾರ್ಕ್ ಸ್ಟೋನಿ ಬ್ರೂಕ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ಎಸ್.ಎನ್.ಶ್ರೀಧರ್ ಮಾತನಾಡಿ, ಕನ್ನಡದ ಶೇಕ್ಸ್‌ಪಿಯರ್ ಕುಮಾರವ್ಯಾಸ ಸಾಹಿತ್ಯದ ಕುರಿತಾದ ಹೆಚ್ಚಿನ ಅಧ್ಯಯನಕ್ಕೆ ಸಂಶೋಧನಾ ಕೇಂದ್ರ ಸ್ಥಾಪಿಸುವ ಅಗತ್ಯತೆ ಇದೆ. ಕುಮಾರವ್ಯಾಸ ಶೇಕ್ಸ್‌ಪಿಯರ್‌ಗಿಂತ 50 ವರ್ಷ ಹಿರಿಯ. ಭಾಷೆಯನ್ನು ಶೇಕ್ಸ್‌ಪಿಯರ್‌ನಂತೆ ಬಳಸಿದ್ದಾನೆ. ವ್ಯಾಕರಣ ಸೂತ್ರವನ್ನು ಮುರಿದು, ಛಂದಸ್ಸು ತಿರುಚಿ, ಹೊಸ ಪದಗಳ ಸೃಷ್ಟಿಸಿದ ಕಲಾಕಾರ ಕುಮಾರವ್ಯಾಸ. ಶೇಕ್ಸ್‌ಪಿಯರ್ ಮತ್ತು ಕುಮಾರವ್ಯಾಸ ಇಬ್ಬರೂ ಪ್ರಸಿದ್ಧವಾದ ಕತೆಗಳನ್ನು ಬದಲಿಸಿ ಪ್ರಸ್ತುತಗೊಳಿಸಿದ್ದಾರೆ. ಶೇಕ್ಸ್‌ಪಿಯರ್ ಕೃತಿಗಳು ಜಗತ್ತಿನ ಎಲ್ಲ ಭಾಷೆಗಳಿಗೆ ತರ್ಜುಮೆ ಯಾಗಿವೆ. ಕುಮಾರವ್ಯಾಸ ಕೃತಿ ಮರಾಠಿ, ಇಂಗ್ಲಿಷ್ ಗಷ್ಟೇ ಅನುವಾದಗೊಂಡಿದೆ. ಕುಮಾರವ್ಯಾಸನ ಪದ್ಯದೊಳಗೆ ಇತರರ ಪದ್ಯಗಳು ಸೇರಿಕೊಂಡಿವೆ. ಈ ಬಗ್ಗೆ ಸಂಶೋಧನೆ ನಡೆಯುವ ಅಗತ್ಯವಿದೆ ಎಂದರು.

> "ಕನ್ನಡದಲ್ಲಿ ಭಾವನಾತ್ಮಕವಾದ ವಿಮರ್ಶೆಗಳು ಬಂದಿವೆ. **ಗುಣಾತ್ಮಕವಾದ ಆಳವಾದ ವಿಮರ್ಶೆಗಳು ಬಂದಿಲ್ಲ. ಜಾಗತಿಕವಾಗಿ ಶೇಕ್ಸ್‌ಪಿಯರ್, ವರ್ಡ್ಸ್ ವರ್ತ್ ಓದುಗರ, ಅಭಿಮಾನಿಗಳ ಗುಂಪುಗಳಿವೆ. ಆ ಗುಂಪುಗಳಲ್ಲಿ ಚರ್ಚೆ, ವಿಮರ್ಶೆ ನಡೆಸುತ್ತಾರೆ. ಕನ್ನಡದ ಲೇಖಕರಿಗೆ ಆ ಭಾಗ್ಯವಿಲ್ಲ. –ಪ್ರೊ. ಶ್ರೀಧರ್**

ಕೃತಿ ಕುರಿತು ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಅಕ್ಷರಕ್ಕೆ ಎಲ್ಲೇ ಇಲ್ಲ ಎನ್ನುವುದಕ್ಕೆ ಕರ್ನಾಟಕದ ಕುಗ್ರಾಮವಾದ ಕೋಳಿವಾಡದ ನಾರಾಯಣಪ್ಪ (ಕುಮಾರವ್ಯಾಸ) ಕೃತಿ ಅಮೆರಿಕದ ವಿಶ್ವ ಪ್ರಸಿದ್ಧವಾದ ಹಾರ್ವರ್ಡ್ ವಿವಿಯ ಗ್ರಂಥಾಲಯದಲ್ಲಿ ಸಿಗುತ್ತದೆ. ಆಕ್ಸ್‌ಫರ್ಡ್ ವಿವಿಯಲ್ಲಿ ಹರಿಶ್ಚಂದ್ರ ಕಾವ್ಯ ದೊರೆಯುತ್ತದೆ. ಅಕ್ಷರ ಆಕಾಶ ಮತ್ತು ಸಾಗರವನ್ನು ದಾಟಬಲ್ಲದು ಎಂಬುದಕ್ಕೆ ಈ ಮಹನೀಯರು ಸಾಕ್ಷಿಯಾಗಿದ್ದಾರೆ ಎಂದರು.

ಪಂಪ ಬರೆದ ನಂತರ ಬರೆಯುವ ಧೈರ್ಯ ತೋರಿದವನು ಕುಮಾರವ್ಯಾಸ. ಕನ್ನಡ ಸಾಹಿತ್ಯವನ್ನು ಜೀರ್ಣಿಸಿಕೊಂಡ ಕವಿ. ದೇವರಿಗಿಂತ ಮನುಷ್ಯನೇ ದೊಡ್ಡವನು ಎನ್ನುವ ಕವಿ. ಬಹುತೇಕರು ನಂಬಿರುವ ದೈವವನ್ನು ಮಾತ್ರ ಪ್ರಾರ್ಥಿಸುವ ಪರಿಪಾಠ ಇದೆ. ಕುಮಾರವ್ಯಾಸ ಮಾತ್ರ ಎಲ್ಲ ದೇವರನ್ನೂ ಪ್ರಾರ್ಥಿಸುತ್ತಾನೆ. ಮಾತೆತ್ತಿದರೆ ಶಿವಶಿವ, ಕೃಷ್ಣ ಕೃಷ್ಣ ಎನ್ನುವ ವ್ಯಾಸನು ಮನುಷ್ಯರಿಂದಲೇ ದೇವರನ್ನು ಬೈಯಿಸುತ್ತಾನೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಕುಲಪತಿಯಾಗಿ ಎಲ್ಲಾ ಪ್ರಾಧ್ಯಾಪಕರಿಗೆ ಕೆಲಸ ಮಾಡುವಂತೆ ಹೇಳಬಹುದು. ಆದರೆ, ಕೆಲವೇ ಪ್ರಾಧ್ಯಾಪಕರು ಕೆಲಸ ಮಾಡುತ್ತಾರೆ. ಡಾ.ನಂಜಯ್ಯ ಹೊಂಗನೂರು ಪ್ರಸಾರಾಂಗದ ನಿರ್ದೇಶಕರಾದ ಬಳಿಕ ಹಲವಾರು ಕೆಲಸ ಮಾಡಿದ್ದಾರೆ. ರಿಯಾಯಿತಿ ದರದಲ್ಲಿ 25 ಲಕ್ಷದ ಪುಸ್ತಕ ಮಾರಾಟ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು ಮಾತನಾಡಿ, 38 ವರ್ಷಗಳ ನಂತರ ಪ್ರಸಾರಾಂಗ ದಿಂದ 'ಕರ್ನಾಟ ಭಾರತ ಕಥಾಮಂಜರಿ' ಕೃತಿ ಬಿಡುಗಡೆಗೊಳ್ಳುತ್ತಿರುವುದು ಐತಿಹಾಸಿಕ ಕ್ಷಣ. 600 ವರ್ಷಗಳಾಗಿದ್ದರೂ ಕುಮಾರವ್ಯಾಸನ ಕಾವ್ಯ ಇಂದಿಗೂ ಕನ್ನಡ ಅಕ್ಷರ ಲೋಕವನ್ನು ಶ್ರೀಮಂತಗೊಳಿಸುತ್ತಿದೆ ಎಂದರು.

ಇದೇ ವೇಳೆ ಕೃತಿಯ ಕರಡು ಪರಿಶೀಲಿಸಿದ ಮಂಜುಳಾ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಸಾರಾಂಗದ ಅಧೀಕ್ಷಕ ಚನ್ನಬಸಪ್ಪ, ಸಹಾಯಕ ನಿರ್ದೇಶಕ ಅನಿಲ್‌ಕುಮಾರ್, ಪ್ರಿಂಟಿಂಗ್ ಪ್ರೆಸ್ ನಿರ್ದೇಶಕ ಸತೀಶ್, ಕೆ.ಟಿ.ವೀರಪ್ಪ, ಬಿ.ಕೆ.ಜಗದೀಶ್, ಪ್ರೊ.ಕಾಳಚನ್ನೇಗೌಡ, ಎನ್.ಎಂ.ತಳವಾರ್, ಕೆಶಿವಾರೆಡ್ಡಿ, ಜೈನಹಳ್ಳಿ ಸಿದ್ದಲಿಂಗಪ್ಪ, ಮೈಲಹಳ್ಳಿ ರೇವಣ್ಣ, ಪ್ರೊ.ಚಂದರ್, ಪ್ರೀತಿ ನಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.

ಸಂಪುಟ ಸಭೆಯಲ್ಲಿ ಒಳಮೀಸಲಾತಿ ಚರ್ಚೆ ಅಪೂರ್ಣ

ಸಿಎಂ ನಿಗದಿಪಡಿಸುವ ಸಭೆಯಲ್ಲಿ ಮಾತುಕತೆ ಮುಂದುವರೆಸುವ ನಿರ್ಧಾರ

ಬೆಂಗಳೂರು, ಮಾ.5– ಒಳಮೀಸಲಾತಿ ಸಂಬಂಧ ಒಮ್ಮತದ ತೀರ್ಮಾನ ಸಾಧ್ಯವಾಗದ ಹಿನ್ನೆಲೆಯಲ್ಲಿ ವಿಶೇಷ ಸಭೆಯಲ್ಲಿ ಚರ್ಚೆ ಮುಂದುವರೆಸಲು ಇಂದಿನ ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಸಂಬಂಧ ಚರ್ಚಿಸಲಾಯಿತು. ಆದರೆ ಚರ್ಚೆ ಪೂರ್ಣವಾಗದ ಕಾರಣ ವಿಶೇಷ ಸಭೆಯಲ್ಲಿ ಚರ್ಚೆ ಮುಂದುವರೆಸಲಾಗುವುದು. ಮುಖ್ಯಮಂತ್ರಿಯವರು ಇದಕ್ಕೆ ಸಮಯ ನಿಗದಿಪಡಿಸಲಿದ್ದಾರೆ ಎಂದು ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನೇರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಒಳಮೀಸಲಾತಿ ಅಳವಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ನಾವು ಮೀಸಲಾತಿ ಪ್ರಮಾಣವನ್ನು ಶೇ.56ರಷ್ಟು ನಿಗದಿಪಡಿಸಲು ನಿರ್ಣಯಿಸಿದ್ದೆವು. ಆದರೆ, ಶೇ.50ಕ್ಕೆ ನಿಗದಿಗೆ ನ್ಯಾಯಾಲಯದ ನಿರ್ದೇಶನವಿದೆ. ಈ ನಿಟ್ಟಿನಲ್ಲಿ 56,432 ಹುದ್ದೆಗಳ ಭರ್ತಿಗೆ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ. ಆ ಆದೇಶದ ಮೇಲೆ ಪರಿಣಾಮ ಬೀರುವ ಯಾವುದೇ ನಿರ್ಣಯವನ್ನು ಇಂದಿನ ಸಭೆಯಲ್ಲಿ ತೆಗೆದುಕೊಂಡಿಲ್ಲ. ಒಳಮೀಸಲಾತಿ ವಿಚಾರವಾಗಿ ಅನೇಕ ಸಚಿವರುಗಳು ಮಾತನಾಡಲು ಬಾಕಿ ಇರುವುದರಿಂದ ಚರ್ಚೆ ಅಪೂರ್ಣವಾಗಿದೆ. ಮುಖ್ಯಮಂತ್ರಿಗಳು ನಿಗದಿಪಡಿಸುವ ಸಭೆಯಲ್ಲಿ ಚರ್ಚೆ ಮುಂದುವರೆಸಲಾಗುವುದು ಎಂದರು.

ಸಭೆ ನಡೆಸಲು ಸಚಿವರಿಗೆ ಸೂಚನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಖಾಯಂ, ಗುತ್ತಿಗೆ ಆಧಾರ, ತಾತ್ಕಾಲಿಕ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು, ವೈದ್ಯರು ಮತ್ತು ನೌಕರರ ಸೇವೆಯನ್ನು ಅತ್ಯವಶ್ಯಕ ಸೇವೆಯೆಂದು ಪರಿಗಣಿಸುವ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವರು ಸಭೆ ನಡೆಸಿ ಚರ್ಚಿಸಿದ ನಂತರ ಸೂಕ್ತ ನಿರ್ಧಾರ ಕೈಗೊಳ್ಳಲು ಸಚಿವ ಸಂಪುಟ ತೀರ್ಮಾನಿಸಿದೆ.

ನಾಲೆಗಳ ಅಭಿವೃದ್ಧಿ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 144 ಬಿಎಸ್–VI ನಗರ ಸಾರಿಗೆ ಡೀಸೆಲ್ ಬಸ್ಸುಗಳನ್ನು 62 ಕೋಟಿ ಅಂದಾಜು ಮೊತ್ತದಲ್ಲಿ ಖರೀದಿಸಲು ಹಾಗೂ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ ವಿರಿಜಾ, ದೇವರಾಯ, ಆರ್.ಬಿ.ಎಲ್.ಎಲ್ ಮತ್ತು ಬಂಗಾರದೊಡ್ಡಿ ನಾಲೆಗಳ ವಿತರಣಾ ನಾಲೆಗಳ ಅಭಿವೃದ್ಧಿ ಕಾಮಗಾರಿಯನ್ನು 60 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

ಜಾಹೀರಾತಿಗೆ ಅನುಮತಿ: ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಜಾಹೀರಾತುಗಳಿಗೆ ಶುಲ್ಕಗಳನ್ನು ಪಾವತಿಸಿಕೊಂಡು ಅನುಮತಿ ನೀಡುವ ಮಸೂದೆಗೆ ಅನುಮೋದನೆ ನೀಡಲು, ರಾಜ್ಯ ಅಪರಾಧ ದಾಖಲಾತಿ ವಿಭಾಗ ಮತ್ತು ಪೊಲೀಸ್ ಗಣಕ ವಿಭಾಗಕ್ಕೆ ರಾಜ್ಯದಲ್ಲಿ ಪರಸ್ಪರ ಕಾರ್ಯನಿರ್ವಹಿಸಬಹುದಾದ ಅಪರಾಧ ನ್ಯಾಯ ವ್ಯವಸ್ಥೆ ಐ.ಸಿ.ಜೆ.ಎಸ್ ಹಾಗೂ ಐ.ಟಿ ಸೇವೆಗಳ ಅನುಷ್ಠಾನಕ್ಕೆ ವಿವಿಧ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಅನ್ನು 227.58 ಕೋಟಿ ವೆಚ್ಚದಲ್ಲಿ ಪೊಲೀಸ್ ಆಧುನೀಕರಣ ಯೋಜನೆಯಡಿ ಖರೀದಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಣಯಿಸಿರುವುದಾಗಿ ತಿಳಿಸಿದರು.

ಉಚಿತ ಮೊಣಕಾಲು ಬದಲಾವಣೆ ಶಸ್ತ್ರ ಚಿಕಿತ್ಸೆ



ಮೈಸೂರು, ಮಾ.5(ಜಿಎ)–ಮೈಸೂರಿನ ಶಾರದಾದೇವಿನಗರದಲ್ಲಿರುವ ಎ.ಆರ್. ಆಸ್ಪತ್ರೆಯ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಯಶಸ್ವಿನಿ ಹಾಗೂ ಅರ್ಹ ಆರೋಗ್ಯ ವಿಮೆ ಹೊಂದಿರುವವರಿಗೆ ಸಂಪೂರ್ಣವಾಗಿ ಉಚಿತ ಮೊಣಕಾಲು ಬದಲಾವಣೆಯ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ ಎಂದು ಸಂಸ್ಥಾಪಕ ರಕ್ಷಿತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2022ರಲ್ಲಿ ಆಸ್ಪತ್ರೆ ಆರಂಭವಾಗಿದ್ದು, ಮೈಸೂರು ಸುತ್ತಮುತ್ತಲಿನ ಜನತೆಗೆ ಇದರಿಂದ ಅನುಕೂಲವಾಗುತ್ತಿದೆ. ಮೊಣಕಾಲು ಬದಲಾವಣೆಗೆ ದುಬಾರಿ ವೆಚ್ಚ ನೀಡಿ ಶಸ್ತ್ರ ನಮ್ಮ ಆಸ್ಪತ್ರೆಯಲ್ಲಿ ಪ್ರಯೋಜನ ಪಡೆಯಬಹುದಾಗಿದೆ. ಯಾವುದೇ ಹೆಚ್ಚುವರಿ ಶುಲ್ಕ ಇರುವುದಿಲ್ಲ ಎಂದರು.

ತಜ್ಞ ವೈದ್ಯ ಡಾ.ಮಧುರಾಮ್ ಚೌಧರಿ ಮಾತನಾಡಿ, ಯಶಸ್ವಿನಿ ಕಾರ್ಡ್ ಹೊಂದಿರುವವರಿಗೆ ಸಂಪೂರ್ಣ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ವಯಸ್ಸಾದವರನ್ನು ಎಲ್ಲರೂ ನಿರ್ಲಕ್ಷಿಸುತ್ತಿದ್ದಾರೆ. ಆದರೆ ಯಶಸ್ವಿನಿ ಯೋಜನೆ ಪ್ರಯೋಜನದ ಮೂಲಕ ಇವರು ನೋವಿನಿಂದ ಮುಕ್ತಿ ಪಡೆಯಲು ಇದರಿಂದ ನೆರವಾಗಲಿದೆ ಎಂದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮಾ.5(ಎಸ್‌ಪಿಎನ್)– 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮುಗಿಸಿದ ಪ್ರತಿಭಾವಂತ ಶ್ರೀ ವೈಷ್ಣವ(ಐಯ್ಯಂಗಾರ್) ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಮಾರೇಹಳ್ಳಿ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಕೈಂಕರ್ಯ ಸಭಾ ವತಿಯಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಡಿಪ್ಲೊಮಾ, ವೈದ್ಯಕೀಯ, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಮಾ.25ರೊಳಗಾಗಿ ಬೆಂಗಳೂರಿನ ಮಲ್ಲೇಶ್ವರಂ ಕಚೇರಿ ಸಂಪರ್ಕಿಸಬೇಕು. ಮೊ.86609–05677, 94488–71127 ಅನ್ನು ಸಂಪರ್ಕಿಸಬಹುದು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.3.2026 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಮೂತ್ರಪಿಂಡ ಕಾಯಿಲೆ ತಪಾಸಣಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ :** ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ ಕುರಿತು ವಿಚಾರ ಸಂಕಿರಣ, ಉಪಸ್ಥಿತರು: ವಿಶ್ರಾಂತ ಇಸ್ರೋ ವಿಜ್ಞಾನಿ ಪ್ರೊ.ಪಿ.ಜಿ.ದಿವಾಕರ್, ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ, ಡಾ.ಚಿನ್ಮಯ್ ಹೆಗ್ಡೆ, ಪ್ರಬಾತ್ ಯಾದವ್, ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್, ವಿ.ಎನ್. ಪ್ರಸಾದ್, ಪ್ರೊ.ಎಸ್.ಶ್ಯಾಮಸುಂದರ್, ಡಾ. ಸಂಜಿತ್ ಎಸ್.ಅಂಚನ್, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಕಾಂಪ್ಲೆಕ್ಸ್, ಬೆಳಗ್ಗೆ 9ಕ್ಕೆ.

■ **ಮೈಸೂರು ಮಹಾನಗರ ಪಾಲಿಕೆ, ಸೆಲ್ಕೋ ಫೌಂಡೇಷನ್:** ವಿಕಾಸಪಥದಲ್ಲಿ ವಿಶೇಷಚೇತನರು ಹಾಗೂ ಮಹಿಳೆಯರ ಹೆಜ್ಜೆ ಸೌರ ಬೆಂಬಲಿತ ಕಾರ್ಯಾಗಾರ, ಜೀವನೋಪಾಯ ಪರಿಹಾರಗಳ ಪ್ರದರ್ಶನ, ಉದ್ಘಾಟನೆ: ಪಾಲಿಕೆ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ವಿಕಲಚೇತನರ ಕಲ್ಯಾಣ ಅಧಿಕಾರಿ ರಾಘವೇಂದ್ರ, ರಾಜ್ಯ ಸಂಯೋಜಕ ನರಸಿಂಹಮೂರ್ತಿ, ಕೆ.ಆರ್.ಶಂಕರ್, ಸೆಲ್ಕೋ ಫೌಂಡೇಷನ್‌ನ ಶ್ರೀಮತಿ ರುಚ ಲಿಮಯೆ, ಕೆ.ಸುಕುಮಾರ್, ಫಣೀಂದ್ರಸಿಂಗ್, ಪ್ರಕಾಶ್ ಮೇಟಿ, ಸ್ಥಳ: ಪುರಭವನ, ಬೆಳಗ್ಗೆ 9.30ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನಲ್ಲಿ ಸೋಂಕು ಶಿಬಿರ, ಕಣ್ಣಿನಲ್ಲಿ ಮಾಂಸ ಬೆಳವಣಿಗೆ, ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ನೀರು ಸೋರುವುದು, ಕಣ್ಣು ಸುರಿಸುವುದು, ಶುಷ್ಕನೇತ್ರ, ಮಕ್ಕಳಲ್ಲಿ ಕಂಡುಬರುವ ಕಲಿಕೆಯಲ್ಲಿನ ಸಮಸ್ಯೆಗಳು, ಏಕಾಗ್ರತೆ ಕೊರತೆ ಕುರಿತು ತಪಾಸಣೆ, ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ

■ **ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ಒಂದು ದಿನದ ಪ್ರಾಂಶುಪಾಲರ ಸಭೆ, ಉದ್ಘಾಟನೆ : ಯೋಜನಾ ನಿರ್ದೇಶಕ ಡಾ. ಭಾಗ್ಯವಾನ ಎಸ್. ಮುದಿಗೌಡ, ಮುಖ್ಯ ಅತಿಥಿಗಳು : ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ. ಡಿ.ಎಸ್. ಪ್ರತಿಮಾ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಹೆಚ್.ಪಿ. ಜ್ಯೋತಿ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಕೆ. ಮಂಟೇಲಿಂಗು, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ

■ **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ :** ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರ, ಉಚಿತ ಶ್ವಾಸಕೋಶ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ:** ಜ್ಯೋತಿ ಬೆಳಗುವಿಕೆ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಅಧ್ಯಕ್ಷತೆ: ಮೈಸೂರು ಮೆಡಿಕಲ್ ಕಾಲೇಜು ಡೀನ್ ಮತ್ತು ನಿರ್ದೇಶಕರಾದ ಡಾ.ಕೆ.ಆರ್.ದಾಕ್ಷಾಯಿಣಿ, ವಿಶೇಷ ಅತಿಥಿಗಳು: ರಾಜ್ಯ ಶುಶ್ರೂಷ ಪರಿಷತ್ ಕುಲಸಚಿವ ಡಾ.ಕೆ.ಮಲ್ಲು, ಡೀನ್ ಶುಶ್ರೂಷ ವಿಭಾಗದ ಡಾ. ದೀಲಿಪ್ ಎಸ್.ನಾಟೇಕರ್, ಪ್ರಾಸ್ತಾವಿಕ ಭಾಷಣ: ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಡಾ. ಪಿ.ನಂದಪ್ರಕಾಶ್, ಸ್ಥಳ: ಅಮೃತೋತ್ಸವ ಭವನ, ಜೆ.ಕೆ.ಮೈದಾನ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ನೂತನ ನ್ಯಾಯಾಧೀಶರಿಗೆ ಸನ್ಮಾನ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ.ಎಸ್.ಪಿ.ಮಂಜುನಾಥ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಗೌರವ ಅತಿಥಿಗಳು : ಲಾ ಗೈಡ್ ವೆಂಕಟೇಶ್, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ: ಬಿ.ಕೆ.ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ.ಶೋಭಾ, ವ್ಯಾಖ್ಯಾನ–ಡಾ.ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಅರೋಗ್ಯ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಾರುಣಿ ಪಿ. ರಾವ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ.ಎನ್.ಮಂಜುನಾಥ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಹಾರಾಜಪುರಂ ಸಂತಾನಂ–ಹಾಡುಗಾರಿಕೆ, 4.00 ಮಹಿಳಾರಂಗ– ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮೈಸೂರಿನ ಶ್ರೀರಾಂಪುರದ ಗಾಯತ್ರಿ ಮಹಿಳಾ ಸಮಾಜದ ಸದಸ್ಯೆಯರಿಂದ ವಿಶೇಷ ಕಾರ್ಯಕ್ರಮ ವೈವಿಧ್ಯ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಹವಾಮಾನ ಮಿತ್ರ, ಪರಾಗ ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಮೈಸೂರು ಎ. ಚಂದನ್‌ಕುಮಾರ್–ಕೊಳಲು ವಾದನ, 10.00 ತತ್ವ ಸಂಚಾರ, ಜನಪದ ಗಾಯಕರ ತತ್ವಗಾಯನ

■ **ಡಾ. ವೇಮಗಲ್ ನಾರಾಯಣಸ್ವಾಮಿ ಜಾನಪದ ಮತ್ತು ಸುಗಮ ಸಂಗೀತ ಡಿಪ್ಲೊಮಾ ಶಾಲೆ :** ಸುಗಮ ಸಂಗೀತ ಮೊದಲ ಬ್ಯಾಚ್ 2025ರ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣಾ ಸಮಾರಂಭ, ಉದ್ಘಾಟನೆ : ಗಾಯಕಿ ಹೆಚ್.ಆರ್.ಲೀಲಾವತಿ, ಅಧ್ಯಕ್ಷತೆ : ಕೆಎಸ್‌ಜಿಹೆಚ್ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ, ಮುಖ್ಯ ಅತಿಥಿಗಳು: ಕೆಎಸ್‌ಜಿಹೆಚ್ ವಿವಿ ಕುಲಸಚಿವ ಪ್ರೊ.ಎಂ.ಬಿ. ಮಂಜುನಾಥ, ಶಾಲೆ ಶೈಕ್ಷಣಿಕ ನಿರ್ದೇಶಕ ಬಿ.ವಿ.ಶ್ರೀನಿವಾಸ್, ಪ್ರಾಸ್ತಾವಿಕ ನುಡಿ: ಶಾಲೆ ಅಧ್ಯಕ್ಷ ಡಾ. ವೇಮಗಲ್ ನಾರಾಯಣಸ್ವಾಮಿ, ಸ್ಥಳ: ಕೆಎಸ್‌ಜಿಎಚ್ ವಿವಿ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ದೀಪಾ ಶಿಕ್ಷಣ, ಸೇವಾ ಟ್ರಸ್ಟ್, ದೀಪಾ ಶಾಲೆ:** ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ–ಜ್ಞಾನಯಾನ, ಮುಖ್ಯ ಅತಿಥಿಗಳು: ಭವ್ಯ ಸೋಮಯ್ಯ, ಅಧ್ಯಕ್ಷತೆ: ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ ಅಧ್ಯಕ್ಷ ರಾಮಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ದೀಪಾ ಶಾಲೆ, ಮಧ್ಯಾಹ್ನ 2ಕ್ಕೆ.

■ **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ ಅವಭೃತ ಸ್ನಾನ, ರಾತ್ರಿ ಪುಷ್ಪ ಪಲ್ಲಕ್ಕಿ ಉತ್ಸವ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೆಪೇಟೆ.

■ **ಚಿನ್ಮಯ ಮಿಷನ್, ಮೈಸೂರು :** ಚಿನ್ಮಯ ಅಮೃತ ಮಹೋತ್ಸವ, ಚಿನ್ಮಯ ಮಿಷನ್‌ನ 75 ವರ್ಷಗಳ ಸಂಭ್ರಮಾಚರಣೆ, ಬೆಳಗ್ಗೆ 11 ರಿಂದ ಚಿನ್ಮಯ ಮಿಷನ್ ಗೋಕುಲಮ್‌ನಲ್ಲಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ರಾಮಕೃಷ್ಣ ಆಶ್ರಮದ ಸ್ವಾಮಿ ಮಹಾಮೇಧಾನಂದ, ಸ್ಥಳ: ಚಿನ್ಮಯ ಮಿಷನ್.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಖೇಡಾ ವೇದವ್ಯಾಸಚಾರ್ ಅವರಿಂದ ರುಕ್ಮೇಶ ವಿಜಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀ ಪುರಂ, ಸಂಜೆ 5 ರಿಂದ.

■ **ಪರಂಪರೆ ಸಂಸ್ಥೆ, ಸುಧರ್ಮಾ ಸಂಸ್ಕೃತ ದಿನ ಪತ್ರಿಕೆ:** ಉಪನ್ಯಾಸ ಸರಣಿ, ಸವಿಗಾನ ಸಂಗೀತ ಶಾಲೆಯಿಂದ ವಾಚನ, ವಿದ್ವಾನ್ ಡಾ.ಹೆಚ್.ವಿ.ನಾಗರಾಜರಾವ್ ಅವರಿಂದ ಶ್ರೀ ವೇದಾಂತ ದೇಶಿಕರಿಂದ ವಿರಚಿತ ಶ್ರೀ ಪಾದುಕಾಸಹಸ್ರಂ ಕುರಿತು ಉಪನ್ಯಾಸ. ಸ್ಥಳ: ಶ್ರೀನಿವಾಸ ಪದ್ಮಜಾರಾವ್ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ, ರಾಘವೇಂದ್ರ ಸ್ವಾಮಿ ಮಠದ ಪಕ್ಕ, ಕೃಷ್ಣಮೂರ್ತಿಪುರಂ, ಸಂಜೆ 6 ಗಂಟೆಗೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಒಂದು ಸಂಕಲ್ಪದ ಶಕ್ತಿ ಕುರಿತು ಡಾ.ಮೋಹಿತ್ ದಯಾಳ್ ಗುಪ್ತಾಜಿ ಅವರಿಂದ ಉಪನ್ಯಾಸ, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಸಂಜೆ 6.30ಕ್ಕೆ.

ಸಜ್ಜೇಹುಂಡಿಯಲ್ಲಿಂದು, ಮೈಸೂರು ತಾಲೂಕು

■ **ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಲಿ :** 17ನೇ ವರ್ಷದ ಶ್ರೀ ಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ, ಸಂಜೆ 4.30ರಿಂದ ಗಣಪತಿ ಪೂಜೆ, ಪುಣ್ಯಾಹ, ದೇವತಾನಾಂದಿ, ಶ್ರೀ ಸ್ವಾಮಿಗೆ ರುದ್ರಾಭಿಷೇಕ ಸಹಿತ ಸ್ಥಾಪನಾದಿಯಾಗಿ ಮಹಾಗಣಪತಿ ನಾರಿಕೇಳ ಹೋಮ, ಸ್ಥಳ: ಸಜ್ಜೇಹುಂಡಿ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 6 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 46 | ಸಂಚಿಕೆ: 315 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದು ಬಜೆಟ್

ಸಿಎಂ ಸಿದ್ದರಾಮಯ್ಯ ದಾಖಲೆ 17ನೇ ಆಯ–ವ್ಯಯ ಮಂಡನೆ

- ಸ್ತ್ರೀಯರಿಗೆ ವರ್ಷಕ್ಕೆರಡು ಸೀರೆ; ವಿದ್ಯಾರ್ಥಿನಿಯರಿಗೆ ವಿಶೇಷ ಸವಲತ್ತು ಸಿಗುವ ಸಾಧ್ಯತೆ
- ಶೂನ್ಯ ಬಡ್ಡಿ ದರದ ಸಾಲ 5ರಿಂದ 7 ಲಕ್ಷ; ಶೇ.3ರ ಬಡ್ಡಿ ಸಾಲ 15ರಿಂದ 20 ಲಕ್ಷಕ್ಕೇರಿಕೆ ನಿರೀಕ್ಷೆ
- ಗ್ಯಾರಂಟಿಗಳ ಜೊತೆಗೆ ಜನಪರ ಕಾರ್ಯಗಳಿಗೆ ಆದ್ಯತೆ ನೀಡುವ ಸರ್ಕಸ್ ಕುತೂಹಲ
- ಕೇಂದ್ರದ ಅನುದಾನದ ಕಡಿತದ ನಡುವೆ ಸಂಪನ್ಮೂಲ ಕ್ರೋಢೀಕರಣ ಸಾಹಸ ಪ್ರದರ್ಶನ



ಬೆಂಗಳೂರು, ಮಾ.5(ಕೆಎಂಶಿ)–ಸರ್ಕಾರಿ ನೌಕರರ ಸಂಬಳ, ಪಿಂಚಣಿ, ಗ್ಯಾರಂಟಿ ಯೋಜನೆ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ದೊಡ್ಡ ಪ್ರಮಾಣದ ಆರ್ಥಿಕ ಸಂಪನ್ಮೂಲ ತೆಗೆದಿಡಬೇಕಿರುವ ಸವಾಲಿನೊಂದಿಗೆ ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ 2026–27ನೇ ಸಾಲಿನ ಮುಂಗಡ ಪತ್ರವನ್ನು ವಿಧಾನಸಭೆಯಲ್ಲಿ ಮಂಡಿಸಲಿದ್ದಾರೆ.

ಲಿಂಗ ತಾರತಮ್ಯ ತಪ್ಪಿಸುವ ಉದ್ದೇಶದಿಂದ ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡು ಕೆಲವು ಹೊಸ ಕಾರ್ಯಕ್ರಮಗಳನ್ನು ನೀಡಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಸ್ತ್ರೀಯರಿಗೆ ವರ್ಷಕ್ಕೆರಡು ಸೀರೆ: ಸ್ತ್ರೀಶಕ್ತಿ, ಸ್ವಸಹಾಯ ಗುಂಪುಗಳಲ್ಲಿ ಸದಸ್ಯತ್ವ ಹೊಂದಿರುವವರಿಗೆ ವಾರ್ಷಿಕ ತಲಾ ಎರಡು ಉಚಿತ ಸೀರೆ ಮತ್ತು ಪ್ರೌಢಶಿಕ್ಷಣ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಕೆಲವು ಸವಲತ್ತುಗಳನ್ನು ನೀಡಲು ಉದ್ದೇಶಿಸಿದ್ದಾರೆ.

ಕೆಲವು ಹೊಸ ಯೋಜನೆಗಳನ್ನು ಸೇರಿಸಿಕೊಂಡು ಸುಮಾರು 4 ಲಕ್ಷದ 14,000 ಕೋಟಿ ಗಾತ್ರದ ಮುಂಗಡ ಪತ್ರ ಮಂಡನೆ ಸಾಧ್ಯತೆ ಇದೆ. ಸಾಮಾನ್ಯವಾಗಿ ಪ್ರತಿ ವರ್ಷ ಹಿಂದಿನ ವರ್ಷದ ಬಜೆಟ್‌ಗಿಂತ ಶೇಕಡಾ 10ರಿಂದ 15ರಷ್ಟು ಗಾತ್ರ ಹೆಚ್ಚಳವಾಗುವ ಸಾಧ್ಯತೆ ಇರುತ್ತದೆ.

ಆದರೆ ಈ ಬಾರಿ ಅಷ್ಟು ಪ್ರಮಾಣದ ಹೆಚ್ಚಳ ಸಾಧ್ಯವಿಲ್ಲ, ಕೇಂದ್ರ ಸರ್ಕಾರ ಜಿಎಸ್‌ಟಿ ಪರಿಷ್ಕರಣೆ, ಸಂಪನ್ಮೂಲ ಹಂಚಿಕೆಯಲ್ಲಿ ಕಡಿತ ಸೇರಿದಂತೆ ಹಲವು ಕಾರಣಗಳಿಂದ ಸಂಪನ್ಮೂಲ ಕ್ರೋಢೀಕರಣದಲ್ಲಿ ಹಿನ್ನಡೆ ಉಂಟಾಗಿದೆ. ಬಜೆಟ್ ಗಾತ್ರ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಹೆಚ್ಚಳವಾಗಲಿದೆ. ರಾಜ್ಯದ ಜಿಎಸ್‌ಡಿಪಿಯ ▶ 6ನೇ ಪುಟಕ್ಕೆ

ಬಸ್ ನಿಲ್ದಾಣಗಳಲ್ಲಿ ಬಜೆಟ್ ಭಾಷಣ ಪ್ರಸಾರ!

ಬೆಂಗಳೂರು,ಮಾ.5(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಲಿರುವ ಬಜೆಟ್ ಭಾಷಣವನ್ನು ರಾಜ್ಯ ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರು ವೀಕ್ಷಿಸಬಹುದಾಗಿದೆ.



ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಶುಕ್ರವಾರ ಬೆಳಗ್ಗೆ 10.15ಕ್ಕೆ ವಿಧಾನಸಭೆಯಲ್ಲಿ ಬಜೆಟ್ ಮಂಡಿಸಲಿದ್ದಾರೆ. ರಾಜ್ಯದ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಅಳವಡಿಸಲಾಗಿರುವ ಟಿವಿಗಳಲ್ಲಿ ಮುಂಗಡಪತ್ರ ಮಂಡನೆ ಭಾಷಣದ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿದೆ. ಬಜೆಟ್ ಭಾಷಣವಲ್ಲದೆ, ಆ ನಂತರ ನಡೆಯುವ ಪತ್ರಿಕಾಗೋಷ್ಠಿಯನ್ನೂ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರು ವೀಕ್ಷಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಇದಕ್ಕಾಗಿ ಕೆಲವು ನಿಲ್ದಾಣಗಳಲ್ಲಿ ಹೊಸ ಟಿವಿ ಸೆಟ್‌ಗಳನ್ನು ಅಳವಡಿಸಲಾಗಿದೆ. ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿಗೆ ಈ ವ್ಯವಸ್ಥೆ ಮಾಡಲಾಗಿದೆ, ಸಿದ್ದರಾಮಯ್ಯ ಮಾ.6ರಂದು ತಮ್ಮ ದಾಖಲೆಯ 17ನೇ ಬಜೆಟ್ ಮಂಡಿಸುತ್ತಿದ್ದಾರೆ. ಈ ಮಹತ್ವದ ಬಜೆಟ್ ಮಂಡನೆ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸುವ ಉದ್ದೇಶದಿಂದ ಖಾಸಗಿ ಸಂಸ್ಥೆಯೊಂದು ವಾರ್ತಾ–ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದೊಂದಿಗೆ ಈ ವ್ಯವಸ್ಥೆ ಕಲ್ಪಿಸಿದೆ. ರಾಜ್ಯ ಸಾರಿಗೆ ಸಂಸ್ಥೆಯ ದೊಡ್ಡ ನಿಲ್ದಾಣಗಳಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾಗಿ ಡಿಜಿಟಲ್ ಡಿಸ್‌ಪ್ಲೇ (ಎಲ್‌ಇಡಿ) ಪರದೆಗಳನ್ನು ಅಳವಡಿಸಲಾಗಿದೆ.

ಈ ಸಲವೂ ತೆರಿಗೆ ಗ್ಯಾರಂಟಿ

ಬೆಂಗಳೂರು,ಮಾ.5(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ 1.15 ಲಕ್ಷ ಕೋಟಿ ರೂ. ಸಾಲ ಮಾಡಿ ಬಜೆಟ್ ಮಂಡಿಸಲಿದ್ದು, ಜನರ ಮೇಲೆ ತೆರಿಗೆಗಳ ಹೊರೆ ಹಾಕುವುದು ಖಚಿತ



ಆರ್.ಅಶೋಕ್

ಎಂದು ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಎಂದರೆ ತೆರಿಗೆ ಹೇರುವ ರಾಮಯ್ಯ. ಈ ಬಾರಿ ಕೇಂದ್ರ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ತೆರಿಗೆಗಳ ಹೊರೆ ಕಡಿಮೆ ಮಾಡಿದ್ದಾರೆ. ಆದರೆ, ಸಿದ್ದರಾಮಯ್ಯ ತಿಂಗಳಿಗೆ ನಾಲ್ಕರಂತೆ ತೆರಿಗೆ ಹಾಕುತ್ತಾರೆ ಎಂದರು.

ಈಗಾಗಲೇ 36 ತೆರಿಗೆಗಳನ್ನು ಜನರ ಮೇಲೆ ಹೇರಿದ್ದಾರೆ, ಚುನಾವಣೆಗೆ ಮುನ್ನ ಜನರ ಮೇಲೆ ಹೊರೆ ಹಾಕದೆ ಗ್ಯಾರಂಟಿ ತರುತ್ತೇವೆ ಎಂಬ ಭರವಸೆ ನೀಡಿ, ಈಗ ತೆರಿಗೆಗಳ ಹೊರೆ ಹೇರಿದ್ದಾರೆ. ಸಿದ್ದರಾಮಯ್ಯ

> “ಬಜೆಟ್ ಎಂದರೆ ಆದಾಯ ಹೆಚ್ಚಿಸಿ, ಜನರಿಗೆ ಹೊರೆಯಾಗದಂತೆ ಮಾಡಬೇಕು. ಇದನ್ನೇ ಆರ್ಥಿಕ ಪರಿಣತಿ ಎನ್ನುವುದು, ಸಾಲ ಮಾಡಿ ಸರ್ಕಾರ ನಡೆಸಲು ಸಿದ್ದರಾಮಯ್ಯ ಅವರೇ ಬೇಕಾ, ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಲಿದೆ ಎಂಬ ಜನರ ಆಶಾಭಾವನೆ ಸಂಪೂರ್ಣ ಸುಳ್ಳಾಗಿದೆ.
> –ಆರ್.ಅಶೋಕ್

ಆಡಳಿತಾವಧಿ ಮುಗಿಯುವ ವೇಳೆಗೆ ರಾಜ್ಯದ ಒಟ್ಟು ಸಾಲ 8 ಲಕ್ಷ ಕೋಟಿ ರೂ. ಮೀರಲಿದೆ. ಇದರಿಂದಾಗಿ ಆರ್ಥಿಕ ಶಿಸ್ತು ಮೀರಿ ಹೋಗುತ್ತದೆ. ಇದು ಅವರ ಕಣ್ಕಟ್ಟು ವಿದ್ಯೆ.

ಸಿದ್ದರಾಮಯ್ಯ ಇಲ್ಲದ ಆದಾಯ ಸೃಷ್ಟಿಸಿ ಜಿಎಸ್‌ಡಿಪಿಗೆ ಹೋಲಿಕೆ ಮಾಡುವ ಶೇಕಡ ಪ್ರಮಾಣವನ್ನು ಕಡಿಮೆ ಇರುವಂತೆ ತೋರಿಸುತ್ತಾರೆ. ಈ ಮೂಲಕ ಆರ್ಥಿಕ ಶಿಸ್ತು ಪಾಲಿಸಿದ್ದೇವೆ ಎಂದು ಸುಳ್ಳು ಹೇಳುತ್ತಾರೆ. ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ ಸಾಲ ಇಲ್ಲದ ಬಜೆಟ್ ಮಂಡಿಸಿದ್ದರು. ಅವರಿಗೆ ಇನ್ನೂ 24,400 ಕೋಟಿ ▶ 6ನೇ ಪುಟಕ್ಕೆ


ಅಮೆರಿಕಾ–ಇಸ್ರೇಲ್ ವಿರುದ್ಧ ಇರಾನ್ ಪ್ರಬಲ ಪ್ರತಿದಾಳಿ

- ಅಜರ್ಬೈಜಾನ್, ಕತಾರ್‌ನ ಅಮೆರಿಕಾ ನೆಲೆಗಳು ಟಾರ್ಗೆಟ್
- ಆರನೇ ದಿನವೂ ಪರಸ್ಪರ ಡ್ರೋನ್, ಕ್ಷಿಪಣಿಗಳ ಸುರಿಮಳೆ
- ಲೆಕ್ಕ ಸಿಗದ ಸಾವು; ಗಲ್ಫ್ ಸಹಕಾರ ಮಂಡಳಿ ಶಾಂತಿ ಮಂತ್ರ

ನವದೆಹಲಿ: ಅಮೆರಿಕ ಮತ್ತು ಇಸ್ರೇಲ್ ಉದ್ದೇಶಪೂರ್ವಕವಾಗಿ ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸುತ್ತಿವೆ ಎಂದು ಆರೋಪಿಸಿರುವ ಇರಾನ್, ಭೀಕರ ಪ್ರತಿದಾಳಿ ಮುಂದುವರೆಸಿದೆ.

ಮಧ್ಯಪ್ರಾಚ್ಯದ ಯುದ್ಧ ಗುರುವಾರ 6ನೇ ದಿನಕ್ಕೆ ಕಾಲಿಟ್ಟಿದ್ದು, ಕ್ಷಣ ಕ್ಷಣಕ್ಕೂ ಮಹಾಯುದ್ಧದ ಕಾರ್ಮೋಡ ಇನ್ನು ದಟ್ಟವಾಗುತ್ತಿದೆ. ಅಮೆರಿಕಾ–ಇಸ್ರೇಲ್ ದಾಳಿಗೆ ಬಗ್ಗದ ಇರಾನ್, ಡ್ರೋನ್ ಹಾಗೂ ಕ್ಷಿಪಣಿಗಳ ಮಳೆ ಸುರಿಸುತ್ತಿದೆ.

ತನ್ನ ಸರ್ವೋಚ್ಚ ನಾಯಕರಾಗಿದ್ದ ಖಮೇನಿ ಅವರನ್ನು ಕಳೆದುಕೊಂಡ ಬಳಿಕ ಅಕ್ಷರಶಃ ಕೆರಳಿ ಕೆಂಡವಾಗಿರುವ ಇರಾನ್, ಶತ್ರು ರಾಷ್ಟ್ರಗಳ ನಿದ್ದೆಗೆಡಿಸಿದೆ.



ಇರಾನ್ ದಾಳಿಗೆ ಅಜರ್ಬೈಜಾನ್‌ನ ಶಾಲಾ ಕಟ್ಟಡ ಧ್ವಂಸವಾಗಿದೆ.

ವಿರಾಮದ ಬಳಿಕ ಕ್ಷಿಪಣಿ ದಾಳಿ: ಏಳು ಗಂಟೆಗಳಿಗಿಂತ ಹೆಚ್ಚು ಕಾಲದ ವಿರಾಮದ ನಂತರ ಇರಾನ್, ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಇದನ್ನು ಇಸ್ರೇಲ್ ಸೇನೆ ಹಾಗೂ ಟೆಹರಾನ್ ಸರ್ಕಾರಿ ಮಾಧ್ಯಮ ವರದಿ ಮಾಡಿದ್ದು, ಅಪಾಯವನ್ನು ತಡೆಗಟ್ಟಲು ರಕ್ಷಣಾತ್ಮಕ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಸಾವು–ನೋವುಗಳ ಬಗ್ಗೆ ಯಾವುದೇ ವರದಿ ಲಭ್ಯವಾಗಿಲ್ಲ. ಇರಾನ್‌ನಿಂದ ಹಾರಿಸಲಾದ ಕ್ಷಿಪಣಿಗಳನ್ನು ರಕ್ಷಣಾ ವ್ಯವಸ್ಥೆಗಳು ತಡೆಹಿಡಿಯುತ್ತಿದ್ದಂತೆ ಮಧ್ಯ ಇಸ್ರೇಲ್‌ನಲ್ಲಿ ಪ್ರಬಲ ಸರಣಿ ಸ್ಫೋಟಗಳು ಕೇಳಿಬಂದಿವೆ ಎಂದು ಇಸ್ರೇಲಿ ಮಾಧ್ಯಮ ವರದಿ ಮಾಡಿದೆ. ▶ 6ನೇ ಪುಟಕ್ಕೆ

ಬಿಕ್ಕಟ್ಟು ಪರಿಹಾರಕ್ಕೆ ಸಂವಾದ–ರಾಜತಾಂತ್ರಿಕತೆ ಸಾಧನ

ಯುದ್ಧ ಬಿಕ್ಕಟ್ಟು ಪರಿಹರಿಸುವ ನಿಟ್ಟಿನಲ್ಲಿ ಯುರೋಪಿಯನ್ ಒಕ್ಕೂಟ, ಗಲ್ಫ್ ಸಹಕಾರ ಮಂಡಳಿಯು ಸಂವಾದ ಮತ್ತು ರಾಜತಾಂತ್ರಿಕತೆಗೆ ಒತ್ತಾಯಿಸುವ ಜಂಟಿ ಹೇಳಿಕೆ ಬಿಡುಗಡೆ ಮಾಡಿವೆ. ಯುರೋಪಿಯನ್ ಹಾಗೂ ಗಲ್ಫ್ ವಿದೇಶಾಂಗ ಮಂತ್ರಿಗಳ ವೀಡಿಯೊ ಸಮ್ಮೇಳನದ ನಂತರ, ನಾಗರಿಕರ ರಕ್ಷಣೆ ಮತ್ತು ಅಂತರರಾಷ್ಟ್ರೀಯ ಕಾನೂನನ್ನು ಸಂಪೂರ್ಣವಾಗಿ ಗೌರವಿಸಬೇಕೆಂದು ಕರೆ ನೀಡಲಾಗಿದೆ. ಬಿಕ್ಕಟ್ಟನ್ನು ಪರಿಹರಿಸುವ ಸಾಧನವಾಗಿ ಸಂವಾದ ಮತ್ತು ರಾಜತಾಂತ್ರಿಕತೆಗೆ ತಮ್ಮ ಅಚಲ ಬದ್ಧತೆಯನ್ನು ಸಚಿವರು ಪುನರುಚ್ಚರಿಸಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲಲ್ಲಿ ಕೆರೆ ಆಯ್ತು ಈಗ ಮತ್ತೊಂದು ಭೂ ಹಗರಣ ಬಯಲು 200 ಕೋಟಿ ಮೌಲ್ಯದ ಸರ್ಕಾರಿ ಭೂಮಿ ಕಬಳಿಕೆ ಹುನ್ನಾರ!

ಪಕ್ಕಾ ದಾಖಲೆಯೊಂದಿಗೆ ಶಾಸಕ ಟಿ.ಎಸ್.ಶ್ರೀವತ್ಸ ಆರೋಪ

- ಸರ್ಕಾರಿ ಭೂಮಿ ಮಾರಾಟದ ಸೇಲ್ ಅಗ್ರಿಮೆಂಟ್ ಕಣ್ಮುಚ್ಚಿ ರಿಜಿಸ್ಟರ್ ಮಾಡಿದ ಸಬ್ ರಿಜಿಸ್ಟ್ರಾರ್
- ಖಾಸಗಿ ವ್ಯಕ್ತಿಗಳ ಜೊತೆ ಅಧಿಕಾರಿಗಳ ಶಾಮೀಲು
- ಯಾರಿಗೂ ಭಯವೇ ಇಲ್ಲ; ಇಂತಹ ಅಕ್ರಮ ನಿತ್ಯ ನಿರಂತರ





ಕಬಳಿಸುವ ಹುನ್ನಾರ ನಡೆದಿದೆ ಎನ್ನಲಾದ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಮಹಾರಾಣಾ ಪ್ರತಾಪ್ ಸಿಂಹಜೀ ರಸ್ತೆಯ ಸರ್ಕಾರಿ ಭೂಮಿಯನ್ನು ಶಾಸಕ ಶ್ರೀವತ್ಸ ಖುದ್ದು ಪರಿಶೀಲನೆ (ಎಡಚಿತ್ರ) ನಡೆಸಿದರು. ನಕ್ಷೆಯಲ್ಲಿ ಈ ಭೂಮಿ ಎಲ್ಲಿದೆ ಎಂಬುದರ ಸ್ಪಷ್ಟ ಉಲ್ಲೇಖವಿದೆ.

ಮೈಸೂರು, ಮಾ.5(ಬಿಎಲ್‌ಯು)–ಮೈಸೂರಿನ ಕುರುಬರಹಳ್ಳಿ ಸರ್ವೆ ನಂಬರ್ 4ರ 200 ಕೋಟಿ ಮೌಲ್ಯದ ಸರ್ಕಾರಿ ಭೂಮಿಯನ್ನು ಕಬಳಿಸಲು ಖಾಸಗಿ ವ್ಯಕ್ತಿಗಳು ಹುನ್ನಾರ ನಡೆಸಿದ್ದು, ಅದಕ್ಕೆ ಸರ್ಕಾರದ ಅಧಿಕಾರಿಗಳು ಒತ್ತಾಸೆಯಾಗಿದ್ದಾರೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಕೆ.ಸಿ.ಬಡಾವಣೆಯ ಕೆರೆ ಒತ್ತುವರಿ ಭೂ ಹಗರಣ ಬಯಲಾದ ನಂತರ ಅದೇ ಮಾದರಿಯ ಮತ್ತೊಂದು ಭೂ ಅಕ್ರಮ ಬಟಾಬಯಲಾಗಿದೆ. ಈ ಮೂಲಕ ಚಾಮುಂಡಿಬೆಟ್ಟದ ತಪ್ಪಲಿನ ಸರ್ವೆ ನಂಬರ್ 4ರ ಭೂ ಹಗರಣದ ಸರಣಿ ಮುಂದುವರೆದಿದೆ.

ನಗರದ ಅಗ್ರಹಾರದ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶ್ರೀವತ್ಸ ಅವರು, ಚಾಮುಂಡಿಬೆಟ್ಟದ ತಪ್ಪಲಿನ ಹಾರ್ಸ್ ಪಾರ್ಕ್ ಬಳಿಯ ಮಹಾರಾಣಾ ಪ್ರತಾಪ್ ಸಿಂಹಜೀ ರಸ್ತೆಯಲ್ಲಿ ಬರುವ 200 ಕೋಟಿ ಮೌಲ್ಯದ ಸರ್ಕಾರದ ಭೂಮಿ ಲೂಟಿ ಮಾಡಲು ಖಾಸಗಿ ವ್ಯಕ್ತಿಗಳು ಷಡ್ಯಂತ್ರ ರೂಪಿಸಿದ್ದು, ಇದಕ್ಕೆ ಸರ್ಕಾರದ ಅಧಿಕಾರಿಗಳು ಸಾಥ್ ನೀಡಿದ್ದಾರೆ ಎಂದು ಆಪಾದಿಸಿದರು.

ಈ ಹಗರಣದ ಮೂಲದಿಂದ ಹಿಡಿದು ಸರ್ಕಾರದ ಆಸ್ತಿ ಕಬಳಿಕೆಯ ಸೇಲ್ ಅಗ್ರಿಮೆಂಟ್‌ನ ಈಗಿನ ಬೆಳವಣಿಗೆ ಬಗ್ಗೆ ದಾಖಲಾತಿ ಸಮೇತ ಸಮಗ್ರ ವಿವರ ನೀಡಿದ ▶ 6ನೇ ಪುಟಕ್ಕೆ

ಕ್ರಿಮಿನಲ್ ಪ್ರಕರಣ ದಾಖಲಿಸಿ, ತಪ್ಪಿತಸ್ಥರ ಜೈಲಿಗೆ ಕಳಿಸಬೇಕು

> “ಸರ್ಕಾರಿ ಭೂಮಿಯನ್ನು ರಾಜಾರೋಷವಾಗಿ ಕಬಳಿಸುತ್ತಿರುವ ಈ ಪ್ರಕರಣದ ಬಗ್ಗೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಭೂ ಮಾಫಿಯಾ ಹಾಗೂ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಬೇಕು. ಈ ಪ್ರಕರಣದ ಬಗ್ಗೆ ಮೊದಲು ಇಲಾಖಾ ಮಟ್ಟದಲ್ಲಿ ತನಿಖೆ ಆಗಬೇಕು. ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳು ಸರ್ಕಾರಿ ಆಸ್ತಿ ಕಬಳಿಕೆ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಮುಡಾ ಪ್ರಕರಣದಲ್ಲಿ ಸರ್ಕಾರದ ಆಸ್ತಿ ಲೂಟಿ ಮಾಡಿದ ಹಲವು ಅಧಿಕಾರಿಗಳಿಗೆ ಯಾವುದೇ ಶಿಕ್ಷೆ ಆಗಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಹಗರಣ ಮುಚ್ಚಿ ಹಾಕಲು ಯಾರ ವಿರುದ್ಧವೂ ಕ್ರಮ ಕೈಗೊಳ್ಳಲಿಲ್ಲ. ಇದರಿಂದ ಅಧಿಕಾರಿಗಳಿಗೆ ಸರ್ಕಾರದ ಬಗ್ಗೆ ಭಯ ಇಲ್ಲದಂತಾಗಿದೆ ಎಂದರು. ಸರ್ಕಾರದ ಆಸ್ತಿ ಲೂಟಿ ಮಾಡಿದರೆ ನಮ್ಮನ್ನು ಯಾರೂ ಏನು ಮಾಡಲು ಸಾಧ್ಯವಿಲ್ಲ ಎಂಬ ಧೈರ್ಯದಿಂದ ಈಗ ಇಂತಹ ಅಕ್ರಮದಲ್ಲಿ ತೊಡಗಿದ್ದಾರೆ. ಸರ್ಕಾರಿ ಭೂಮಿ ಲೂಟಿ ಮಾಡುವ ಖಾಸಗಿ ವ್ಯಕ್ತಿಗಳಿಗೆ ಅಧಿಕಾರಿಗಳು ಸಾಥ್ ನೀಡುತ್ತಿದ್ದಾರೆ. **–ಟಿ.ಎಸ್.ಶ್ರೀವತ್ಸ, ಕೆ.ಆರ್.ಕ್ಷೇತ್ರದ ಶಾಸಕರು.**

ಆರ್‌ಟಿಸಿಯಲ್ಲಿ ಸರ್ಕಾರದ ಹೆಸರಿಗೆ ಪೂರ್ಣ ಬದಲಾವಣೆ



> “ಚಾಮುಂಡಿಬೆಟ್ಟದ ತಪ್ಪಲಿನ ಸರ್ವೆ ನಂಬರ್ 4ರ 24.10 ಎಕರೆಗೆ ಸಂಬಂಧಿಸಿದ ಆರ್‌ಟಿಸಿಯನ್ನು ಸರ್ಕಾರದ ಹೆಸರಿಗೆ ಪೂರ್ಣವಾಗಿ ಬದಲಾವಣೆ ಮಾಡಲಾಗುವುದು. ಇದು ಸರ್ಕಾರದ ಆಸ್ತಿಯಾಗಿದ್ದು, ಯಾರೂ ಇದನ್ನು ಕಬಳಿಸಲು ಸಾಧ್ಯವಿಲ್ಲ. ದಾಖಲಾತಿಯಲ್ಲಿ ಇದು ಸರ್ಕಾರದ ಆಸ್ತಿ ಎಂದು ಸ್ಪಷ್ಟವಾಗಿ ಉಲ್ಲೇಖವಾಗಿದೆ. ಹೀಗಿರುವಾಗ ಇದನ್ನು ಒಂದು ವೇಳೆ ಮಾರಾಟ ಮಾಡಲು ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸಿದರೂ ಅದು ರಿಜಿಸ್ಟರ್ ಆಗುವುದಿಲ್ಲ. ಈಗ ಈ ಆಸ್ತಿಯ ಸೇಲ್ ಅಗ್ರಿಮೆಂಟ್ ಮಾತ್ರ ನೋಂದಣಿಯಾಗಿತ್ತು. ಆದರೆ ಮಾರಾಟ ನೋಂದಣಿ ಸಾಧ್ಯವೇ ಆಗುತ್ತಿರಲಿಲ್ಲ. ಇದರಿಂದ ಸರ್ಕಾರದ ಆಸ್ತಿಯನ್ನು ಮಾರಾಟ ಮಾಡುವುದು ವ್ಯರ್ಥ ಪ್ರಯತ್ನ ಆಗುತ್ತಿತ್ತು. ಈ ಸರ್ಕಾರಿ ಆಸ್ತಿಯನ್ನು ಸೇಲ್ ಅಗ್ರಿಮೆಂಟ್ ರಿಜಿಸ್ಟರ್ ಮಾಡಿರುವ ಸಬ್ ರಿಜಿಸ್ಟ್ರಾರ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ಶಾಸಕ ಶ್ರೀವತ್ಸ ಆಗ್ರಹ ಸಂಬಂಧ ರಿಜಿಸ್ಟರ್ ನಿಯಮಗಳು ಏನಿದೆಯೊ, ಯಾವ ಆಧಾರದ ಮೇಲೆ ಅವರು ನೋಂದಣಿ ಮಾಡಿದ್ದಾರೊ ಎಂಬ ಬಗ್ಗೆ ಪರಿಶೀಲನೆ ನಡೆಸಬೇಕಿದೆ. **– ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು.**

ನಕ್ಕರೆ ಅದೇ ಸ್ವರ್ಗ

ಗಂಡ ಪೆಪ್ಸಿ ಬಾಟಲ್ ಮುಂದೆ ಇಟ್ಟುಕೊಂಡು ಬೇಸರವಾಗಿ ಕುಳಿತಿದ್ದ. ಹೆಂಡತಿ ಬಂದು ಪೆಪ್ಸಿ ಕುಡಿದು ಬಿಟ್ಟಳು.

ಹೆಂಡತಿ : ಏನಪ್ಪ ಇವತ್ತು ಇಷ್ಟು ಬೇಜಾರಾಗಿ ಕುಳಿತಿದ್ದೀಯಾ?

ಗಂಡ : ಇವತ್ತಿನ ದಿನವೇ ಕಳಪೆ... ಬೆಳಗ್ಗೆ ನಿನ್ನ ಜೊತೆ ಜಗಳ, ರಸ್ತೆಯಲ್ಲಿ ಕಾರು ಕೆಟ್ಟು ನಿಂತಿತು. ಆಫೀಸ್‌ಗೆ ತಡವಾಗಿ ಹೋಗಿದ್ದಕ್ಕೆ ಬಾಸ್ ಕೆಲಸದಿಂದ ಕಿತ್ತಾಕಿದ. ಸೂಸೈಡ್ ಮಾಡಿಕೊಳ್ಳೋಣ ಅಂತ ಪೆಪ್ಸಿಗೆ ವಿಷ ಹಾಕಿದ್ದೆ. ಅದನ್ನು ನೀನು ಕುಡಿದುಬಿಟ್ಟೆ!

ಮೈಸೂರು ಮಿತ್ರ

ಶುಕ್ರವಾರ, ಮಾರ್ಚ್ 6, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಂತೋಷವಾಗಿರುವುದು ತುಂಬಾ ಸರಳ. ಆದರೆ, ಸರಳವಾಗಿರುವುದು ಮಾತ್ರ ತುಂಬಾ ಕಷ್ಟ.– ರವೀಂದ್ರನಾಥ ಟ್ಯಾಗೋರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಜ್ಜಿಗೆ ಅರಿವೆಯ ಚಿಂತೆ, ಮಗಳಿಗೆ ಗಂಡನ ಚಿಂತೆ, ಮೊಮ್ಮಗಳಿಗೆ ಕಜ್ಜಾಯದ ಚಿಂತೆ

ನಿಮ್ಮ ಪತ್ರಗಳು

ವಿಧ್ವಂಸಕರಿಂದ ಕುವೆಂಪುನಗರದ ಉದ್ಯಾನವನದಲ್ಲಿ ಕಲ್ಲು ಬೆಂಚಿಗೆ ಹಾನಿ



ಮಾನ್ಯರೆ,

ಮೈಸೂರಿನ ಗೋಕುಲಂ 2ನೇ ಹಂತದಲ್ಲಿರುವ ಕುವೆಂಪು ಉದ್ಯಾನವನದಲ್ಲಿ ಕೆಲವು ದಿನಗಳ ಹಿಂದೆ ಕಲ್ಲು ಬೆಂಚಿಗೆ ಹಾನಿ ಮಾಡಿದ ವಿಧ್ವಂಸಕರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ನಾವು ಮೈಸೂರು ಮಹಾನಗರ ಪಾಲಿಕೆ ಆಯುಕ್ತರು ಮತ್ತು ನಗರ ಪೊಲೀಸ್ ಆಯುಕ್ತರನ್ನು ಒತ್ತಾಯಿಸುತ್ತೇವೆ. ದುಷ್ಕರ್ಮಿಗಳು ಉದ್ಯಾನವನದಲ್ಲಿ ಸೈಜು ಕಲ್ಲಿನಿಂದ ಬೆಂಚನ್ನು ಒಡೆದು ಹಾಕಿ, ಖಾಲಿ ಮದ್ಯದ ಬಾಟಲಿಗಳನ್ನು ಎಸೆದಿದ್ದಾರೆ. ಸ್ಥಳೀಯ ಯುವಕರ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವಂತೆ ಮಾಜಿ ನಗರ ಪಾಲಿಕೆ ಸದಸ್ಯರಾದ ಭಾಗ್ಯ ಮಾದೇಶ್ ಅವರಲ್ಲಿಯೂ ಮನವಿ ಮಾಡಿಕೊಂಡಿದ್ದೇವೆ.

–ಗೋಕುಲಂ ನಾಗರಿಕ ಅಭಿವೃದ್ಧಿ ಸಂಘದ ಸದಸ್ಯರು, ಮೈಸೂರು. ತಾ. 4.3.2026

ಯಶಸ್ವಿನಿಯಲ್ಲಿ ಡಯಾಲಿಸಿಸ್ ವೆಚ್ಚ ಭರಿಸಲಿ

ಮಾನ್ಯರೆ,

ದಿನಾಂಕ 28.2.26.ರಂದು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಹೋಗಿದ್ದಾಗ ಆಕಸ್ಮಿಕವಾಗಿ ಮೈಸೂರು ತಾಲೂಕಿನ ದೇವಲಾಪುರ ಗ್ರಾಮದ ರೈತ ಕೃಷಿ ಕಾರ್ಮಿಕ ವ್ಯಕ್ತಿಯೊಬ್ಬರ ಪರಿಚಯವಾಯಿತು. ಅವರು ತಮ್ಮ 33 ವರ್ಷದ ಪತ್ನಿಗೆ ಡಯಾಲಿಸಿಸ್ ಮಾಡಿಸಲು ಬಂದಿರುವುದಾಗಿಯೂ ಕಳೆದ 2 ವರ್ಷಗಳಿಂದ ವಾರಕ್ಕೆ 3 ಭಾರಿ ಡಯಾಲಿಸಿಸ್ ಮಾಡಿಸುತ್ತಿರುವುದಾಗಿಯೂ,ಪ್ರತಿ ಡಯಾಲಿಸಿಸ್‌ಗೆ 1300 ರೂ ಪಾವತಿಸಬೇಕು ಎಂದು ತಿಳಿಸಿದರು. ತಾನು ಯಶಸ್ವಿನಿ ವಿಮೆ ಮಾಡಿಸಿದ್ದರೂ ಡಯಾಲಿಸಿಸ್ ಗೆ ಅನ್ವಯವಾಗುತ್ತಿಲ್ಲವೆಂದು ತಿಳಿಸಿದರು.

ಮೂತ್ರಪಿಂಡ ವಿಫಲವಾದ ವ್ಯಕ್ತಿಗಳಿಗೆ ಜೀವನ ಪರ್ಯಂತ ಅಥವಾ ದಾನಿಗಳಿಂದ ಮೂತ್ರಪಿಂಡ ದೊರೆಯುವವರೆಗೂ ಡಯಾಲಿಸಿಸ್ ಅವಶ್ಯಕತೆ ಇರುತ್ತದೆ. ಇಂತಹ ಸನ್ನಿವೇಶದಲ್ಲಿ ವಾರಕ್ಕೆ 3 ಭಾರಿ 1300 ರೂ. ಕೊಟ್ಟು ಡಯಾಲಿಸಿಸ್ ಮಾಡಿಸುವುದು ವೆಚ್ಚದಾಯಕ. ಹಣವಿಲ್ಲದ, ಆದಾಯವಿಲ್ಲದ ಮಂದಿ ಹೈರಾಣಾಗುತ್ತಾರೆ. ಹಾಗೂ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡದಿದ್ದರೆ ರೋಗಿ ಸಾವನ್ನಪ್ಪುವ ಸಂಭವವಿದೆ.

ಆದ್ದರಿಂದ ಸರ್ಕಾರ ಈ ಬಗ್ಗೆ ತುರ್ತು ಗಮನ ಹರಿಸಿ ಯಶಸ್ವಿನಿ ಯೋಜನೆಯಲ್ಲಿ ಡಯಾಲಿಸಿಸ್ ವೆಚ್ಚ ಭರಿಸುವಂತಾಗಲಿ ಹಾಗೂ ಇದೇ ರೀತಿ ಹೃದಯ ಸಂಬಂಧಿ ಆಂಜಿಯೋಗ್ರಾಮ್ ವೆಚ್ಚವನ್ನು ಕೂಡ ಯಶಸ್ವಿನಿ, ಬಿಪಿಎಲ್ ವರ್ಗದವರಿಗೆ ಭರಿಸುವಂತೆ ಸರ್ಕಾರ ಆದೇಶ ಮಾಡಲಿ. ಆರೋಗ್ಯ ಕ್ಷೇತ್ರದ ಇಂತಹ ಇನ್ನೂ ಅನೇಕ ತುರ್ತು ಚಿಕಿತ್ಸೆಗಳಿಗೆ ವಿನಾಯಿತಿ ನೀಡುವ ಅವಶ್ಯಕತೆ ಇದೆ. ಜನರ ಆರೋಗ್ಯವೇ ರಾಜ್ಯದ ಭಾಗ್ಯ ಎನ್ನುವುದನ್ನು ಸರ್ಕಾರ ಮನಗಾಣಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಚಾಮರಾಜನಗರದ ಮೋರಿ ಸ್ವಚ್ಛಗೊಳಿಸಿ

ಮಾನ್ಯರೆ,

ಜಾನಪದ ತವರೂರಾದ ಚಾಮರಾಜನಗರದ, ನಗರ ಪ್ರದೇಶದ ಅನೇಕ ಭಾಗಗಳಲ್ಲಿ ಮತ್ತು ಅಗ್ರಹಾರದ ರಸ್ತೆಗಳಲ್ಲಿ ಅನೇಕ ಕುಟುಂಬಗಳು ವಾಸಿಸುತ್ತಿದ್ದು ಹಿರಿಯ ನಾಗರಿಕರು, ಪುಟ್ಟ ಮಕ್ಕಳು, ಯುವಕರು, ವಯಸ್ಕರು, ಮಹಿಳೆಯರು ಪುರುಷರು, ವ್ಯಾಪಾರಸ್ಥರು ಜೀವನ ನಡೆಸುತ್ತಿರುವ ಈ ಪ್ರದೇಶದಲ್ಲಿ ನೆಲೆಗೊಂಡಿರುವ ಮೋರಿ (ಡ್ರೈನೇಜ್)ಗಳಲ್ಲಿ ಸ್ವಚ್ಛತೆ ಇಲ್ಲದೆ ಮತ್ತು ಮೋರಿ ನೀರು ಮುಂದೆ ಹೋಗದೆ ಒಂದೇ ಕಡೆ ನಿಂತಿರುವ ಹಿನ್ನೆಲೆಯಲ್ಲಿ ವಿಪರೀತ ಸೊಳ್ಳೆಗಳು ಉತ್ಪತ್ತಿಯಾಗಿ ಜೊತೆಗೆ ಗಬ್ಬು ವಾಸನೆ ಬರುತ್ತಿರುವುದು ಒಂದು ಕಡೆಯಾದರೆ ರೋಗ ರುಜಿನಗಳು ಹರಡುವ ಭೀತಿಯಿಂದಲೇ ಜೀವನ ಸಾಗಿಸುತ್ತಿರುವುದು ಮತ್ತೊಂದು ಭಾಗವಾಗಿದೆ. ಆದ್ದರಿಂದ ಸಂಬಂಧಪಟ್ಟ ಶಾಸಕರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಿರ್ಲಕ್ಷ್ಯ ಮಾಡದೆ ಚಾಮರಾಜನಗರದ ಮೋರಿ (ಡ್ರೈನೇಜ್)ಗಳನ್ನು ಸ್ವಚ್ಛತೆ ಮಾಡಿಸಲು ಕ್ರಮ ಕೈಗೊಳ್ಳುವುದರ ಜೊತೆಗೆ ರೋಗ ರುಜಿನಗಳು ಹರಡದಂತೆ ಔಷಧಿಯನ್ನು ಹಾಕಿಸಲು ಮುಂದಾಗಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಕೆರೆ ಏರಿ ರಸ್ತೆಯಲ್ಲಿ ಬೆಳಗದ ಬೀದಿ ದೀಪಗಳು

ಮಾನ್ಯರೆ,

ಮೈಸೂರು ನಗರದ ಲಿಂಗಾಂಬುದಿ ಕೆರೆ ಏರಿಯ ರಸ್ತೆಯು, ಶ್ರೀರಾಂಪುರ ಬಡಾವಣೆ, ಪ್ರೀತಿ ಬಡಾವಣೆಯಿಂದ ಲಿಂಗಾಂಬುದಿ ಪಾಳ್ಯ, ಅರ್‌ಟಿ ನಗರ ದಟ್ಟಗಳ್ಳಿ 3ನೇ ಹಂತಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಈ ಕೆರೆ ಏರಿಯ ರಸ್ತೆಯಲ್ಲಿ ಸುಮಾರು 25 ರಿಂದ 30 ಬೀದಿ ದೀಪಗಳಿವೆ. ಆದರೆ ರಾತ್ರಿ ವೇಳೆ ಈ ಯಾವ ದೀಪವೂ ಉರಿಯುವುದಿಲ್ಲ. ಇದರಿಂದ ರಾತ್ರಿ ವೇಳೆ ಈ ರಸ್ತೆಯಲ್ಲಿ ಓಡಾಡುವ ವಾಹನ ಚಾಲಕರಿಗೆ ದಟ್ಟ ಅರಣ್ಯದಲ್ಲಿ ಪ್ರಯಾಣಿಸಿದಂತೆ ಭಾಸವಾಗುತ್ತದೆ. ಅಲ್ಲದೆ ವಸತಿ ಪ್ರದೇಶ ಇಲ್ಲದಿರುವುದರಿಂದ ಕಳ್ಳರ ಭಯ ಕೂಡ ಇದೆ. ಈ ಭಾಗದಲ್ಲಿ ಕೆರೆ, ಅರಣ್ಯ ಪ್ರದೇಶ ಇರುವುದರಿಂದ ಆಗಾಗ ಚಿರತೆಗಳು ಕಾಣಿಸಿಕೊಂಡಿದ್ದು ಕೂಡ ವರದಿಯಾಗಿದೆ.ಆದ್ದರಿಂದ ನಗರ ಪಾಲಿಕೆಯವರು ದೀಪ ಬೆಳಗಿಸುವ ವ್ಯವಸ್ಥೆ ಮಾಡಲಿ. ಒಂದು ವೇಳೆ ಇದು ಗ್ರಾಮ ಪಂಚಾಯಿತಿಗೆ ಸೇರಿದ್ದರೆ ಜಿಲ್ಲಾ ಪಂಚಾಯತ್ ನವರು ಈ ಬಗ್ಗೆ ಗಮನ ಹರಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಮಕ್ಕಳೂ ಯೋಗ ಕಲಿಯಬೇಕೇ?



ಯೋಗ ನಿಮ್ಮನ್ನು ಜೀವನದಿಂದ ದೂರ ಮಾಡುವಂತಹದಲ್ಲ. ಬದಲಾಗಿ, ಇದು ನಿಮಗೆ ಜೀವನದ ಕಡೆಗೆ ಆಳವಾದ ಸೆಳೆತವನ್ನು ನೀಡುವಂತಹದು. ಹಾಗಿದ್ದರೆ ನೀವೇ ಹೇಳಿ, ಇದನ್ನು ಕಲಿಯಲು ಶುರು ಮಾಡಬೇಕಿರುವುದು ಯಾವಾಗ? ಅರವತ್ತನೇ ವಯಸ್ಸಿನಲ್ಲೋ ಅಥವಾ ಸಾಧ್ಯವಾದಷ್ಟು ಮುಂಚಿತವಾದ ಸಮಯದಲ್ಲೋ?

ಸಾಮಾನ್ಯವಾಗಿ ಮಕ್ಕಳು ಏಳು ವರ್ಷದವರಾದಾಗ ಯೋಗವನ್ನು ಕಲಿಯಲು ಉತ್ತಮವಾದ ಸಮಯವೆಂದು ಪರಿಗಣಿಸಲಾಗುತ್ತದೆ. ಆದರೆ ನಿಮ್ಮ ಮಗಳಿಗೆ ಒಂಭತ್ತು ವರ್ಷವಾಗುವವರೆಗೆ ನೀವು ಕಾದಿದ್ದೀರಿ. ಹಾಗಾಗಿ, ಯೋಗಾಭ್ಯಾಸ ಪ್ರಾರಂಭಿಸುವ ಸಮಯ ಬಂದಾಗಿದೆ, ಏಕೆಂದರೆ ಮಕ್ಕಳಿಗೆ ಹತ್ತು ಹಲವು ವಿಷಯಗಳನ್ನು ಪರಿಚಯಿಸುವುದು ಮತ್ತು ಅವರು ಆ ವಿಷಯಗಳ ಕುರಿತಾಗಿ ಬುದ್ಧಿವಂತ ಆಯ್ಕೆಗಳನ್ನು ಮಾಡಲು ಸಾಧ್ಯವಾಗುವುದು ಮುಖ್ಯವಾಗಿದೆ. ನೀವು ಮಕ್ಕಳಿಗೆ ಈ ಆಯ್ಕೆಗಳನ್ನು ನೀಡದೇ ಹೋದರೆ, ಅವರು ನೋಡಿರುವ ಕೆಲವೇ ಕೆಲವಾರು ಅಂಶಗಳು ಮಾತ್ರವೇ ಜಗತ್ತಿನಲ್ಲಿರುವುದು ಎಂದು ನಂಬಿಸುವ ಮನವೊಲಿಸುವಿಕೆಗೆ ಒಳಗಾಗುತ್ತಾರೆ. ಅವರ ಆಯ್ಕೆಗಳೇನಿದ್ದರೂ ತಂಪು ಪಾನೀಯಗಳು ಮತ್ತು ಪಿಜ್ಜಾಗಳ ನಡುವೆ ಮಾತ್ರ ಸೀಮಿತವಾಗಿರುತ್ತದೆ. ಮತ್ತೇನಾದರ ಬಗ್ಗೆಯೂ ಇರುವುದಿಲ್ಲ!

ಒಂದು ಮಗುವನ್ನು ತನ್ನ ಬಾಲ್ಯದಿಂದಲೇ ಸರಿಯಾದ ರೀತಿಯ ವಿಷಯಗಳಿಗೆ ಮತ್ತು ತನ್ನೊಳಗಿನಿಂದ ಕೆಲಸ ಮಾಡುವಂತಹ ವಿಷಯಗಳಿಗೆ ಒಡ್ಡುವುದು ಬಹಳ ಮುಖ್ಯ. ಏಕೆಂದರೆ, ನಮ್ಮ ಸುತ್ತಲಿನ ಜಗತ್ತಿನಲ್ಲಿ ನಾವು ಮಾಡಿಕೊಂಡಿರುವ ವ್ಯವಸ್ಥೆಗಳನ್ನು ಸ್ವಲ್ಪ ಮಟ್ಟಿಗಷ್ಟೇ ನಮಗೆ ನಿರ್ವಹಿಸಲು ಸಾಧ್ಯ. ಎಲ್ಲಿಯವರೆಗೆ ನಿಮ್ಮ ಯೋಗ ಕ್ಷೇಮವು ಬಾಹ್ಯ ಪರಿಸ್ಥಿತಿಯ ಅಡಿಯಾಳಾಗಿರುತ್ತದೆಯೋ, ನಿಮ್ಮ ಯೋಗ ಕ್ಷೇಮವೂ ಒಂದು ಆಕಸ್ಮಿಕದಂತಿರುತ್ತದೆ. ಏಕೆಂದರೆ ಬಾಹ್ಯ ಪರಿಸ್ಥಿತಿಗಳ ಮೇಲೆ ನೂರಕ್ಕೆ ನೂರರಷ್ಟು ನಿಯಂತ್ರಣವನ್ನು ಸಾಧಿಸುವುದು ಯಾರಿಂದಲೂ ಸಾಧ್ಯವಿಲ್ಲ. ಅದಲ್ಲದೆ, ಜನಸಂಖ್ಯೆಯು ಹೆಚ್ಚಾಗುತ್ತಿರುವ ರೀತಿಯನ್ನು ನೋಡಿದರೆ, ಮುಂದಿನ ಪೀಳಿಗೆಯವರು ಯಾವ ತರಹದ ಬಾಹ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆಂದು ನಮಗೆ ತಿಳಿದಿಲ್ಲ. 2050ನೇ ಇಸವಿಯ ಹೊತ್ತಿಗೆ, ಭೂಮಿಯ ಮೇಲಿನ ಜನಸಂಖ್ಯೆ 9.6 ಬಿಲಿಯನ್ ಮುಟ್ಟುತ್ತದೆಯೆಂದು ನಿರೀಕ್ಷಿಸಲಾಗಿದೆ. ಅಲ್ಲಿವರೆಗೆ ನಾನಿರಬೇಕೆಂದು ಬಯಸುವುದಿಲ್ಲ, ಆದರೆ ನಿಮ್ಮ ಮಗಳಿರುತ್ತಾಳೆ. ಹಾಗಾಗಿ ಬದುಕುಳಿಯಲು ಅವಳು ಕೆಲವು ವಿಶೇಷ ಕುಶಲತೆಗಳನ್ನು ಹೊಂದಿರಲೇಬೇಕಾಗುತ್ತದೆ. ಜೀವನ ನಡೆಸುವುದು ಖಂಡಿತವಾಗಿಯೂ ಸುಲಭವಾಗಿರುವುದಿಲ್ಲ.

ನೀವು ಈಗಿರುವ ಜಾಗದಲ್ಲಿ 35 ಪ್ರತಿಶತದಷ್ಟು ಹೆಚ್ಚು ಜನರಿರುವುದನ್ನು ಊಹಿಸಿಕೊಳ್ಳಿ–ಆ ಅನುಭವವನ್ನು ಕಣ್ಣಮುಂದೆ ತಂದುಕೊಳ್ಳಿ. ನೀವು ಜನರ ನಡುವೆ ತುಂಬ ಹತ್ತಿರದಲ್ಲಿ ಕುಳಿತುಕೊಳ್ಳಬೇಕಾಗಿ ಬಂದರೆ, ನಿಮಗೆ ಕಡೇಪಕ್ಷ ಯೋಗವಾದರೂ ಗೊತ್ತಿರಬೇಕು ಏಕೆಂದರೆ ನಿಮ್ಮನ್ನು ನೀವು ಹೇಗೆ ಬೇಕಾದರೂ ಹಾಗೆ ತಿರುಚಿಕೊಂಡು ಯಾವ ಭಂಗಿಯಲ್ಲಾದರೂ ಆರಾಮವಾಗಿ ಕುಳಿತುಕೊಳ್ಳಬಹುದು! ಭಂಗಿಗಳ ಬಗ್ಗೆ ಹೆಚ್ಚು ಆಯ್ಕೆಗಳಿರುವುದಿಲ್ಲ ಅಷ್ಟೆ.

ಯೋಗವು ನಮ್ಮ ಶಿಕ್ಷಣ ವ್ಯವಸ್ಥೆಯ ಒಂದು ಭಾಗವಾಗಬೇಕೆಂದು ನಾನು ಆಶಿಸುತ್ತೇನೆ. ಈ ವರ್ಷ, ಈಶಾದ ಅಂತಾರಾಷ್ಟ್ರೀಯ ಯೋಗ ದಿನದ ಚಟುವಟಿಕೆಗಳ ಭಾಗವಾಗಿ, ಭಾರತದಲ್ಲಿನ 25,000 ಶಾಲೆಗಳ 30 ದಶಲಕ್ಷ ಮಕ್ಕಳಿಗೆ ಸರಳ ಮತ್ತು ಶಕ್ತಿಯುತವಾದ ಯೋಗಾಭ್ಯಾಸಗಳನ್ನು ಹೇಳಿಕೊಡುವ ಉಪಕ್ರಮಗಳನ್ನು ನಾವು ಪ್ರಾರಂಭಿಸಿದ್ದೇವೆ.

ಮಕ್ಕಳು ಯಾವ ರೀತಿಯ ಯೋಗ ಕಲಿಯಬೇಕು?

ಆರು ಅಥವಾ ಏಳು ವರ್ಷ ಮೇಲ್ಪಟ್ಟ ಮಕ್ಕಳು ಮಾಡಬಹುದಾದ ಯೋಗದ ಸರಳ ಪ್ರಕಾರಗಳಿವೆ. ಆದರೆ ಕೆಲವು ಯೋಗಾಭ್ಯಾಸಗಳನ್ನು ಮಕ್ಕಳಿಗೆ ಕಲಿಸದೇ ಇರುವುದು ತುಂಬ ಮುಖ್ಯ. ಕೆಲವು ಕಡೆಗಳಲ್ಲಿ ಮಕ್ಕಳಿಗೆ ಪದ್ಮಾಸನವನ್ನು ಹೇಳಿಕೊಡುವುದನ್ನು ನಾನು ನೋಡಿದ್ದೇನೆ. ಇದನ್ನು ಮಾಡಬಾರದು. ಮೂಳೆಗಳು ಬೆಳೆಯುವ ಹಂತದಲ್ಲಿದ್ದು, ಇನ್ನೂ ಮೆತ್ತಗಿರುವಾಗ, ಅವರ ಅಸ್ಥಿಪಂಜರದ ವ್ಯವಸ್ಥೆಯ ಮೇಲೆ ನಿರ್ದಿಷ್ಟವಾದ ಒತ್ತಡವನ್ನು ಹಾಕುವಂತಹ ಆಸನಗಳಲ್ಲಿ ಕುಳಿತುಕೊಳ್ಳುವುದರಿಂದ ಅದು ಅವರ ಮೂಳೆಗಳನ್ನು ವಕ್ರವಾಗುವಂತೆ ಮಾಡಬಹುದು.

ಯೋಗವನ್ನು ಪ್ರಸರಣ ಮಾಡುವ ಜನರಿಗೆ ಒಂದು ಮಗುವಿಗೆ ಸೂಕ್ತವಾದದ್ದೇನು ಎಂದು ತಿಳಿದಿರಬೇಕು. ಪ್ರತಿ ವ್ಯಕ್ತಿಯ ಅಗತ್ಯತೆ ಹಾಗೂ ಸನ್ನಿವೇಶಗಳಿಗೆ ತಕ್ಕಂತೆ ಯೋಗವನ್ನು ಕಲಿಸಲಾಗುತ್ತದೆ. ವಯಸ್ಕರಿಗೆ ಕಲಿಸುವುದೆಲ್ಲವನ್ನೂ ಮಕ್ಕಳಿಗೆ ಹೇಳಿ ಕೊಡಬಾರದು. ವಯಸ್ಕರಲ್ಲಿಯೂ ನೀವು ಸಂಸಾರಸ್ಥರಾಗಿದ್ದರೆ, ನಿಮಗೆ ಒಂದು ರೀತಿಯ ಯೋಗವನ್ನು ನಾವು ಕಲಿಸುತ್ತೇವೆ. ಸನ್ಯಾಸಿಗಳು ಯೋಗವನ್ನು ಸಂಪೂರ್ಣವಾಗಿ ಬೇರೆಯದ್ದೇ ರೀತಿಯಲ್ಲಿ ಕಲಿಯುತ್ತಾರೆ. ನೀವು ಎಲ್ಲರಿಗೂ ಒಂದೇ ರೀತಿಯ ಯೋಗವನ್ನು ಕಲಿಸದಿರುವುದು ಬಹಳ ಮುಖ್ಯ.

> “ಒಂದು ಮಗುವನ್ನು ತನ್ನ ಬಾಲ್ಯದಿಂದಲೇ ಸರಿಯಾದ ರೀತಿಯ ವಿಷಯಗಳಿಗೆ ಮತ್ತು ತನ್ನೊಳಗಿನಿಂದ ಕೆಲಸ ಮಾಡುವಂತಹ ವಿಷಯಗಳಿಗೆ ಒಡ್ಡುವುದು ಬಹಳ ಮುಖ್ಯ. ಏಕೆಂದರೆ, ನಮ್ಮ ಸುತ್ತಲಿನ ಜಗತ್ತಿನಲ್ಲಿ ನಾವು ಮಾಡಿಕೊಂಡಿರುವ ವ್ಯವಸ್ಥೆಗಳನ್ನು ಸ್ವಲ್ಪ ಮಟ್ಟಿಗಷ್ಟೇ ನಮಗೆ ನಿರ್ವಹಿಸಲು ಸಾಧ್ಯ.”

ಮಕ್ಕಳಿಗೆ ಯೋಗವನ್ನು ಹೇಗೆ ಕಲಿಸಬೇಕು?

ನಾದ ಯೋಗ ಎಂಬ ಯೋಗವಿದೆ. ಇದು ಶಬ್ದಗಳ ಕೌಶಲವನ್ನು ಹೊಂದುವಂತದ್ದಾಗಿದೆ. ಮಗುವಿಗೆ ಯೋಗವನ್ನು ಪರಿಚಯಿಸಲು ಇದೊಂದು ಅತ್ಯಂತ ಸರಳ ಹಾಗೂ ಸೂಕ್ಷ್ಮವಾದ ಮಾರ್ಗ. ಇದು ಅವರ ಯೋಗಕ್ಷೇಮ ಮತ್ತು ದೇಹ ಹಾಗೂ ಮನಸ್ಸಿನ ಸರಿಯಾದ ಬೆಳವಣಿಗೆಗೆ ಎಡೆ ಮಾಡಿಕೊಡುತ್ತದೆ. ಆರು ಅಥವಾ ಏಳು ವರ್ಷ ವಯಸ್ಸಿನಲ್ಲಿಯೇ ಕಲಿಯಬಹುದಾದ 'ಯೋಗ ನಮಸ್ಕಾರ'ದಂತಹ ಅಭ್ಯಾಸಗಳೂ ಇವೆ. ಮಕ್ಕಳು ಮತ್ತು ವಯಸ್ಕರಿಬ್ಬರಿಗೂ ಪ್ರಯೋಜನಕಾರಿಯಾಗಬಲ್ಲ 'ಉಪ–ಯೋಗ; ವಿಧಾನಗಳೂ ಇವೆ.

ಒಂದು ಬಾರಿ ಮಕ್ಕಳು ಈ ಅಭ್ಯಾಸಗಳ ಉಪಯುಕ್ತತೆಯನ್ನು ಕಾಣಲು ಆರಂಭಿಸಿದಾಗ, ಮತ್ತು ಜನಗಳ ಗುಂಪಿನಲ್ಲಿ ಈ ಅಭ್ಯಾಸಗಳು ಅವರನ್ನು ಸಾಮರ್ಥ್ಯದ ದೃಷ್ಟಿಯಿಂದ ಬೇರೆಯ ವರಿಗಿಂತ ಭಿನ್ನವಾಗಿಸಬಹುದು ಎಂದು ಅವರು ಅರ್ಥಮಾಡಿಕೊಂಡಾಗ, ಸಹಜವಾಗಿಯೇ ಅವರು ಯೋಗದ ಹೆಚ್ಚಿನ ಪ್ರಕಾರಗಳನ್ನು ಕಲಿಯಲು ಮುಂದಾಗುತ್ತಾರೆ. ಅವರು ಬೆಳೆದು ದೊಡ್ಡವರಾದಂತೆಯೇ, ಅವರ ಯೋಗವೂ ಬೆಳೆಯುತ್ತ ಹೋಗಬೇಕು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ನಾವು ಸಾಯಿಸಿಕೊಳ್ಳಲು ಬಂದವರಲ್ಲ; ಬದುಕಲು ಬಂದವರು..!

ಇತ್ತೀಚಿಗೆ ಪತ್ರಿಕೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಬಗ್ಗೆ ಹೆಚ್ಚು ವರದಿಗಳು ಬರುತ್ತಿವೆ. ಅಂತಹುದಕ್ಕೆ ಸಾಮಾನ್ಯವಾಗಿ ಎರಡು ಕಾರಣಗಳನ್ನು ಗುರುತಿಸಬಹುದು. ಮೊದಲನೆಯದು ಹಣಕಾಸಿನ ವ್ಯವಹಾರ. ಎರಡನೆಯದು ತಾನಾಗೇ ಮಾಡಿಕೊಂಡ ತಪ್ಪು ಹಾಗೂ ಅದಕ್ಕೆ ಪರಿಹಾರ ಕಾಣದೆ ಸಾವೇ ಸರಿ ಎಂದು ತೀರ್ಮಾನ ಕೈಗೊಂಡಂತಹುದು. ಅಂತಹವರಿಗೆ ಪ್ರಶ್ನೆ ಕೇಳಲಾಗದಿದ್ದರೂ, ಇಂತಹುದನ್ನು ಗಮನಿಸಿ ನಮ್ಮ ಕೊನೆಯ ನಿರ್ಧಾರವೂ ಅದಾಗಬಹುದು ಎಂದುಕೊಂಡಂತಹವರಿಗೆ ಈ ಮಾತು ಹೇಳಬೇಕೆನಿಸುತ್ತದೆ. ಜೀವನ ಎನ್ನುವುದು ಒಂದು ರೀತಿ ಪ್ರಯೋಗ ಶಾಲೆ. ಪ್ರಯೋಗ ಎಂದಾಗ ಅಲ್ಲಿ ಸಫಲತೆ ಹಾಗೂ ವಿಫಲತೆ ಎರಡೂ ಇರುವಂತಹುದು. ಒಂದು ಪ್ರಯತ್ನ ವಿಫಲವಾಯಿತು ಎಂದು ಹತಾಶರಾದರೆ ಮತ್ತೆ ಅವರಿಂದ ಹೊಸ ಪ್ರಯತ್ನ ಸಾಧ್ಯವಿಲ್ಲ. ವಿಫಲತೆಗೆ ಏನೋ ತಪ್ಪುಗಳಿರಬಹುದು. ಅದನ್ನು ಕಂಡುಕೊಂಡು ಮುಂದಿನ ಪ್ರಯೋಗದಲ್ಲಿ ಆ ತಪ್ಪು ನುಸುಳದಂತೆ ಪ್ರಯತ್ನಿಸುತ್ತೇನೆ ಎಂಬ ಮನೋಬಲವಿದ್ದವರು ಮಾತ್ರ ಮುಂದೆ ನಡೆಸುವ ಪ್ರಯತ್ನಗಳಲ್ಲಿ ಸಫಲರಾಗುತ್ತಾರೆ.

ಥಾಮಸ್ ಆಲ್ವಾ ಎಡಿಸನ್ ವಿದ್ಯುತ್ ಬಲ್ಬ್ ಕಂಡುಹಿಡಿದದ್ದು ನಮಗೆ ಗೊತ್ತೇ ಇದೆ. ಅದು ಪ್ರಪಂಚದಲ್ಲಿ ಎಂತಹ ಕ್ರಾಂತಿ ಮಾಡಿತು ಎಂದರೆ, ಇಂದಿಗೂ ಪ್ರಪಂಚ ಅದರ ಉಪಯೋಗ ಪಡೆದುಕೊಳ್ಳುತ್ತಿದೆ. ಹಾಗೆಂದು ಎಡಿಸನ್ ಒಂದೇ ಪ್ರಯೋಗದಲ್ಲಿ ಇದನ್ನು ಸಾಧಿಸಲಿಲ್ಲ. ಹಲವಾರು ಪ್ರಯೋಗಗಳನ್ನು ಮಾಡಿದ, ಬಹುತೇಕ ವಿಫಲಾವಾದವು. ಆದರೆ ಆತನ ಮನಸ್ಸಿನಲ್ಲಿ ತಾನು ಸಾಧಿಸಲೇಬೇಕು ಎಂಬ ಅದಮ್ಯ ಉತ್ಸಾಹವಿತ್ತು. ತನ್ನ ಕನಸು ಏನು ಎಂಬುದೂ ಅವನಿಗೆ ಗೊತ್ತಿತ್ತು. ನೂರಾರು ವಿಫಲತೆಯ ನಂತರ ಆತ ಸಫಲನಾದ. ಒಂದೆರಡು ಪ್ರಯೋಗ ವಿಫಲವಾಯಿತು ಎಂದು ಆತ ಕೈಕಟ್ಟಿ ಕುಳಿತಿದ್ದರೆ ಇಂದು ನಾವು ಆತನನ್ನು ನೆನಪಿಸಿಕೊಳ್ಳುತ್ತಲೇ ಇರಲಿಲ್ಲ. ಆತ ಬಲ್ಬ್ ಕಂಡುಹಿಡಿದ ನಂತರವೂ ತನ್ನ ಸಿಬ್ಬಂದಿ ಮಾಡಿದ ಲೋಪದಿಂದ ಕಂಡುಹಿಡಿದ ಬಲ್ಬ್ ಒಡೆದರೂ ಎಡಿಸನ್ ಕೋಪಿಸಿಕೊಳ್ಳಲಿಲ್ಲ. ತಾನು ಈ ಹಿಂದೆ ಹಲವಾರು ಪ್ರಯೋಗ ಮಾಡಿದಾಗ ಆಗಿದ್ದ ಲೋಪದಂತೆ ಇದೂ ಒಂದು ಎಂದೇ ಆತ ಭಾವಿಸಿದ. ಮತ್ತೆ ತನ್ನ ಪ್ರಯತ್ನ ಮುಂದುವರೆಸಿ, ಮತ್ತೊಂದು ಬಲ್ಬ್ ತಯಾರಿಸಿದ. ಮತ್ತೆ ಅದನ್ನು ಪರೀಕ್ಷಿಸಬೇಕಾಗಿತ್ತು. ಮತ್ತೆ ಸಹೋದ್ಯೋಗಿಗಳೆಲ್ಲಾ ಸೇರಿದರು. ಈಗ ಎಡಿಸನ್ ಆ ಕೆಲಸವನ್ನು ಮತ್ತೊಬ್ಬ ನಂಬಿಕಸ್ತನಿಗೆ ನೀಡುತ್ತಾನೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಎಡಿಸನ್ ಆ ಬಲ್ಬನ್ನು ಹಿಂದೆ ಅಳವಡಿಸಲು ನೀಡಿದ್ದವನಿಗೇ ನೀಡಿ, ಅದನ್ನು ಹೋಲ್ಡರ್‌ಗೆ ಅಳವಡಿಸಲು ತಿಳಿಸುತ್ತಾನೆ. ಆಗ ಅದನ್ನು ಎಲ್ಲರೂ ಆಕ್ಷೇಪಿಸುತ್ತಾರೆ. ಈ ಹಿಂದಿನಂತೆ ಆತ ಮತ್ತೆ ಅದನ್ನು ಕೆಳಗೆ ಬೀಳಿಸಬಹುದು ಎಂಬ ಆತಂಕ ಎಲ್ಲರಲ್ಲಿಯೂ ಇತ್ತು. ಆದರೆ, ಎಡಿಸನ್ ಶಾಂತನಾಗಿದ್ದ. ಬಲ್ಬ್ ಹಿಡಿದ ವ್ಯಕ್ತಿ ಮತ್ತೆ ತನ್ನಿಂದ ತಪ್ಪಾಗಬಾರದು ಎಂದು ಬಹಳ ಎಚ್ಚರಿಕೆ ವಹಿಸಿ ಬಲ್ಬನ್ನು ಯಶಸ್ವಿಯಾಗಿ ಹೋಲ್ಡರ್‌ಗೆ ಅಳವಡಿಸಿದ. ಪ್ರಯೋಗ ಯಶಸ್ವಿಯಾಯಿತು. ಎಡಿಸನ್ ವಿಶ್ವವಿಖ್ಯಾತನಾದ. ಆ ಸಮಯದಲ್ಲಿ ಅಲ್ಲಿದ್ದವರು ಎಡಿಸನನ್ನು ಕೇಳಿದ್ದು ಏನೆಂದರೆ, ಮೊದಲ ಸಲ ಬಲ್ಬ್ ಒಡೆದವನಿಗೇ ನೀನು ಮತ್ತೆ ಏಕೆ ಅವಕಾಶ ನೀಡಿದೆ ಎಂದು. ಅದಕ್ಕೆ ಆತ ನೀಡಿದ ಉತ್ತರ ಒಮ್ಮೆ ತಪ್ಪು ಮಾಡಿದವನು ಮತ್ತೆ ಅಂತಹ ತಪ್ಪು ಮಾಡಲಾರ. ಅವನು ಬೇಕೆಂದೇ ಮೊದಲಿನ ಬಲ್ಬನ್ನು ಒಡೆದಿರಲಿಲ್ಲ. ನಾನು ಈ ಕೆಲಸವನ್ನು ಬೇರೆಯವರಿಗೆ ನೀಡಿದ್ದರೆ, ಆತ ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದ. ಅವನಲ್ಲಿನ ಆತ್ಮವಿಶ್ವಾಸ ಮರೆಯಾಗುತ್ತಿತ್ತು, ತಾನೊಬ್ಬ ನಿಷ್ಪ್ರಯೋಜಕ ಎಂಬ ಮನಸ್ಥಿತಿ ಅವನಲ್ಲಿ ಬರುತ್ತಿತ್ತು ಅದರ ಪರಿಣಾಮ ಘೋರವಾಗಿರುತ್ತಿತ್ತು. ಹಾಗಾಗೇ ಆ ಕೆಲಸವನ್ನು ಮತ್ತೆ ಅವನಿಗೆ ನೀಡಿದೆ ಎಂದು ಹೇಳಿದ್ದನು.

ಈ ಕಥೆ ನಮಗೆ ಬಹುದೊಡ್ಡ ಪಾಠ. ಸಾಮಾನ್ಯವಾಗಿ ಒಮ್ಮೆ ತಪ್ಪು ಮಾಡಿದವನು ಅದು ತಪ್ಪು ಎಂದು ತಿಳಿದ ನಂತರ ಅದೇ ತಪ್ಪನ್ನು ಮಾಡಲಾರ. ಅವನು ಮೊದಲು ಮಾಡಿದ ತಪ್ಪನ್ನು ಸರಿಪಡಿಸಿಕೊಳ್ಳುವ ಮನಸ್ಸು ಮಾಡದಿದ್ದರೆ, ಅವನ ಮನಸ್ಸು ದುರ್ಬಲವಾಗುತ್ತದೆ. ತಾನು ಯಾವುದಕ್ಕೂ ಪ್ರಯೋಜನವಿಲ್ಲ. ಹಾಗಾಗಿ ನಾನು ಬದುಕುವುದರಲ್ಲಿ ಅರ್ಥವಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾನೆ.



> “ಪ್ರತಿ ಸಮಸ್ಯೆಗೆ ಒಂದು ಪರಿಹಾರ ಇದ್ದೇ ಇರುತ್ತದೆ. ಅದನ್ನು ನಾವೇ ಕಂಡು ಕೊಳ್ಳಬೇಕಾಗುತ್ತದೆ. ಅದು ತಾನಾಗೇ ಸಿಗುವ ಸರಳ ಸೂತ್ರವಲ್ಲ. ಅದಕ್ಕಾಗಿ ಅವಲೋಕನ ಮಾಡಿಕೊಳ್ಳಬೇಕು. ಮಾಡಿದ ತಪ್ಪು ಯಾವುದು ಎಂಬುದನ್ನು ಕಂಡುಕೊಂಡು ಮತ್ತೆ ಅಂತಹ ತಪ್ಪಾಗದಂತೆ ಎಚ್ಚರವಹಿಸಿ ಮುನ್ನಡೆದರೆ ಆತ ಹಿಂದಿನ ತಪ್ಪಿನಿಂದ ಹೊರಬರಬಹುದು. ಅದನ್ನು ಬಿಟ್ಟು ನನ್ನಿಂದ ತಪ್ಪಾಗಿದೆ ಎಂಬ ಕೊರಗು ಬೆಳೆಸಿಕೊಂಡು ಆತ್ಮಹತ್ಯೆಗೆ ಶರಣಾದರೆ ಅಲ್ಲಿಗೆ ಅವನ ಜೀವನ ವ್ಯರ್ಥವಾಗಿ ಮುಕ್ತಾಯವಾಗುತ್ತದೆ.

ನಮ್ಮೆಲ್ಲರಿಗೂ ತಿಳಿದಂತೆ ಪ್ರತಿ ಸಮಸ್ಯೆಗೆ ಒಂದು ಪರಿಹಾರ ಇದ್ದೇ ಇರುತ್ತದೆ. ಅದನ್ನು ನಾವೇ ಕಂಡುಕೊಳ್ಳಬೇಕಾಗುತ್ತದೆ. ಅದು ತಾನಾಗೇ ಸಿಗುವ ಸರಳ ಸೂತ್ರವಲ್ಲ. ಅದಕ್ಕಾಗಿ ಅವಲೋಕನ ಮಾಡಿಕೊಳ್ಳಬೇಕು. ಮಾಡಿದ ತಪ್ಪು ಯಾವುದು ಎಂಬುದನ್ನು ಕಂಡುಕೊಂಡು ಮತ್ತೆ ಅಂತಹ ತಪ್ಪಾಗದಂತೆ ಎಚ್ಚರವಹಿಸಿ ಮುನ್ನಡೆದರೆ ಆತ ಹಿಂದಿನ ತಪ್ಪಿನಿಂದ ಹೊರಬರಬಹುದು. ಅದನ್ನು ಬಿಟ್ಟು ನನ್ನಿಂದ ತಪ್ಪಾಗಿದೆ ಎಂದು ಕೊರಗುತ್ತಾ ಕೂತರೆ ಜೀವನ ವ್ಯರ್ಥವಾಗಿ ಮುಕ್ತಾಯವಾಗುತ್ತದೆ.

ಆತ್ಮಹತ್ಯೆಗೆ ಪ್ರಯತ್ನಿಸುವ ಸಮಯದಲ್ಲಿ ಯಾರಾದರೂ ಮಧ್ಯ ಪ್ರವೇಶಿಸಿದರೆ ಅನಾಹುತ ತಪ್ಪುವ ಸಾಧ್ಯತೆಗಳು ಹೆಚ್ಚಿವೆ. ಇಂತಹ ಸನ್ನಿವೇಶದ ಹಲವು ಚಲನಚಿತ್ರಗಳೂ ಬಂದಿವೆ. ಜೀವನ ಇರುವುದು ಬದುಕುವುದಕ್ಕಾಗಿ, ಅದನ್ನು ಅನಾವಶ್ಯಕವಾಗಿ ಮುಕ್ತಾಯ ಮಾಡಿಕೊಳ್ಳಬಾರದು ಎಂಬ ಏಕಮೇವ ಉದ್ದೇಶ.

ಹಿಂದೆ ಓದಿದ ಒಂದು ಕಥೆಯಲ್ಲಿ ಒಬ್ಬ ವ್ಯಕ್ತಿ ಸಾಯುವ ಸಲುವಾಗಿ ಒಂದು ವಸತಿ ಗೃಹದಲ್ಲಿ ಕೊಠಡಿಯನ್ನು ಬಾಡಿಗೆಗೆ ಪಡೆಯುತ್ತಾನೆ. ಆತನ ಬಗ್ಗೆ ಅಲ್ಲಿನ ರೂಮ್‌ಬಾಯ್‌ಗೆ ಏನೋ ಅನುಮಾನ. ಅದನ್ನು ಅವನಲ್ಲಿ ಕೇಳುತ್ತಾನೆ. ಆರಂಭದಲ್ಲಿ ಏನೂ ಹೇಳಲು ನಿರಾಕರಿಸುವ ಈ ವ್ಯಕ್ತಿ ಕೊನೆಗೆ ತನ್ನ ಕಥೆ ಹೇಳುತ್ತಾನೆ. ಅದನ್ನು ತನ್ಮಯತೆಯಿಂದ ಕೇಳಿದ ಆ ವಾರ್ಡ್‌ಬಾಯ್ ಅವನಿಗೆ ಒಂದು ಪರಿಹಾರ ಸೂಚಿಸಿ, ಈ ಬಗ್ಗೆ ಒಮ್ಮೆ ಪ್ರಯತ್ನಿಸಿ, ನಂತರ ನಿಮ್ಮ ನಿರ್ಧಾರ ನೀವು ಮಾಡಬಹುದು ಎನ್ನುತ್ತಾನೆ. ಅದರಂತೆ ಸಾಯಲು ಹೊರಟಿದ್ದ ವ್ಯಕ್ತಿ ಪ್ರಯತ್ನಿಸಿ ಸಫಲನಾಗುತ್ತಾನೆ. ಆಗ ಅವನು ಅಂದುಕೊಳ್ಳುವುದು ಇದನ್ನೇ, ನಾನು ನನ್ನ ಸಮಸ್ಯೆಗೆ ಯಾವುದೇ ಪರಿಹಾರವಿಲ್ಲ ಎಂದುಕೊಂಡಿದ್ದೆ, ಆದರೆ ಅದಕ್ಕೆ ಪರಿಹಾರವನ್ನು ಈ ಹುಡುಗ ನೀಡಿದ. ಆತನಿಗೆ ತಾನು ಯಾವಾಗಲೂ ಕೃತಜ್ಞನಾಗಿರುತ್ತೇನೆ ಎಂದು.

ಇಲ್ಲೆಲ್ಲಾ ನಾವು ಗಮನಿಸಬೇಕಾದದ್ದು ಆತ್ಮಹತ್ಯೆ ಸಮಸ್ಯೆಗೆ ಪರಿಹಾರವಲ್ಲ. ಬದಲಾಗಿ ನಾನು ಬದುಕುತ್ತೇನೆ, ನಾನು ಹುಟ್ಟಿರುವುದು ಹೀಗೆ ಸಾಯುವುದಕ್ಕಲ್ಲ ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ವಿಜಾಪುರದ ಗೋಲ್‌ಗುಂಬಜ್‌ನ ಒಳಗೆ ನಿಂತು ನಾವು ಏನು ಹೇಳಿದರೂ ಅದೇ ಅಲ್ಲಿ ಮಾರ್ದನಿಸುತ್ತದೆ. ನಾನು ಸಾಯುತ್ತೇನೆ ಎಂದರೆ ಹಲವು ಪಟ್ಟು ನಾನು ಸಾಯುತ್ತೇನೆ ಎಂದೇ ಕೇಳಿಸುತ್ತದೆ. ಹಾಗೆಯೇ ನಾನು ಬದುಕುತ್ತೇನೆ, ಚೆನ್ನಾಗಿಯೇ ಬದುಕುತ್ತೇನೆ ಎಂದರೆ ಅದನ್ನೇ ಹಲವು ಬಾರಿ ಪ್ರತಿಧ್ವನಿಸುತ್ತದೆ. ಹಾಗೆಯೇ ನಾವು ಬದುಕುತ್ತೇವೆ ಎಂಬ ದೃಢನಿರ್ಧಾರ ಮಾಡಿದಾಗ ಅದಕ್ಕೆ ತಕ್ಕಂತಹ ದಾರಿ ನಮಗೆ ಗೋಚರಿಸುತ್ತದೆ.

ಪರೀಕ್ಷಾ ಫಲಿತಾಂಶ ಪ್ರಕಟವಾದಾಗ ನಪಾಸಾದ ಮಕ್ಕಳು ಪ್ರಾಣ ಕಳೆದುಕೊಂಡ ಹಲವು ಪ್ರಕರಣಗಳು ವರದಿಯಾಗುತ್ತವೆ. ಆದರೆ ಜೀವನದಲ್ಲಿ ಇಂತಹ ಹಲವಾರು ಪರೀಕ್ಷೆಗಳು ನಮಗೆ ಬರುತ್ತವೆ. ಒಂದಿಲ್ಲದಿದ್ದರೆ ಮತ್ತೆ ಪ್ರಯತ್ನ ಮಾಡಿ ಸಫಲತೆ ಕಾಣಬಹುದು. ಇದನ್ನು ಅಂತಹ ಮಕ್ಕಳ ಗಮನಕ್ಕೆ ತರಬೇಕು. ಮಾನಸಿಕವಾಗಿ ದುರ್ಬಲರಾಗಿರುವವರೇ ಇಂತಹ ಕೆಲಸಕ್ಕೆ ಕೈಹಾಕುವುದು. ನಾವು ಮಾನಸಿಕವಾಗಿ ಗಟ್ಟಿಯಾಗಬೇಕು.

ಸಾಮಾನ್ಯವಾಗಿ ತಪ್ಪುಗಳನ್ನು ನಾವೇ ಮಾಡಿಕೊಂಡಿರುತ್ತೇವೆ. ತಪ್ಪಿನ ಆರಂಭವೂ ನಮಗೆ ಗೊತ್ತಾಗುತ್ತದೆ. ಅದನ್ನು ಅಲ್ಲಿಯೇ ಮೊಟಕುಗೊಳಿಸಿದಾಗ ತಪ್ಪನ್ನು ಸರಿಪಡಿಸಿಕೊಳ್ಳಬಹುದು. ಅದನ್ನು ಉಡಾಫೆಯಾಗಿ ನೋಡಿದರೆ ಮುಂದೆ ಅದು ಬೆಳೆದು ಹೆಮ್ಮರವಾಗುತ್ತದೆ. ಇಂತಹುದಕ್ಕೆ ಪರಿಹಾರ ಎಂದರೆ ನಾವು ಆತ್ಮೀಯರಾದಂತಹ ಸ್ನೇಹಿತರನ್ನು ಪಡೆದುಕೊಳ್ಳಬೇಕು. ಇಂತಹ ಸ್ನೇಹಕ್ಕೆ ಬಡವ, ಶ್ರೀಮಂತ ಎಂಬುದು ಇರುವುದಿಲ್ಲ. ನಮ್ಮ ಸಮಸ್ಯೆ ಉಲ್ಬಣಿಸುವುದು. ನಾವು ನಮ್ಮ ಸಮಸ್ಯೆಯನ್ನು ಇತರರ ಜೊತೆಗೆ ಹಂಚಿಕೊಳ್ಳದಿರುವುದೇ ಕಾರಣವಾಗಿರುತ್ತದೆ. ಮನಸ್ಸಿನಲ್ಲಿ ಇರುವುದನ್ನು ಹೇಳಿಕೊಂಡಾಗ, ಹೇಳಿಕೊಳ್ಳುವಾಗಲೇ ನಮ್ಮ ಸಮಸ್ಯೆಗೆ ಪರಿಹಾರ ಕಂಡುಬರಬಹುದು ಅಥವಾ ನಮ್ಮ ಮಾತನ್ನು ಸಹಾನುಭೂತಿಯಿಂದ ಕೇಳಿಸಿಕೊಂಡವರು ನಮ್ಮ ಸಮಸ್ಯೆಗೆ ಪರಿಹಾರ ಹೇಳಬಹುದು. ನಾವು ಯಾರಲ್ಲೂ ಹೇಳದಿದ್ದರೆ ನಮ್ಮ ಸಮಸ್ಯೆ ಬಹಳ ದೊಡ್ಡದಾಗಿ ನಮ್ಮನ್ನು ಕಾಡಬಹುದು. ಆದ್ದರಿಂದ ಆತ್ಮೀಯತೆ ಇರುವಂತಹ ಸ್ನೇಹಿತರನ್ನು ಸಂಪಾದಿಸಬೇಕು. ಅವರು ಕೇವಲ ನಮ್ಮ ಸಹಾಯಕ್ಕೆ ಮಾತ್ರ ಬರಬೇಕು ಎಂದೇನೂ ಇಲ್ಲ, ನಾವೂ ಅವರ ಸಹಾಯಕ್ಕೆ ಹೋದಾಗ ಸ್ನೇಹ ಆತ್ಮೀಯವಾಗುತ್ತದೆ.

ನಮ್ಮ ಬಹುತೇಕ ಸಮಸ್ಯೆಗಳಿಗೆ ಮೂಲ ನಾವು ಇತರರೊಡನೆ ನಮ್ಮನ್ನು ಹೋಲಿಸಿಕೊಳ್ಳುವುದರಿಂದಲೇ ಆಗಿರುತ್ತದೆ. ಅವರು ಹಾಗಿದ್ದಾರೆ, ನಾನು ಹಾಗಿಲ್ಲ ಎಂಬ ಮನೋಭಾವ ಕೊರಗಾಗಿ ಕಾಡುತ್ತದೆ. ನಾವು ನಮ್ಮ ಜೀವನವನ್ನು ರೈಲು ಪ್ರಯಾಣಕ್ಕೆ ಹೋಲಿಸಬಹುದು. ನಾವು ತಲುಪಬೇಕಾದ ಸ್ಥಳಕ್ಕೆ ನಾವು ಹೊರಡುತ್ತೇವೆ. ರೈಲಿನಲ್ಲಿ ಆಗಾಗ್ಗೆ ಬೇರೆಯವರು ಬರುತ್ತಾರೆ, ಕೂರುತ್ತಾರೆ, ಮಾತನಾಡುತ್ತಾರೆ, ಹಾಗೆಯೇ ಅವರ ಸ್ಥಳ ಬಂದಾಗ ಇಳಿದುಹೋಗುತ್ತಾರೆ. ಅವರು ನಮ್ಮೊಡನಿರುವುದು ಕೆಲವು ಸಮಯ ಮಾತ್ರ. ಅವರೊಡನೆ ನಾವು ಹೋಲಿಕೆ ಮಾಡಿಕೊಳ್ಳಬಾರದು. ಅವರು ಬರುವ ಮುಂಚೆ, ಅವರು ಯಾರು ಎಂಬುದು ನಮಗೆ ತಿಳಿಯದು, ಹಾಗೆಯೇ ಅವರು ಇಳಿದು ಹೋದನಂತರವೂ ಅವರು ಮತ್ತೆ ನಮ್ಮನ್ನು ಭೇಟಿಯಾಗದಿರಬಹುದು. ಅಷ್ಟರಲ್ಲಿ ನಾವು ಅವರು ಹಾಗಿದ್ದಾರೆ, ಹೀಗಿದ್ದಾರೆ, ನಾನು ಹಾಗಿಲ್ಲವಲ್ಲ ಎಂದು ಅಂದುಕೊಳ್ಳುವುದು ಸೂಕ್ತವಲ್ಲ. ಹಾಗೆ ಬಂದ ಸಹಪ್ರಯಾಣಿಕರೂ ಯಾವುದಾದರೂ ಸಮಸ್ಯೆಯಲ್ಲಿರಬಹುದು. ಆದರೆ ಅದು ನಮಗೆ ಅರ್ಥವಾಗುವುದಿಲ್ಲ. ನಾವು ಯೋಚಿಸಬೇಕಾದದ್ದು ನಾವು ತಲುಪಬೇಕಾದ ಸ್ಥಳದ ಬಗ್ಗೆ, ತಲುಪಿದ ನಂತರ ಮಾಡಬೇಕಾದ ಕೆಲಸದ ಬಗ್ಗೆ, ಈ ರೀತಿಯ ಆಲೋಚನೆ ನಮ್ಮಲ್ಲಿರಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸೆಮಿಫೈನಲ್‌ನಲ್ಲಿ ಆಂಗ್ಲರ ವಿರುದ್ಧ ರೋಚಕ ಜಯ; ನಾಲ್ಕನೇ ಬಾರಿಗೆ

ಫೈನಲ್‌ಗೆ ಟೀಂ ಇಂಡಿಯಾ



ಮಾ.8ರಂದು ಪ್ರಶಸ್ತಿಗಾಗಿ ನ್ಯೂಜಿಲೆಂಡ್ ವಿರುದ್ಧ ಹೋರಾಟ

ಮುಂಬೈ, ಮಾ.5– ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್, ಅಕ್ಷರ್ ಪಟೇಲ್ ಸ್ಪನ್ನಿಂಗ್ ಕ್ಯಾಚ್, ಕೊನೆಯಲ್ಲಿ ಬುಮ್ರಾ ಬೌಲಿಂಗ್ ಕಮಾಲ್‌ನಿಂದಾಗಿ ಭಾರತ ಇಂಗ್ಲೆಂಡ್ ವಿರುದ್ಧ 7 ರನ್‌ಗಳ ರೋಚಕ ಜಯ ಸಾಧಿಸುವ ಮೂಲಕ ಟಿ20 ವಿಶ್ವಕಪ್ ಫೈನಲ್ ಪ್ರವೇಶಿಸಿದೆ.

ಇದರೊಂದಿಗೆ ಸತತ 2ನೇ ಬಾರಿ ಹಾಗೂ ಟಿ20 ವಿಶ್ವಕಪ್ ಇತಿಹಾಸದಲ್ಲಿ 4ನೇ ಬಾರಿಗೆ ಫೈನಲ್ ಪ್ರವೇಶಿಸಿರುವ ಟೀಂ ಇಂಡಿಯಾ ಮಾ.8ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಅಂತಿಮ ಹಣಾಹಣಿಯಲ್ಲಿ ಪ್ರಶಸ್ತಿಗಾಗಿ ನ್ಯೂಜಿಲೆಂಡ್ ವಿರುದ್ಧ ಹೋರಾಡಲಿದೆ.

ಮುಂಬೈನ ವಾಂಖೇಡೆ ಕ್ರೀಡಾಂಗಣದಲ್ಲಿ ನಡೆದ 2ನೇ ಸೆಮಿಫೈನಲ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 253 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ನಂತರ ಗುರಿ ಬೆನ್ನತ್ತಿದ ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 246 ರನ್ ಗಳಿಸಲಷ್ಟೇ ಶಕ್ತವಾಯಿತು.

ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ ಕೇವಲ 9 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಈ ವೇಳೆ ಇಶಾನ್ ಕಿಶನ್ ಅವರನ್ನು ಸೇರಿಕೊಂಡ ಸಂಜು ಸ್ಯಾಮ್ಸನ್ 2ನೇ ವಿಕೆಟ್‌ಗೆ 97 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಕೇವಲ 8.3 ಓವರ್‌ಗಳಲ್ಲಿ ತಂಡದ ಮೊತ್ತವನ್ನು 100ರ ಗಡಿ ದಾಟಿಸಿದ ಈ ಜೋಡಿ ಬೃಹತ್ ಮೊತ್ತಕ್ಕೆ ಅಡಿಪಾಯ ಹಾಕಿಕೊಟ್ಟರು. ಆದರೆ 18 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 39 ರನ್ ಗಳಿಸಿದ್ದ ಇಶಾನ್ ಕಿಶನ್ ವಿಕೆಟ್ ಒಪ್ಪಿಸಿದರು. ಈ ವೇಳೆ ಬಂದ ಶಿವಂ ದುಬೆ ಸಂಜು ಸ್ಯಾಮ್ಸನ್‌ಗೆ ಉತ್ತಮ ಸಾಥ್ ನೀಡಿದರು. ಆದರೆ ಸಿಕ್ಕ ಜೀವದಾನ ಸದುಪಯೋಗಪಡಿಸಿಕೊಂಡ ಸ್ಯಾಮ್ಸನ್ 42 ಎಸೆತಗಳಲ್ಲಿ 7 ಸಿಕ್ಸರ್, 8 ಬೌಂಡರಿ ಒಳಗೊಂಡ 89 ರನ್ ಗಳಿಸಿ ನಿರ್ಗಮಿಸಿದರು. ಇನ್ನೊಂದು ಬದಿಯಲ್ಲಿ ಅಬ್ಬರಿಸಿದ ದುಬೆ 4 ಸಿಕ್ಸರ್, 1 ಬೌಂಡರಿ ಒಲಗೊಂಡ 43 ರನ್ ಗಳಿಸಿ ರನೌಟ್ ಆದರು. ನಾಯಕ ಸೂರ್ಯಕುಮಾರ್ ಯಾದವ್ 11 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಹಾರ್ದಿಕ್ ಪಾಂಡ್ಯ 12 ಎಸೆತಗಳಲ್ಲಿ 2 ಸಿಕ್ಸರ್, 3 ಬೌಂಡರಿ ಒಳಗೊಂಡ 27, ತಿಲಕ್ ವರ್ಮಾ 7 ಎಸೆತಗಳಲ್ಲಿ 3 ಸಿಕ್ಸರ್ ಒಳಗೊಂಡ ಮಿಂಚಿನ 21 ರನ್ ಗಳಿಸಿ ನಿರ್ಗಮಿಸಿದರು. ಇಂಗ್ಲೆಂಡ್ ಪರ ವಿಲ್ ಜಾಕ್ಸ್, ಆದೀಲ್ ರಶೀದ್ ತಲಾ 2, ಜೋಫ್ರಾ ಅರ್ಚರ್ 1 ವಿಕೆಟ್ ಉರುಳಿಸಿದರು.

ಭಾರತ ನೀಡಿದ 254 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ ಪರ ಫಿಲ್ ಸಾಲ್ಟ್ 5, ನಾಯಕ ಹ್ಯಾರಿ ಬ್ರೂಕ್ 7 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಒಂದು ಹಂತದಲ್ಲಿ 95 ರನ್‌ಗೆ 4 ವಿಕೆಟ್ ಕಳೆದುಕೊಂಡರೂ ಬೆಥೆಲ್ ಮತ್ತು ಜ್ಯಾಕ್ಸ್ 5ನೇ ವಿಕೆಟ್‌ಗೆ 39 ಎಸೆತಗಳಲ್ಲಿ 77 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 20 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 35 ರನ್ ಗಳಿಸಿ ಔಟಾದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಏಕಾಂಗಿಯಾಗಿ ಹೋರಾಟ ನಡೆಸಿದ ಬೆಥೆಲ್ ಶತಕ ಸಿಡಿಸಿ ಸಂಭ್ರಮಿಸಿದರು.

ಕೊನೆಯ 3 ಮೂರು ಓವರ್‌ನಲ್ಲಿ ಇಂಗ್ಲೆಂಡ್ ಗೆಲುವಿಗೆ 45 ರನ್ ಬೇಕಿತ್ತು. 18ನೇ ಓವರ್ ಎಸೆದ ಬುಮ್ರಾ 6 ರನ್ ನೀಡಿದರೆ, 19ನೇ ಓವರ್ ಎಸೆದ ಪಾಂಡ್ಯ 9 ರನ್ ನೀಡಿ ಸ್ಯಾಮ್ ಕರ್‌ನ್ ಅವರ ವಿಕೆಟ್ ಪಡೆದರು. ಅಂತಿಮವಾಗಿ ಇಂಗ್ಲೆಂಡ್ ಗೆಲುವಿಗೆ 30 ರನ್ ಅಗತ್ಯವಿತ್ತು. ಕೊನೆಯ ಓವರ್ ಎಸೆದ ಶಿವಂ ದುಬೆಯ ಮೊದಲ ಎಸೆತವನ್ನು ಬೆಥೆಲ್ ಲಾಂಗ್ ಆಫ್ ಕಡೆಗೆ ಹೊಡೆದು ಎರಡು ರನ್ ಓಡಲು ಮುಂದಾದರು. ಈ ವೇಳೆ ಉತ್ತಮ ಫೀಲ್ಡಿಂಗ್ ಮಾಡಿದ ಪಾಂಡ್ಯ ನೇರವಾಗಿ ವಿಕೆಟ್ ಕೀಪರ್ ಕಡೆಗೆ ಥ್ರೋ ಮಾಡಿದರು. ಪರಿಣಾಮ 48 ಎಸೆತಗಳಲ್ಲಿ 7 ಸಿಕ್ಸರ್, 8 ಬೌಂಡರಿ ಒಳಗೊಂಡ 48 ರನ್ ಗಳಿಸಿದ್ದ ಬೆಥೆಲ್ ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ಜೋಫ್ರಾ ಆರ್ಚರ್ 3 ಸಿಕ್ಸರ್ ಹೊಡೆ ದರಾದರೂ ಟೀಂ ಇಂಡಿಯಾ 7 ರನ್ ಗಳಿಂದ ಪಂದ್ಯ ಗೆದ್ದು ಸತತ 2ನೇ ಬಾರಿಗೆ ಫೈನಲ್‌ಗೆ ಲಗ್ಗೆ ಹಾಕಿತು. ಭಾರತದ ಪರ ಹಾರ್ದಿಕ್ ಪಾಂಡ್ಯ 2, ಅರ್ಶ ದೀಪ್ ಸಿಂಗ್, ಬೂಮ್ರಾ, ವರುಣ್ ಚಕ್ರವರ್ತಿ, ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ಸಂಜು ಸ್ಯಾಮ್ಸನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸೆಮಿ ಫೈನಲ್‌ನಲ್ಲಿ ಅತೀ ಹೆಚ್ಚು ರನ್

ಕೊಹ್ಲಿ ದಾಖಲೆ ಸರಿಗಟ್ಟಿದ ಸಂಜು ಸ್ಯಾಮ್ಸನ್

ಮುಂಬೈ, ಮಾ.4– ಟಿ20 ವಿಶ್ವಕಪ್‌ನಲ್ಲಿ ಸಂಜು ಸಂಜು ಸ್ಯಾಮ್ಸನ್ ಅವರು ಕಿಂಗ್ ಕೊಹ್ಲಿ ದಾಖಲೆ ಸರಿಗಟ್ಟಿದ್ದಾರೆ. ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಸೆಮಿ ಫೈನಲ್ ಪಂದ್ಯದಲ್ಲಿ 89 ರನ್ ಗಳಿಸುವ ಮೂಲಕ 2016ರಲ್ಲಿ ವಿರಾಟ್ ಕೊಹ್ಲಿ 89 ರನ್ ಹೊಡೆದಿದ್ದನ್ನು ಸರಿಗಟ್ಟಿದರು.


ಇನ್ನು ಸೆಮಿ ಫೈನಲ್‌ನಲ್ಲಿ ಅತಿ ಹೆಚ್ಚು ರನ್ ಹೊಡೆದವರ ಪಟ್ಟಿಯಲ್ಲಿ ನ್ಯೂಜಿಲೆಂಡ್‌ನ ಫಿನ್ ಅಲೆನ್ 100 ಗಳಿಸಿ ಮೊದಲ ಸ್ಥಾನದಲ್ಲಿದ್ದರೇ, ತಿಲಕರತ್ನೆ ದಿಲ್ಷಾನ್ 96, ವಿರಾಟ್ ಕೊಹ್ಲಿ ಹಾಗೂ ಸಂಜು ಸ್ಯಾಮ್ಸನ್ 89 ರನ್ ಗಳಿಸಿ ನಂತರದ ಸ್ಥಾನದಲ್ಲಿದ್ದಾರೆ.

ಗರಿಷ್ಠ ಸಿಕ್ಸರ್ ದಾಖಲೆ: ಭಾರತ ಇಂಗ್ಲೆಂಡ್ ನಡುವಿನ ಸೆಮಿ ಫೈನಲ್ ಪಂದ್ಯದಲ್ಲಿ ಉಭಯ ತಂಡಗಳಿಂದ ಒಟ್ಟಾರೆ 34 ಸಿಕ್ಸರ್ ಸಿಡಿದಿದ್ದು, ಟಿ20 ವಿಶ್ವಕಪ್ ಇತಿಹಾಸದಲ್ಲೇ ದಾಖಲೆಯಾಗಿದೆ. ಇದಕ್ಕೂ ಮುನ್ನಾ ವೆಸ್ಟ್‌ಇಂಡೀಸ್ ಜಿಂಬಾಬ್ವೆ ನಡುವಿನ ಪಂದ್ಯದಲ್ಲಿ 31 ಸಿಕ್ಸರ್ ಹೊಡೆದಿದ್ದು ದಾಖಲೆಯಾಗಿತ್ತು.

ಆಂಧ್ರದಲ್ಲಿ 2ನೇ ಮಗುವಾದರೆ 25,000 ಪ್ರೋತ್ಸಾಹ ಧನ!

ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಘೋಷಣೆ

ಅಮರಾವತಿ: ಆಂಧ್ರಪ್ರದೇಶದ ತೆಲುಗು ದೇಶಂ ಪಾರ್ಟಿ (TDP) ನೇತೃತ್ವದ ಎನ್‌ಡಿಎ ಸರ್ಕಾರ ಎರಡನೇ ಮಗು ಪಡೆಯುವ ದಂಪತಿಗೆ 25,000 ರೂ. ಪ್ರೋತ್ಸಾಹ ಧನ ನೀಡಲು ಮುಂದಾಗಿದೆ.



ಗುರುವಾರ ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಸಿಎಂ ಚಂದ್ರಬಾಬು ನಾಯ್ಡು, ಫಲವಂತಿಕೆ ದರ, ವಯಸ್ಸಾದ ಜನರು ಮತ್ತು ದಕ್ಷಿಣ ಭಾರತಕ್ಕೆ ಕಡಿಮೆಯಾದ ಸಂಸದೀಯ ಪ್ರಾತಿನಿಧ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿ, ಹೆಚ್ಚಿನ ಮಕ್ಕಳನ್ನು ಹೊಂದುವಂತೆ ಜನರಿಗೆ ಹೇಳಿದರು.

ಬಳಿಕ ಎರಡು ಅಥವಾ ಮೂರನೇ ಮಗು ಹೊಂದುವ ದಂಪತಿಗೆ ಸರ್ಕಾರದಿಂದ 25,000 ಪ್ರೋತ್ಸಾಹ ಧನ ನೀಡಲಾಗುವುದು ಎಂದು ತಿಳಿಸಿದರು. ತಮ್ಮ ಜನಸಂಖ್ಯಾ ನಿರ್ವಹಣಾ ಯೋಜನೆ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆ ತರಲಿದೆ ಎಂದು ತಿಳಿಸಿದರು.

ಪ್ರಸ್ತುತ, ಸುಮಾರು ಶೇ.58 ರಷ್ಟು ಕುಟುಂಬಗಳು ಕೇವಲ ಒಂದು ಮಗುವನ್ನು ಹೊಂದಿವೆ. ಸುಮಾರು 2.17 ಲಕ್ಷ ಕುಟುಂಬಗಳು ಎರಡು ಮಕ್ಕಳನ್ನು ಹೊಂದಿದ್ದು, ಸುಮಾರು 62 ಲಕ್ಷ ಕುಟುಂಬಗಳು ಮೂರು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿದ್ದಾರೆ ಎಂದು ಅವರು ವಿಧಾನಸಭೆಗೆ ವಿವರಿಸಿದರು. ರಾಜ್ಯದಲ್ಲಿ ಪ್ರಸ್ತುತ ಒಟ್ಟು ಫಲವಂತಿಕೆ ದರ ಶೇ. 1.5 ರಷ್ಟಿದ್ದು, ಇದು ನಿಗದಿತ ಮಟ್ಟಕ್ಕಿಂತ ಕಡಿಮೆಯಿದೆ. ಇದನ್ನು ಶೇ.2.1ಕ್ಕೆ ಏರಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದು ಹೇಳಿದರು.

ವಯಸ್ಸಾದ ಜನರಿಂದಾಗಿ ಅನೇಕ ದೇಶಗಳು ವಿವಿಧ ಸವಾಲುಗಳನ್ನು ಎದುರಿಸುತ್ತಿವೆ. ರಾಜ್ಯ ಸರ್ಕಾರ ಮಾರ್ಚ್ ಅಂತ್ಯದ ವೇಳೆಗೆ ಜನಸಂಖ್ಯಾ ನಿರ್ವಹಣೆ ಕುರಿತು ನೀತಿಯನ್ನು ರೂಪಿಸಿ ಏಪ್ರಿಲ್‌ನಿಂದ ಜಾರಿಗೆ ತರಲು ಚಿಂತನೆ ನಡೆಸಿದೆ ಎಂದರು.

ಹಾರ್ಮುಜ್ ಜಲಸಂಧಿ ಬಂದ್; 23 ಸಾವಿರ ಭಾರತೀಯ ನಾವಿಕರಿಗೆ ಸಂಕಷ್ಟ!

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಭೀಕರ ಸಂಘರ್ಷವು ಈಗ ಜಾಗತಿಕ ನೌಕಾಯಾನ ಮತ್ತು ಭಾರತೀಯ ಸೈನಿಕರ ಪಾಲಿಗೆ ಕಂಟಕವಾಗಿ ಪರಿಣಮಿಸಿದೆ. ವಿಶ್ವದ ಪ್ರಮುಖ ತೈಲ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಇರಾನ್ ಬಂದ್ ಮಾಡಿರುವ ಹಿನ್ನೆಲೆಯಲ್ಲಿ, ಅಂದಾಜು 23,000 ಭಾರತೀಯ ನಾವಿಕರು ಗಲ್ಫ್ ಪ್ರದೇಶದಲ್ಲಿ ಸಿಲುಕಿಕೊಂಡಿದ್ದಾರೆ ಎಂಬ ಆತಂಕಕಾರಿ ಮಾಹಿತಿ ಹೊರಬಿದ್ದಿದೆ.



ಇರಾನ್‌ನ ಪರಮಾಣು ಮತ್ತು ಕ್ಷಿಪಣಿ ನೆಲೆಗಳ ಮೇಲೆ ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಈ ಕಠಿಣ ಕ್ರಮ ಕೈಗೊಂಡಿದೆ. ಇದರಿಂದಾಗಿ ಭಾರತದ ಧ್ವಜ ಹೊಂದಿರುವ 36 ಹಡಗುಗಳು ಪರ್ಷಿಯನ್ ಗಲ್ಫ್‌ನಲ್ಲಿ ಸಿಲುಕಿಕೊಂಡಿವೆ. ಇವುಗಳಲ್ಲಿ 7 ಹಡಗುಗಳು ಸರ್ಕಾರಿ ಸ್ವಾಮ್ಯದ 'ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ'ಗೆ ಸೇರಿವೆ. ಈ ಹಡಗುಗಳಲ್ಲಿ ಕಚ್ಚಾ ತೈಲ, ವಾಣಿಜ್ಯ ಸರಕು ಮತ್ತು ಎಲ್‌ಪಿಜಿ ಸಂಗ್ರಹವಿದ್ದು, ಅವುಗಳ ಮುಂದಿನ ಪ್ರಯಾಣ ಅಸಾಧ್ಯವಾಗಿದೆ.

ಈಗಾಗಲೇ ಈ ಸಮುದ್ರ ಪ್ರದೇಶದಲ್ಲಿ ನಡೆಯುತ್ತಿರುವ ಕ್ಷಿಪಣಿ ದಾಳಿಗಳು ಭಾರತೀಯ ನಾವಿಕರ ಪ್ರಾಣಕ್ಕೆ ಸಂಚಕಾರ ತಂದಿವೆ. ಓಮನ್ ಕೊಲ್ಲಿಯಲ್ಲಿ ಸ್ಕೈಲೈಟ್ ಎಂಬ ತೈಲ ಟ್ಯಾಂಕರ್ ಮೇಲೆ ನಡೆದ ದಾಳಿಯಲ್ಲಿ ಭಾರತದ ಆಶಿಶ್ ಕುಮಾರ್ ಮತ್ತು ದಲಿಪ್ ಸಿಂಗ್ ಎಂಬ ಇಬ್ಬರು ನಾವಿಕರು ಸಾವನ್ನಪ್ಪಿದ್ದಾರೆ. ಪ್ರಸ್ತುತ 1,074 ಭಾರತೀಯ ಸಿಬ್ಬಂದಿ ಅಪಾಯಕಾರಿ ಪರ್ಷಿಯನ್ ಗಲ್ಫ್‌ನಲ್ಲಿರುವ ಹಡಗುಗಳಲ್ಲೇ ಉಳಿದುಕೊಂಡಿದ್ದಾರೆ ಎಂದು ವರದಿಯಾಗಿದೆ.

ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಕೇಂದ್ರ ನೌಕಾಯಾನ ಸಚಿವ ಸರ್ಬಾನಂದ ಸೋನೊವಾಲ್ ಅವರು ಮಂಗಳವಾರ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಈ ಹಿಂದೆ ಪ್ರತಿ 6 ಗಂಟೆಗೊಮ್ಮೆ ನಡೆಸಲಾಗುತ್ತಿದ್ದ ಹಡಗುಗಳ ತಪಾಸಣೆಯನ್ನು ಈಗ ಪ್ರತಿ ಗಂಟೆಗೊಮ್ಮೆ ಮಾಡುವಂತೆ ಸೂಚಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ತಕ್ಷಣ ಸ್ಪಂದಿಸಲು ವಿಶೇಷ ತಂಡವನ್ನು ರಚಿಸಲಾಗಿದೆ. ಸಿಲುಕಿರುವ ನಾವಿಕರ ಕುಟುಂಬದವರಿಗಾಗಿ ಪ್ರತ್ಯೇಕ ಸಹಾಯವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸಚಿವಾಲಯವು ಅಂತಾರಾಷ್ಟ್ರೀಯ ಏಜೆನ್ಸಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ನಾವಿಕರ ಸುರಕ್ಷಿತ ವಾಪಸಾತಿಗೆ ಶ್ರಮಿಸುತ್ತಿದೆ. ಭಾರತೀಯ ನೌಕಾಪಡೆಯು ಕೂಡ ಹೈ–ರಿಸ್ಕ್ ವಲಯದಲ್ಲಿ ಕಣ್ಗಾವಲು ಹೆಚ್ಚಿಸಿದ್ದು, ಸಿಲುಕಿರುವ ನಾವಿಕರನ್ನು ಸುರಕ್ಷಿತವಾಗಿ ಹೊರತರಲು ರಾಜತಾಂತ್ರಿಕ ಹಂತದಲ್ಲಿ ಪ್ರಯತ್ನಗಳು ಮುಂದುವರಿದಿವೆ ಎಂದು ವರದಿ ಉಲ್ಲೇಖಿಸಿದೆ.

ಬಿಹಾರ ಸಿಎಂ ನಿತೀಶ್ ಕುಮಾರ್ ರಾಜ್ಯಸಭೆಗೆ ನಾಮಪತ್ರ ಸಲ್ಲಿಕೆ

ನಿತೀಶ್ ಮುಖ್ಯಮಂತ್ರಿ 'ಅವಧಿ ಅದ್ಭುತ': ಅಮಿತ್ ಶಾ

ನವದೆಹಲಿ, ಮಾ.5– ಜನತಾದಳ(ಸಂಯುಕ್ತ) ಮುಖ್ಯಸ್ಥ ನಿತೀಶ್ ಕುಮಾರ್ ಅವರ ಬಿಹಾರ ಮುಖ್ಯಮಂತ್ರಿ ಅವಧಿಯನ್ನು ರಾಜ್ಯದ ಇತಿಹಾಸದಲ್ಲಿ 'ಸುವರ್ಣ ಅಧ್ಯಾಯ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶ್ಲಾಘಿಸಿದ್ದಾರೆ. ಅಲ್ಲದೆ ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಮೂಲಕ ಅವರು ರಾಷ್ಟ್ರೀಯ ರಾಜಕೀಯಕ್ಕೆ ಮರಳುತ್ತಿರುವುದನ್ನು ಸ್ವಾಗತಿಸಿದ್ದಾರೆ.



ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರ ಅವಧಿ 'ಅದ್ಭುತ' ಎಂದ ಅಮಿತ್ ಶಾ, ಈ ಅವಧಿಯಲ್ಲಿ ಅವರು ಬಿಹಾರದ ಪ್ರಗತಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ ಎಂದು ಒತ್ತಿ ಹೇಳಿದ್ದಾರೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಇಂದು ರಾಜ್ಯಸಭಾ ಸದಸ್ಯತ್ವಕ್ಕಾಗಿ ನಾಮಪತ್ರ ಸಲ್ಲಿಸಿದ್ದಾರೆ. ಇದರೊಂದಿಗೆ, ದೀರ್ಘ ಅಂತರದ ನಂತರ, ಅವರು ಮತ್ತೊಮ್ಮೆ ರಾಜ್ಯಸಭಾ ಸದಸ್ಯರಾಗಿ ರಾಷ್ಟ್ರ ರಾಜಕಾರಣಕ್ಕಾಗಿ ಪ್ರವೇಶಿಸಲಿದ್ದಾರೆ. ನಿತೀಶ್ ಕುಮಾರ್ 2005 ರಿಂದ ಇಲ್ಲಿಯವರೆಗೆ ಬಿಹಾರದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅಧಿಕಾರಾವಧಿ ನಿಜವಾಗಿಯೂ ಅದ್ಭುತವಾಗಿತ್ತು. ಈ ಅವಧಿಯು ಬಿಹಾರದ ಇತಿಹಾಸದಲ್ಲಿ ಸುವರ್ಣ ಅಧ್ಯಾಯವಾಗಿ ಬರೆಯಲ್ಪಡುತ್ತದೆ. ಶಾಸಕ, ಸಂಸದ, ಮುಖ್ಯಮಂತ್ರಿ ಮತ್ತು ಕೇಂದ್ರ ಸಚಿವರಾಗಿ ಅವರ ಸುದೀರ್ಘ ವೃತ್ತಿಜೀವನದುದ್ದಕ್ಕೂ ಅವರ ಕುರ್ತಾ ಎಂದಿಗೂ ಕಳಂಕಿತವಾಗಿಲ್ಲ. ಅವರ ಇಡೀ ಜೀವನ ಭ್ರಷ್ಟಾಚಾರ ಆರೋಪಗಳಿಂದ ಮುಕ್ತವಾಗಿತ್ತು ಎಂದು ಅಮಿತ್ ಶಾ ಹೇಳಿದ್ದಾರೆ.

ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ 11 ವರ್ಷಗಳ ಕಾಲ, ಅವರು ಬಿಹಾರದ ಪ್ರಗತಿಗೆ ಎಲ್ಲ ರೀತಿಯಲ್ಲೂ ಮಹತ್ವದ ಕೊಡುಗೆ ನೀಡಿದ್ದಾರೆ ಮತ್ತು ಅವರ ನಾಯಕತ್ವದಲ್ಲಿಯೇ ಪ್ರಧಾನಿ ಮೋದಿ ಅವರ ಎಲ್ಲಾ ಉಪಕ್ರಮಗಳು ಬಿಹಾರದ ಜನರನ್ನು ತಲುಪಿವೆ. ಅವರು ಮತ್ತೊಮ್ಮೆ ರಾಜ್ಯಸಭಾ ಸದಸ್ಯರಾಗಿ ದೆಹಲಿಗೆ ಮರಳುತ್ತಿದ್ದಾರೆ. ನಾನು ಮತ್ತು ನಮ್ಮ ಎಲ್ಲಾ ಎನ್‌ಡಿಎ ಸಹೋದ್ಯೋಗಿಗಳು ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ ಮತ್ತು ಅವರ ಮುಖ್ಯಮಂತ್ರಿ ಅವಧಿಯನ್ನು ಬಿಹಾರದ ಜನರು ಯಾವಾಗಲೂ ಸ್ಮರಿಸುತ್ತಾರೆ, ಗೌರವಿಸುತ್ತಾರೆ ಎಂದು ಅಮಿತ್ ಶಾ ತಿಳಿಸಿದ್ದಾರೆ.

ಹಾಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಇಂದು ಪಾಟ್ನಾದಲ್ಲಿ ರಾಜ್ಯಸಭೆ ಚುನಾವಣೆಗೆ ತಮ್ಮ ನಾಮಪತ್ರ ಸಲ್ಲಿಸುವುದರೊಂದಿಗೆ ಬಿಹಾರವು ಒಂದು ದೊಡ್ಡ ರಾಜಕೀಯ ಬದಲಾವಣೆಗೆ ಸಾಕ್ಷಿಯಾಗುತ್ತಿದೆ.

ಇರಾನ್‌ನೊಂದಿಗಿನ ಯುದ್ಧ: ಇಸ್ರೇಲ್‌ಗೆ ಭಾರೀ ಆರ್ಥಿಕ ನಷ್ಟ

ವಾರಕ್ಕೆ $ 3 ಬಿಲಿಯನ್ ವೆಚ್ಚ!

ಜೆರುಸೆಲೆಂ, ಮಾ.5– ಇರಾನ್‌ನೊಂದಿಗೆ ಸದ್ಯ ನಡೆಯುತ್ತಿರುವ ಯುದ್ಧದಿಂದ ಪ್ರಸ್ತುತ ಆರ್ಥಿಕ ಚಟುವಟಿಕೆಗಳ ಮೇಲಿನ ನಿರ್ಬಂಧ ಹೇರಲಾಗಿರುವ ಇಸ್ರೇಲ್‌ಗೆ ವಾರಕ್ಕೆ ಅಂದಾಜು NIS 9.4 ಶತಕೋಟಿ (ಸುಮಾರು 3 ಬಿಲಿಯನ್ ಅಮೆರಿಕನ್ ಡಾಲರ್ ವೆಚ್ಚವಾಗಬಹುದು ಎಂದು ಇಸ್ರೇಲಿ ಹಣಕಾಸು ಸಚಿವಾಲಯ ಎಚ್ಚರಿಸಿದೆ.



ಹಣಕಾಸು ಸಚಿವಾಲಯದ ಮಹಾ ನಿರ್ದೇಶಕ ಇಲಾನ್ ರೋಮ್ ಅವರು ಗುರುವಾರ ಹೋಮ್ ಫ್ರಂಟ್ ಕಮಾಂಡ್ ಮುಖ್ಯಸ್ಥ, ಮೇಜರ್ ಜನರಲ್ ಶಾಯ್ ಕ್ಲಾಪ್ಪರ್ ಅವರಿಗೆ ಕಳುಹಿಸಲಾದ ಪತ್ರದಲ್ಲಿ ಹೀಗೆ ಎಚ್ಚರಿಕೆ ನೀಡಿದ್ದು, ವ್ಯವಹಾರಗಳು ಮತ್ತು ಕೆಲಸದ ಸ್ಥಳಗಳನ್ನು ಕ್ರಮೇಣವಾಗಿ, ಭಾಗಶಃ ಅಥವಾ ಪುನರ್ ತೆರೆಯಲು ಅನುಮತಿಸಲು ನಿರ್ಬಂಧಗಳನ್ನು ಸರಾಗಗೊಳಿಸುವಂತೆ ಕೇಳಿಕೊಂಡಿರುವುದಾಗಿ ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ.

ಸುರಕ್ಷತಾ ಪರಿಸ್ಥಿತಿಗೆ ಹೊಂದಿಕೊಳ್ಳುವ ರಕ್ಷಣಾ ನೀತಿಯನ್ನು ಸಂರಕ್ಷಿಸುವ ಅಗತ್ಯತೆಯ ಬಗ್ಗೆ ಯಾವುದೇ ತಕರಾರು ಇಲ್ಲ. ಆದರೆ ಇದೇ ವೇಳೆ ಆರ್ಥಿಕತೆ ಬಂದ್‌ನಿಂದಾಗಿ ಭಾರೀ ಆರ್ಥಿಕ ವೆಚ್ಚವನ್ನು ಹೊಂದಿದೆ ಎಂದು ರೋಮ್ ಎಚ್ಚರಿಸಿದ್ದಾರೆ.

ಭದ್ರತೆಯ ಅಗತ್ಯತೆಗಳ ಹೆಚ್ಚಳ ಮತ್ತು ಯುದ್ಧದ ಪರಿಣಾಮಗಳ ಹಿನ್ನೆಲೆಯಲ್ಲಿ ಎರಡೂವರೆ ವರ್ಷಗಳ ನಂತರ ಭಾರಿ ಪಾವತಿಯ ನಂತರ ಹೋಮ್ ಫ್ರಂಟ್ ಮತ್ತು ಆರ್ಥಿಕತೆಯ ಅಗತ್ಯತೆಗಳೆರಡನ್ನೂ ಪರಿಹರಿಸುವ ಪರಿಹಾರದ ಅಗತ್ಯವಿದೆ ಎಂದು ಹಣಕಾಸು ಸಚಿವಾಲಯದ ಉನ್ನತ ಕಾರ್ಯನಿರ್ವಾಹಕ ವರದಿ ಮಾಡಿದೆ.


ಇಸ್ರೇಲ್ ಮತ್ತು ಯುಎಸ್ ಶನಿವಾರ ಬೆಳಿಗ್ಗೆ ಇರಾನ್ ವಿರುದ್ಧ ಜಂಟಿ ಆಕ್ರಮಣವನ್ನು ಪ್ರಾರಂಭಿಸಿದ ಕೂಡಲೇ, ಇಸ್ರೇಲ್ ರಕ್ಷಣಾ ಪಡೆಗಳ (ಐಡಿಎಫ್) ಹೋಮ್ ಫ್ರಂಟ್ ಕಮಾಂಡ್ ಅಗತ್ಯ ವ್ಯವಹಾರಗಳನ್ನು ಹೊರತುಪಡಿಸಿ ಎಲ್ಲಾ ಸಭೆಗಳು, ಶೈಕ್ಷಣಿಕ ಚಟುವಟಿಕೆಗಳು ಮತ್ತು ಕೆಲಸದ ಸ್ಥಳಗಳನ್ನು ರಾಷ್ಟ್ರವ್ಯಾಪಿ ನಿಷೇಧಿಸುವ ಮಾರ್ಗಸೂಚಿಗಳನ್ನು ಹೊರಡಿಸಿತು.

ಈ ಮಾರ್ಗಸೂಚಿಯಲ್ಲಿ ಕೆಲಸಕ್ಕೆ ಪ್ರಯಾಣವನ್ನು ಮಿತಿಗೊಳಿಸಿದ್ದು, ಮನೆಯಿಂದ ಕೆಲಸವನ್ನು ಪ್ರೋತ್ಸಾಹಿಸಲಾಗಿದೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವಂತೆ ಸೂಚಿಸಿವೆ ಸೋಮವಾರ, ಇರಾನ್‌ನೊಂದಿಗಿನ ಸಂಘರ್ಷದ ಮಧ್ಯೆ ಹೋಮ್ ಫ್ರಂಟ್ ಕಮಾಂಡ್ ಶನಿವಾರ ರಾತ್ರಿಯವರೆಗೆ ರಾಷ್ಟ್ರವ್ಯಾಪಿ ನಿರ್ಬಂಧಗಳನ್ನು ವಿಸ್ತರಿಸಿದೆ.

ಬೆಳ್ಳಂಬೆಳಗ್ಗೆ ಹಲವು ಸರ್ಕಾರಿ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರು, ಮಾ.5– ಅಕ್ರಮ ಆಸ್ತಿ ಹೊಂದಿರುವ ಆರೋಪದ ಮೇಲೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹಲವಾರು ಸರ್ಕಾರಿ ಅಧಿಕಾರಿಗಳ ಮೇಲೆ ಲೋಕಾಯುಕ್ತ ಗುರುವಾರ ಏಕಕಾಲದಲ್ಲಿ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.





ಬೆಂಗಳೂರು, ಮಂಡ್ಯ, ಧಾರವಾಡ, ಹಾಸನ, ಮೈಸೂರು, ವಿಜಯಪುರ ಮತ್ತು ಯಾದಗಿರಿ ಸೇರಿದಂತೆ ಇತರ ಜಿಲ್ಲೆಗಳ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಸಂಬಂಧಿಸಿದ ಅನೇಕ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಅವರು ಹೇಳಿದರು.

ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಜೂನಿಯರ್ ಎಂಜಿನಿಯರ್, ಉಪ ವಿದ್ಯುತ್ ನಿರೀಕ್ಷಕರು ಮತ್ತು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಯಂತಹ ಹುದ್ದೆಗಳನ್ನು ಹೊಂದಿರುವ ಅಧಿಕಾರಿಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆದಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತ ದಾಳಿಗೊಳಗಾದವರಲ್ಲಿ ಹಾಸನ ನಗರಸಭೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಸಿ. ಸತ್ಯನಾರಾಯಣ ಕೂಡ ಸೇರಿದ್ದಾರೆ. ಹಾಸನದಲ್ಲಿರುವ ಸತ್ಯನಾರಾಯಣ ಅವರ ನಿವಾಸದ ಮೇಲೆ ನಡೆದ ದಾಳಿಯ ಸಂದರ್ಭದಲ್ಲಿ ಹೈ ಡ್ರಾಮಾ ನಡೆಯಿತು, ಅಲ್ಲಿ ಬಾಗಿಲು ತೆರೆಯದ ಕಾರಣ ಲೋಕಾಯುಕ್ತ ಅಧಿಕಾರಿಗಳು ಮನೆಯ ಹೊರಗೆ ಒಂದು ಗಂಟೆಗೂ ಹೆಚ್ಚು ಕಾಲ ಕಾಯಬೇಕಾಯಿತು ಎಂದು ಮೂಲಗಳು ತಿಳಿಸಿವೆ.ಸತ್ಯನಾರಾಯಣ ಅವರು ಗೇಟ್ ತೆರೆಯಲು ಮಾಡಿದ ಮನವಿಗಳಿಗೆ ಸ್ಪಂದಿಸದಿದ್ದಾಗ, ಅಧಿಕಾರಿಗಳು ಮೊದಲ ಮಹಡಿಗೆ ಹತ್ತಿ ಮನೆಯೊಳಗೆ ಪ್ರವೇಶಿಸಲು ಪ್ರಯತ್ನಿಸಿದರು.

ಇನ್ನೊಂದು ಪ್ರಕರಣದಲ್ಲಿ, ಹುಬ್ಬಳ್ಳಿಯ ಅಕ್ಷಯ ಕಾಲೋನಿಯಲ್ಲಿರುವ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಲಿಮಿಟೆಡ್‌ನ ಮುಖ್ಯ ಎಂಜಿನಿಯರ್ ವಸಂತಪ್ಪ ನಾಯಕ್ ಅವರ ನಿವಾಸದಲ್ಲಿ ಅಧಿಕಾರಿಗಳು ಶೋಧ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಪ್ರಸ್ತುತ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ನಾಯಕ್ ಅವರನ್ನು ಕಳೆದ ವರ್ಷ ಏಪ್ರಿಲ್‌ನಲ್ಲಿ ಹುಬ್ಬಳ್ಳಿಯಿಂದ ಬೆಂಗಳೂರಿಗೆ ವರ್ಗಾಯಿಸಲಾಗಿತ್ತು. ಅಕ್ಷಯ ಕಾಲೋನಿಯಲ್ಲಿರುವ ಅವರ ನಿವಾಸದಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಅವರು ಹೇಳಿದರು. ಅಕ್ರಮ ಆಸ್ತಿಗಳಿಕೆಗೆ ಸಂಬಂಧಿಸಿದ ದೂರುಗಳ ನಂತರ ಲೋಕಾಯುಕ್ತ ಅಧಿಕಾರಿಗಳ ಹಲವಾರು ತಂಡಗಳು ಅಧಿಕಾರಿಗಳ ಮನೆಗಳು ಮತ್ತು ಕಚೇರಿಗಳಲ್ಲಿ ಮುಂಜಾನೆ ದಾಳಿ ನಡೆಸಿವೆ.

ನೀರು ಸರಬರಾಜು ಮಂಡಳಿ ಇಂಜಿನಿಯರ್ ಆಸೀಫ್ ಇಕ್ಬಾಲ್ ಖಲೀಲ್ ಮನೆ ಮೇಲೆ ಲೋಕಾಯುಕ್ತ ದಾಳಿ; ಕೋಟ್ಯಾಂತರ ಮೌಲ್ಯದ ಆಸ್ತಿ–ಪಾಸ್ತಿ, ದಾಖಲೆ ವಶಕ್ಕೆ




ಆಸೀಫ್ ಇಕ್ಬಾಲ್ ಖಲೀಲ್ ಅವರ ಮನೆ.

ಮೈಸೂರು, ಮಾ.5(ಬಿಎಲ್‌ಯು)– ಮೈಸೂರಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಸೀಫ್ ಇಕ್ಬಾಲ್ ಖಲೀಲ್ ಅವರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿ ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಹಾಗೂ ಆಸ್ತಿಯನ್ನು ಪತ್ತೆ ಮಾಡಿದ್ದಾರೆ.



ಆಸೀಫ್ ಇಕ್ಬಾಲ್



ಮೈಸೂರಿನ ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆಯ ಆಸೀಫ್ ಇಕ್ಬಾಲ್ ಖಲೀಲ್ ಅವರ ಮನೆ ಹಾಗೂ ಸರಸ್ವತಿಪುರಂನ ಕಚೇರಿ ಮೇಲೆ ಏಕ ಕಾಲಕ್ಕೆ ದಾಳಿ ಮಾಡಿರುವ ಲೋಕಾಯುಕ್ತರು ಬೆಳಿಗ್ಗೆಯಿಂದ ಸಂಜೆವರೆಗೆ ಅವರ ಸಂಪಾದಿಸಿರುವ ಚಿನ್ನಾಭರಣ ಹಾಗೂ ಆಸ್ತಿಗಳಿಗಾಗಿ ಜಾಲಾಡಿದ್ದಾರೆ.

ಆಸೀಫ್ ಇಕ್ಬಾಲ್ ಖಲೀಲ್ ಅವರಿಗೆ ಸೇರಿರುವ 1.03 ಕೋಟಿ ಮೌಲ್ಯದ 5 ನಿವೇಶನ, 4,28,60,00 ಮೌಲ್ಯದ 7 ಮನೆ, 49,00,000 ಮೌಲ್ಯದ 38 ಗುಂಟೆ ಕೃಷಿ ಭೂಮಿಯ ಇರುವುದನ್ನು ಪತ್ತೆ ಮಾಡಿದ್ದಾರೆ.

ಆದರೆ ಇವರ ಮನೆಯಲ್ಲಿ ನಗದು ಪತ್ತೆಯಾಗಲಿಲ್ಲ, ಬದಲಿಗೆ 2,78,21,851 ಮೌಲ್ಯದ ಚಿನ್ನಾಭರಣ, 22,50,000 ಮೌಲ್ಯದ ವಾಹನಗಳನ್ನು ಕೂಡ ಲೋಕಾಯುಕ್ತರು ಪತ್ತೆ ಹಚ್ಚಿದ್ದಾರೆ. ಈ ಮೂಲಕ ಆಸೀಫ್ ಇಕ್ಬಾಲ್ ಖಲೀಲ್ ಅವರಿಗೆ ಸೇರಿರುವ ಒಟ್ಟಾರೆ 6,89,44,806 ಮೌಲ್ಯದ ಆಸ್ತಿಯನ್ನು ಪತ್ತೆ ಮಾಡಿರುವ ಲೋಕಾಯುಕ್ತರು ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 6 ಮಾರ್ಚ್ 2026

ಯುವಕರು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಿ



ಮಂಡ್ಯ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

ಮಂಡ್ಯ, ಮಾ.5– ಯುವಕರು ಸಕಾರಾತ್ಮಕ ಚಿಂತನೆ ಜೊತೆಗೆ ಮಾನವೀಯ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಮಂಡ್ಯ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಕೆ.ಶಿವ ಚಿತ್ತಪ್ಪ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಮಂಡ್ಯ ವಿಶ್ವವಿದ್ಯಾನಿಲಯ, ಮೈ ಭಾರತ್ ಮಂಡ್ಯ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ವಿಕಸಿತ ಭಾರತ ಯುವ ಸಂಪತ್ತು ಜಿಲ್ಲಾ ಮಟ್ಟದ ಸ್ಪರ್ಧೆ ಮತ್ತು ವಿಕಸಿತ ಭಾರತ ಯುವ ಸಂಪರ್ಕ ಕಾರ್ಯಕ್ರಮವನ್ನು ಮಂಡ್ಯ ವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದರು.

ಸ್ವಾಮಿ ವಿವೇಕಾನಂದರ ಚಿಂತನೆಯಂತೆ ಯುವಕರು ಸಾಮಾಜಿಕ ಮತ್ತು ರಾಜಕೀಯ ಜ್ಞಾನ ಬೆಳೆಸಿಕೊಳ್ಳಬೇಕು. ಯುವ ಸಮುದಾಯಕ್ಕೆ ರಾಜಕೀಯ ಜ್ಞಾನ ಮೂಡಿಸುವಲ್ಲಿ ಇಂತಹ ಕಾರ್ಯಕ್ರಮ ಪೂರಕವಾಗಿದೆ. ಯುವಕರು ಕಾರ್ಯಕ್ರಮ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಗುರಿಯೊಂದಿಗೆ, ಯುವಕರಲ್ಲಿ ನಾಯಕತ್ವ, ನೀತಿ ನಿರೂಪಣೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉತ್ತೇಜಿಸಲು ಹಮ್ಮಿಕೊಳ್ಳಲಾದ ಕಾರ್ಯಕ್ರಮವಾಗಿದೆ. ಯುವಕರು ಅವಕಾಶಗಳನ್ನು ಸದುಪಯೋಗ ಪಡೆದುಕೊಳ್ಳಬೇಕು. ಯುವಕರಿಗೆ ರಾಷ್ಟ್ರೀಯ ವಿಷಯಗಳ ಬಗ್ಗೆ ಚರ್ಚಿಸಲು, ಅಭಿಪ್ರಾಯ ಹಂಚಿಕೊಳ್ಳಲು ಮತ್ತು ನೀತಿ ತಜ್ಞರೊಂದಿಗೆ ಸಂವಹನ ನಡೆಸಲು ವೇದಿಕೆಯಾಗಿದೆ ಎಂದರು.

ಮಂಡ್ಯ ವಿವಿ ಕುಲ ಸಚಿವ ಕೃಷ್ಣ ಕುಮಾರ್ ಮಾತನಾಡಿ, ಯುವ ಜನತೆ ಸರ್ಕಾರಿ ಅಥವಾ ಸ್ವಂತ ಉದ್ಯೋಗ ಪಡೆದು ಸಬಲರಾಗುವ ದೃಢ ಸಂಕಲ್ಪ ಮಾಡಬೇಕು. ಸಂವಿಧಾನದ ಮಹತ್ವ ತಿಳಿದು ನಡೆಯಬೇಕು ಮತ್ತು ಯುವಕರು ಹೆಚ್ಚು ಸಂವಿಧಾನದ ವಿಷಯ ಕುರಿತು ಜ್ಞಾನ ಬೆಳೆಸಿಕೊಳ್ಳಿ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಓಂ ಪ್ರಕಾಶ್ ಮಾತನಾಡಿದರು. ವೇದಿಕೆಯಲ್ಲಿ ಮಂಡ್ಯ ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಯೋಜಕ ಪ್ರೊ.ಎಂ.ಬಿ.ಪ್ರಮೀಳಾ, ಪ್ರೊ.ಚಂದ್ರಶೇಖರ್ ಪ್ರಸಾರಂಗ ನಿರ್ದೇಶಕರು, ಪ್ರೊ.ಜೆ.ವಿ.ವೆಂಕಟರಮಣ, ಡಾ.ಶರಣ ಬಸಪ್ಪ, ಡಾ.ರೇಖಾ ಜಾಧವ್, ನಾಗೇಂದ್ರ, ಸತೀಶ್ ಸೇರಿದಂತೆ ಇನ್ನಿತರರಿದ್ದರು.

ರೈತರಿಗೆ ಒಕ್ಕೂಟದ ಯೋಜನೆ, ಸವಲತ್ತುಗಳನ್ನು ತಲುಪಿಸಿ

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್



ಫಲಾನುಭವಿಗಳಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚೆಕ್‌ಗಳನ್ನು ವಿತರಿಸಿದರು.

ಪಾಂಡವಪುರ, ಮಾ.5– ಮನ್‌ಮುಲ್ ನಿರ್ದೇಶಕನಾದ ಬಳಿಕ ತಾಲೂಕಿನ ರೈತರಿಗೆ ವಿವಿಧ ಯೋಜನೆಯಡಿ ಒಕ್ಕೂಟದಿಂದ 3 ಕೋಟಿಗೂ ಅಧಿಕ ಚೆಕ್ ವಿತರಿಸಲಾಗಿದೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಪಟ್ಟಣದ ಮನ್‌ಮುಲ್ ಉಪ ವ್ಯವಸ್ಥಾಪಕರ ಕಚೇರಿಯಲ್ಲಿ ರೈತರಿಗೆ ರಾಸು ವಿಮೆ, ರೈತ ಕಲ್ಯಾಣ ಟ್ರಸ್ಟ್, ಗುಂಪು ವಿಮೆ, ಹಾಲು ಕರೆಯುವ ಯಂತ್ರದ ಸಬ್ಸಿಡಿ ಸೇರಿದಂತೆ ವಿವಿಧ ಯೋಜನೆಯ 25.83 ಲಕ್ಷದ ಚೆಕ್ ವಿತರಿಸಿ ಅವರು ಮಾತನಾಡಿದರು.

ಮನ್‌ಮುಲ್ ಒಕ್ಕೂಟ ರೈತರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಹಲವು ಯೋಜನೆ, ಸವಲತ್ತುಗಳನ್ನು ನೀಡುತ್ತಿದೆ. ಆ ಯೋಜನೆಗಳನ್ನು ರೈತರಿಗೆ ತಲುಪಿಸುವ ಕೆಲಸವನ್ನು ಒಕ್ಕೂಟದ ಅಧಿಕಾರಿಗಳು, ನೌಕರರು ಹಾಗೂ ಡೇರಿ ಆಡಳಿತ ಮಂಡಳಿಯವರು ಮಾಡಬೇಕು. ನಾನು ನಿರ್ದೇಶಕದ ಬಳಿಕ ಪ್ರತಿ ತಿಂಗಳು ಸಭೆ ನಡೆಸಿ ಚೆಕ್ ವಿತರಣಾ ಕಾರ್ಯಕ್ರಮ ಆಯೋಜಿಸಿ 3 ಕೋಟಿ ಅಧಿಕ ಮೊತ್ತದ ಚೆಕ್ ವಿತರಣೆ ಮಾಡಿದ್ದೇನೆ ಎಂದರು.

ಇತ್ತೀಚಿನ ದಿನಗಳಲ್ಲಿ ರಾಸುಗಳ ಬೆಲೆ ದುಬಾರಿಯಾಗಿದೆ. ಒಂದು ಹಸು ಖರೀದಿಸಲು ಪ್ರಸ್ತುತ ಲಕ್ಷಕ್ಕೂ ಹೆಚ್ಚು ಹಣ ಬೇಕಾಗಿರುವುದರಿಂದ ನಮ್ಮ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ರಾಸು ವಿಮೆ ಮೊತ್ತವನ್ನು ಸಹ ಹೆಚ್ಚಿಸಲಾಗಿದೆ. ಮರಣ ಹೊಂದಿದ ರಾಸುಗಳಿಗೆ 40–60 ಸಾವಿರದವರೆಗೆ ಮಾತ್ರ ವಿಮೆ ಸೌಲಭ್ಯ ಬರುತ್ತಿತ್ತು. ಇದೀಗ ಅದರ ಮೊತ್ತವನ್ನು 80 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ರೈತರು ನಿರ್ಲಕ್ಷ್ಯ ಮಾಡದೇ ಕಡ್ಡಾಯವಾಗಿ ತಮ್ಮ ರಾಸುಗಳಿಗೆ ವಿಮೆ ಮಾಡಿಸಬೇಕು. ಜೊತೆಗೆ ರೈತರು, ಷೇರುದಾರರು ಸಹ ಗುಂಪು ವಿಮೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

> **ರೈತರು ಕಡ್ಡಾಯವಾಗಿ ರಾಸುಗಳ ವಿಮೆ ಮಾಡಿಸಬೇಕು. ವಿಮೆ ಮಾಡಿಸದ ರಾಸುಗಳು ಮರಣ ಹೊಂದಿದರೆ ನಯಾಪೈಸೆ ಪರಿಹಾರ ದೊರೆ ಯುವುದಿಲ್ಲ. ತಾಲೂಕಿನಲ್ಲಿ ಅಂದಾಜು 17,500–18000 ರಾಸುಗಳಿದ್ದು, ಕಳೆದ ಬಾರಿ ಕೇವಲ 10,500 ರಾಸುಗಳಿಗೆ ಮಾತ್ರ ವಿಮೆ ಮಾಡಿಸಿದ್ದಾರೆ. ದಯಮಾಡಿ ಎಲ್ಲಾ ರೈತರು ಕಡ್ಡಾಯವಾಗಿ ರಾಸುಗಳಿಗೆ ವಿಮೆ ಮಾಡಿಸಬೇಕು.**
> – ಆರ್.ಪ್ರಸಾದ್, ಮನ್‌ಮುಲ್ ಉಪ ವ್ಯವಸ್ಥಾಪಕ.

ಬೇಸಿಗೆಯಲ್ಲೂ ಒಕ್ಕೂಟಕ್ಕೆ 12 ಲಕ್ಷ ಲೀಟರ್‌ಗೂ ಅಧಿಕ ಹಾಲು ನಿತ್ಯ ಪೂರೈಕೆಯಾಗುತ್ತಿದೆ. ಮುಂದಿನ ದಿನಗಳಲ್ಲಿ 15 ಲಕ್ಷದವರೆಗೂ ಏರಿಕೆಯಾಗುವ ಸಾಧ್ಯತೆ ಇರುವುದರಿಂದ ಒಕ್ಕೂಟವು ಅದಕ್ಕೆ ಸಿದ್ಧತೆ ಮಾಡಿಕೊಳ್ಳಲು ಮುಂದಾಗಿದೆ. ರೈತರು ಸಹ ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮನ್‌ಮುಲ್ ಸಹಾಯಕ ವ್ಯವಸ್ಥಾಪಕ ಪ್ರಕಾಶ್, ಸಂತೋಷ, ನೌಕರರ ಸಂಘದ ಅಧ್ಯಕ್ಷ ಶಿವಪ್ಪ, ಪ್ರಸಾದ್, ಸುರೇಶ್, ನಟರಾಜು, ಮಾರ್ಗ ವಿಸ್ತರಣಾಧಿಕಾರಿಗಳಾದ ಮಧು, ನಾಗೇಂದ್ರ ಪ್ರಜ್ವಲ, ಉಷಾ ಭಾಗವಹಿಸಿದ್ದರು.

6ನೇ ಹಂತದ ಕುಡಿಯುವ ನೀರಿನ ಯೋಜನೆಗೆ ಒಪ್ಪಿಗೆ

ಮಂಡ್ಯ ಜಿಲ್ಲೆ ಕೃಷಿ ಚಟುವಟಿಕೆಗೆ ಮಾರಕ


ಪತ್ರಿಕಾಗೋಷ್ಠಿಯಲ್ಲಿ ಸುನಂದಾ ಜಯರಾಮ್ ಮಾತನಾಡಿದರು.

ಮಂಡ್ಯ, ಮಾ.5– ಬೆಂಗಳೂರಿಗೆ 6ನೇ ಹಂತದ ಕುಡಿಯುವ ನೀರಿನ ಯೋಜನೆಗೆ ಸಚಿವ ಸಂಪುಟ ಅನುಮೋದನೆ ನೀಡಿರುವುದು ಮಂಡ್ಯ ಜಿಲ್ಲೆಯ ಕೃಷಿ ಚಟುವಟಿಕೆಗೆ ಮಾರಕ ಎಂದು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ಸುನಂದಾ ಜಯರಾಮ್ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಕುಡಿಯುವ ನೀರಿನ ಯೋಜನೆಗೆ ಕೆಆರ್‌ಎಸ್‌ನಿಂದ ನೀರು ಪೂರೈಕೆಗೆ ವಿರೋಧವಿದ್ದರೂ ಸರ್ಕಾರ ಯೋಜನೆಗಳನ್ನು ರೂಪಿಸಿಕೊಂಡು ಬರುತ್ತಿವೆ. ಡ್ಯಾಂನ ನಿರ್ಮಾಣ ಕೃಷಿ ಉದ್ದೇಶಕ್ಕಾಗಿ ಎಂಬುದು ತಿಳಿದಿದ್ದರೂ, ಸರ್ಕಾರ ಕೃಷಿಯನ್ನು ನಾಶ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಈಗಾಗಲೇ 5 ಹಂತದಲ್ಲಿ ಬೆಂಗಳೂರಿಗೆ ನೀರು ಕೊಂಡೊಯ್ಯಲಾಗಿದೆ. ಇದೀಗ ಗ್ರೇಟರ್ ಬೆಂಗಳೂರು ಹೆಸರಿನಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ನೀರು ಕೊಡಲು 6ನೇ ಹಂತದಲ್ಲಿ ಯೋಜನೆ ರೂಪಿಸಿ ಅನುಮೋದನೆ ಪಡೆಯಲಾಗಿದೆ. ಇದರಿಂದ ಕೆಆರ್‌ಎಸ್ ಅಚ್ಚುಕಟ್ಟು ಪ್ರದೇಶಗಳಲ್ಲಿ 2ನೇ ಬೆಳೆಗೆ ನೀರಿನ ಲಭ್ಯತೆ ಇಲ್ಲವಾಗುತ್ತದೆ. ಅಲ್ಲದೇ ಕೊನೆಯ ಭಾಗದ ಮಳವಳ್ಳಿ, ಮದ್ದೂರು, ನಾಗಮಂಗಲ ಭಾಗಗಳಲ್ಲಿ ಕೃಷಿ ನಾಶವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಜಿಲ್ಲೆಯ ಕೃಷಿ ಗ್ರಾಮಗಳನ್ನು ನಗರೀಕರಣ ಮಾಡಲು ಸರ್ಕಾರ ಯೋಜನೆ ಮಾಡುತ್ತಿದೆ. ಕೃಷಿ ಕ್ಷೇತ್ರಗಳಲ್ಲಿ ರಿಯಲ್ ಎಸ್ಟೇಟ್ ಲಾಬಿಗಳು ಸವಾರಿ ಮಾಡಲು ಹವಣಿಸುತ್ತಿದ್ದು, ಲಕ್ಷ ಕೋಟಿಗಳನ್ನು ಹೂಡಲು ಮುಂದಾಗಿವೆ. ಅವರಿಗೆ ಅನುಕೂಲ ಮಾಡಲು ಸರ್ಕಾರ ಮುಂದಾಗಿದ್ದು, ಈ ನಿಟ್ಟಿನಲ್ಲಿ ಅಣೆಕಟ್ಟೆ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್, ಕಾವೇರಿ ಆರತಿ ಯೋಜನೆಗೆ ಮುಂದಾಗಿದೆ. ಇದನ್ನು ತಡೆಯಲು ಜಿಲ್ಲೆಯ ಎಲ್ಲಾ ನೀರು ಬಳಕೆದಾರರು ಹಾಗೂ ಕೃಷಿಕರು ದನಿ ಎತ್ತಬೇಕಿದೆ ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಉಪಾಧ್ಯಕ್ಷ ಕೆ.ಬೋರಯ್ಯ, ಉಪಾಧ್ಯಕ್ಷರಾದ ಕೆಂಪೇಗೌಡ, ಇಂಡುವಾಳು ಚಂದ್ರಶೇಖರ್, ಖಜಾಂಚಿ ಮುದ್ದೇಗೌಡ, ಸಂಘಟನಾ ಕಾರ್ಯದರ್ಶಿಗಳಾದ ಮಂಜುನಾಥ್, ಎಸ್.ನಾರಾಯಣ್ ಸೇರಿದಂತೆ ಇತರರು ಹಾಜರಿದ್ದರು.

ವಿಜೃಂಭಣೆಯ ಶ್ರೀಲಕ್ಷ್ಮಿ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ


ಶ್ರೀಲಕ್ಷ್ಮಿ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಶ್ರೀರಂಗಪಟ್ಟಣ, ಮಾ.5– ತಾಲೂಕಿನ ಕರಿಘಟ್ಟದಲ್ಲಿ ಶ್ರೀಲಕ್ಷ್ಮಿ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮುಂಜಾನೆಯಿಂದಲೇ ದೇವಾಲಯದಲ್ಲಿ ದೇವರಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ಬಳಿಕ ಮಧ್ಯಾಹ್ನ 12 ರಿಂದ 12.45ಕ್ಕೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ ವಿವಿಧ ಹೂಗಳಿಂದ ಅಲಂಕೃತಗೊಂಡಿದ್ದ ರಥದಲ್ಲಿ ಪದ್ಮಾವತಿ ಸಮೇತ ಶ್ರೀ ವೆಂಕಟರಮಣ ಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಮಹಾ ಮಂಗಳಾರತಿಯೊಂದಿಗೆ ಗೋವಿಂದ ಗೋವಿಂದ ಎಂದು ಭಕ್ತರ ಘೋಷಣೆಗಳೊಂದಿಗೆ ರಥ ಎಳೆಯುವ ಮೂಲಕ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ತಹಸೀಲ್ದಾರ್ ಚೇತನಾ ಯಾದವ್, ದೇವಾಲಯದ ಇಒ ಎಂ. ಉಮಾ ಸೇರಿದಂತೆ ಅಧಿಕಾರಿಗಳ ಹಾಗೂ ಇತರ ಮುಖಂಡರ ನೇತೃತ್ವದಲ್ಲಿ ಚಾಲನೆ ನೀಡಿದರು.

ಭಕ್ತರು ದೇವಾಲಯದ ಸುತ್ತಲೂ ಒಂದು ಸುತ್ತು ರಥ ಎಳೆದರು. ಅಲ್ಲದೇ ರಥಕ್ಕೆ ಹಣ್ಣು ಜವನ ಎಸೆದು ಪ್ರಾರ್ಥನೆ ಸಲ್ಲಿಸಿದರು. ಇನ್ನೊಂದೆಡೆ ಸರತಿ ಸಾಲಿನಲ್ಲಿ ನಿಂತು ಭಕ್ತರು ವೆಂಕಟರಮಣನಿಗೆ ಈಡುಗಾಯಿ ಹೊಡೆದು ಪೂಜೆ ಸಲ್ಲಿಸಿದರು.

ಕರಿಘಟ್ಟದ ಬೆಟ್ಟದ ತಪ್ಪಲಿನಿಂದ ಮೆಟ್ಟಿಲಿನವರೆಗೂ ದಾನಿಗಳು ಭಕ್ತರಿಗೆ ಕುಡಿಯಲು ನೀರು, ಮಜ್ಜಿಗೆ, ಪಾನಕ ಸೇರಿದಂತೆ ಪುಳಿಯೊಗರೆ, ಮೊಸರನ್ನ ಪ್ರಸಾದ ರೂಪದಲ್ಲಿ ನೀಡಿ ಭಕ್ತಿ ಭಾವ ಮೆರೆದರು. ಸ್ಥಳೀಯ ಭಕ್ತರಲ್ಲದೇ ಮೈಸೂರು, ಬೆಂಗಳೂರು, ತಮಿಳುನಾಡು, ಆಂಧ್ರ ಪ್ರದೇಶದಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ಪೊಲೀಸರು ಬಂದೋಬಸ್ತ್ ಕೈಗೊಂಡಿದ್ದರು.

ಸಂಭ್ರಮದ ಶ್ರೀಲಕ್ಷ್ಮೀದೇವಿ ಅಮ್ಮನವರ ರಥೋತ್ಸವ


ಲಕ್ಷ್ಮೀದೇವಿ ಅಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಕೆಆರ್.ಪೇಟೆ, ಮಾ.5– ತಾಲೂಕಿನ ದಡಿಘಟ್ಟ ಗ್ರಾಮದ ಗ್ರಾಮದೇವತೆ ಶ್ರೀಲಕ್ಷ್ಮೀದೇವಿ (ದಡಿಘಟ್ಟದಮ್ಮ) ಅಮ್ಮನವರ ಮಹಾ ರಥೋತ್ಸವ ಸಂಭ್ರಮದಿಂದ ನಡೆಯಿತು.

ವಿವಿಧ ಹೂ, ಹಾರ, ಬಾಳೆಗೊನೆ, ಮಾವಿನ ತೋರಣ, ಬಣ್ಣ ಬಣ್ಣದ ವಸ್ತ್ರಗಳಿಂದ ಸಿಂಗರಿಸಿದ್ದ ರಥದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಭಕ್ತರು ರಥ ಎಳೆದು ಪುನೀತರಾದರು. ಅಲ್ಲದೇ ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಬೆಟ್ಟದಹಳ್ಳಿ ಶ್ರೀದೊಡ್ಡಯ್ಯ, ಚಿಕ್ಕಯ್ಯ, ಮೈಲಾರಲಿಂಗೇಶ್ವರ ಸ್ವಾಮಿ ಪೂಜಾ ಕುಣಿತ ರಥೋತ್ಸವದ ರಂಗನ್ನು ಹೆಚ್ಚಿಸಿತ್ತು.

ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ದೇವರ ದರ್ಶನ ಪಡೆದು ಮಾತನಾಡಿದರು. ಜಾತ್ರಾ ಮಹೋತ್ಸವ ಅಂಗವಾಗಿ ಬಾಯಿಬೀಗ, ಸಗಣಿ ಓಕಳಿಯಾಟ, ಸಾಮೂಹಿಕ ಅನ್ನಸಂತರ್ಪಣೆ, ಕುರುಕ್ಷೇತ್ರ ನಾಟಕ ಪ್ರದರ್ಶನ, ಬೆಟ್ಟದಹಳ್ಳಿ ಶ್ರೀದೊಡ್ಡಯ್ಯ, ಚಿಕ್ಕಯ್ಯ, ಮೈಲಾರಲಿಂಗೇಶ್ವರ ಸ್ವಾಮಿಯವರ ಪೂಜಾ ಕುಣಿತ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಜಾತ್ರಾ ಮಹೋತ್ಸವದಲ್ಲಿ ಮಾಜಿ ಸಚಿವ ನಾರಾಯಣಗೌಡ, ದೇವಕಿ ನಾರಾಯಣಗೌಡ, ಗಂಧನಹಳ್ಳಿ, ಮಿರ್ಲೆ, ಸಾಲಿಗ್ರಾಮ, ಕಿಕ್ಕೇರಿ, ಲಕ್ಷ್ಮೀಪುರ, ಚಲ್ಯ, ಕುಂಬೇನಹಳ್ಳಿ, ದಡಿಘಟ್ಟ, ಬೆಟ್ಟದಹಳ್ಳಿ, ಜುಟ್ಟನಹಳ್ಳಿ, ಬ್ಯಾಡರಹಳ್ಳಿ ಸೇರಿದಂತೆ ಸುತ್ತಮುತ್ತಲ ಭಕ್ತರಿದ್ದರು. ದಡಿಘಟ್ಟ ಶ್ರೀಲಕ್ಷ್ಮೀದೇವಿ ಯುವಕರ ಸಂಘದಿಂದ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಮೂರನೇ ಪುಟದಿಂದ

ಇಂದು ಬಜೆಟ್

ಪ್ರಮಾಣ ಶೇ.25ಕ್ಕೆ ಹೆಚ್ಚಾಗದಂತೆ ನೋಡಿಕೊಂಡು ಸಾಲ ಮಾಡಬೇಕಾಗಿದೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ದೃಷ್ಟಿಯಲ್ಲಿಟ್ಟುಕೊಂಡು ಮಂಡನೆ ಮಾಡಲಾಗುತ್ತಿರುವ ಬಜೆಟ್ ಪತ್ರದಲ್ಲಿ ಕೇಂದ್ರ ಸರ್ಕಾರ ಸಂಪನ್ಮೂಲ ಹಂಚಿಕೆಯಲ್ಲಿ ಮಾಡುತ್ತಿರುವ ತಾರತಮ್ಯ, ತೆರಿಗೆ ಹಂಚಿಕೆಯಲ್ಲಿ ಅನುಸರಿಸುತ್ತಿರುವ ಕ್ರಮಗಳು ಮತ್ತು ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಸಂಪನ್ಮೂಲ ಹಂಚಿಕೆಗೆ ಕೈಗೊಂಡಿರುವ ಕ್ರಮಗಳಿಂದ ರಾಜ್ಯಕ್ಕೆ ಆಗಿರುವ ಅನ್ಯಾಯಗಳ ಬಗ್ಗೆ ಸುದೀರ್ಘ ವಿವರಣೆ ಇರುವ ಸಾಧ್ಯತೆ ಇದೆ.

ದಾಖಲೆಯ 17ನೇ ಬಜೆಟ್: ಸಿದ್ದರಾಮಯ್ಯ ತಮ್ಮ ದಾಖಲೆ 17ನೇ ಬಜೆಟ್ ಮಂಡಿಸುತ್ತಿದ್ದು, ಕಳೆದ ಎರಡು ವರ್ಷಗಳಿಂದ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಕೊಟ್ಟಿಲ್ಲ ಎಂದು ಸ್ವಪಕ್ಷೀಯ ಶಾಸಕರು ವ್ಯಕ್ತಪಡಿಸಿರುವ ಅಸಮಾಧಾನಗಳಿಗೆ ಈ ಬಜೆಟ್‌ನಲ್ಲಿ ಉತ್ತರ ನೀಡುವ ನಿರೀಕ್ಷೆ ಇದೆ. ಬಜೆಟ್ ಕೇವಲ ಅಂಕಿ–ಅಂಶಗಳಾಗಿರದೆ, ರಾಜ್ಯದ ಅಭಿವೃದ್ಧಿ ಮತ್ತು ಜನಪ್ರಿಯ ಯೋಜನೆಗಳ ನಡುವಿನ ಸಮತೋಲನದ ಸವಾಲಾಗಿದೆ.

ಸರ್ಕಾರದ 5 ಪ್ರಮುಖ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಿ ಇದಕ್ಕಾಗಿ ಪ್ರತ್ಯೇಕ ಹಣವನ್ನು ನಿಗದಿಪಡಿಸಿದರೂ, ಬಡವರಿಗಾಗಿ ಮೀಸಲಿಟ್ಟ ಕಾರ್ಯಕ್ರಮಗಳು ಉಳ್ಳವರಿಗೆ ದೊರೆಯುವುದನ್ನು ತಪ್ಪಿಸಲು ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಬಜೆಟ್‌ನಲ್ಲಿ ಮಂಡಿಸುವ ಸಾಧ್ಯತೆ ಇದೆ.

ಕೇವಲ ಗ್ಯಾರಂಟಿಗಳಲ್ಲದೆ, ರಸ್ತೆ, ನೀರಾವರಿ ಮತ್ತು ಮೂಲಸೌಕರ್ಯದಂತಹ ಆಸ್ತಿ ಸೃಜನೆ ಯೋಜನೆಗಳಿಗೆ ಹೆಚ್ಚಿನ ಹಣ ಮೀಸಲಿಡಬೇಕು ಎಂಬ ಒತ್ತಡವಿದ್ದು ಇದಕ್ಕೆ ಬಜೆಟ್‌ನಲ್ಲಿ ಉತ್ತರ ನೀಡುವ ಸಾಧ್ಯತೆ ಇದೆ. ಸೆಪ್ಟೆಂಬರ್ 2025ರಲ್ಲಿ ನಡೆದ ಜಿಎಸ್‌ಟಿ ದರಗಳ ಪರಿಷ್ಕರಣೆಯಿಂದಾಗಿ ರಾಜ್ಯಕ್ಕೆ ಸುಮಾರು 18,000 ಕೋಟಿ ರೂ. ರಾಜಸ್ವ ಕೊರತೆ ಉಂಟಾಗುವ ಭೀತಿ ಇದೆ, ಇದನ್ನು ಸರಿದೂಗಿಸಲು ಅಬಕಾರಿ ಮತ್ತು ಗಣಿ ವಲಯದಿಂದ ಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ.

16ನೇ ಹಣಕಾಸು ಆಯೋಗದ ಶಿಫಾರಸಿನಂತೆ ಈ ಸಾಲಿನಲ್ಲಿ ಕರ್ನಾಟಕಕ್ಕೆ ಸುಮಾರು 63,049.58 ಕೋಟಿ ರೂ. ತೆರಿಗೆ ಪಾಲು ಸಿಗುವ ಅಂದಾಜಿದೆ. ರಾಜ್ಯದ ಒಟ್ಟು ಸಾಲ ಮತ್ತು ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಮುಖ್ಯಮಂತ್ರಿ ಅವರಿಗೆ ದೊಡ್ಡ ಸವಾಲಾಗಿದೆ. 2026–27ರಲ್ಲಿ ರಾಜ್ಯದ ಜಿಎಸ್‌ಡಿಪಿ ಸುಮಾರು 30.70 ಲಕ್ಷ ಕೋಟಿ ರೂ. ತಲುಪುವ ಅಂದಾಜಿದ್ದು, ಬಜೆಟ್ ಗಾತ್ರವು ಈ ಬಾರಿ 4.11ಲಕ್ಷ ಕೋಟಿ ರೂಪಾಯಿ ದಾಟುವ ಸಾಧ್ಯತೆಯಿದೆ. ಈರುಳ್ಳಿ, ಆಲೂಗಡ್ಡೆ, ಮತ್ತು ತೆಂಗಿನಂತಹ ಬೆಳೆಗಳ ಬೆಲೆ ಕುಸಿದಾಗ ರೈತರ ನೆರವಿಗೆ ಬರಲು ಬೆಲೆ ಸ್ಥಿರೀಕರಣ ನಿಧಿಗೆ 2,000 ಕೋಟಿ ರೂ. ಮೀಸಲಿಡುವ ಸಾಧ್ಯತೆಯಿದೆ.

ಸರ್ಕಾರಿ ಶಾಲೆಗಳ ಆಧುನೀಕರಣ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಕಾರ್ಪೊರೇಟ್ ಕಂಪನಿಗಳ ಸಹಯೋಗದೊಂದಿಗೆ 2,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು 'ಸ್ಮಾರ್ಟ್ ಶಾಲೆ'ಗಳನ್ನಾಗಿ ಪರಿವರ್ತಿಸಲು ಯೋಜನೆ.ಬೆಂಗಳೂರನ್ನು ಹೊರತುಪಡಿಸಿ ಎರಡನೇ ಹಂತದ ನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿಯಲ್ಲಿ ಐಟಿ ಕಂಪನಿಗಳನ್ನು ವಿಸ್ತರಿಸುವುದು.

ಮೈಸೂರು ಮತ್ತು ಬೆಳಗಾವಿಯಲ್ಲಿ ಹೊಸ ಟೆಕ್ ಪಾರ್ಕ್‌ಗಳ ಸ್ಥಾಪನೆಗೆ ಉತ್ತೇಜನ, ಕೃತಕ ಬುದ್ಧಿಮತ್ತೆ ಮತ್ತು ಸೆಮಿಕಂಡಕ್ಟರ್ ವಿನ್ಯಾಸದ ಸ್ಟಾರ್ಟ್‌ಅಪ್‌ಗಳಿಗೆ ವಿಶೇಷ ರಿಯಾಯಿತಿ ಹಾಗೂ ಸಹಾಯಧನ. ಪದವೀಧರರಿಗೆ ಐಟಿ ಕಂಪನಿಗಳ ಅಗತ್ಯಕ್ಕೆ ತಕ್ಕಂತೆ ತರಬೇತಿ ನೀಡಲು 'ಕರ್ನಾಟಕ ಕೌಶಲ್ಯ ಮಿಷನ್' ಅಡಿಯಲ್ಲಿ ಹೊಸ ಕೋರ್ಸ್‌ಗಳ ಘೋಷಣೆ. ರಾಜ್ಯದಲ್ಲಿ ಅರಣ್ಯ ಪ್ರದೇಶ ಕಡಿಮೆಯಾದ ಹಿನ್ನೆಲೆಯಲ್ಲಿ ಹವಾಮಾನ ವೈಪರಿತ್ಯ ಉಂಟಾಗುತ್ತಿದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಅಂತರರಾಷ್ಟ್ರೀಯ ಮಾರ್ಗಸೂಚಿಗಳನ್ನು ಆಧರಿಸಿ ಹಸಿರು ವೇದಿಕೆ ಪ್ರಮಾಣವನ್ನು ಹೆಚ್ಚಳ ಮಾಡುವ ಯೋಜನೆಗಳು ಪ್ರಕಟವಾಗಲಿವೆ. ರೈತರು ತಮ್ಮ ಜಮೀನಿನ ಬದುಗಳಲ್ಲಿ ಗಿಡಗಳನ್ನು ಬೆಳೆಸಲು ನೀಡುವ 'ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ' ಅಡಿಯಲ್ಲಿ ಪ್ರತಿ ಬದುಕುಳಿದ ಗಿಡಕ್ಕೆ ನೀಡುವ ಪ್ರೋತ್ಸಾಹ ಧನವನ್ನು ಹೆಚ್ಚಿಸುವ ನಿರೀಕ್ಷೆಯಿದೆ. ತೇಗ ಮತ್ತು ಶ್ರೀಗಂಧದಂತಹ ಬೆಲೆಬಾಳುವ ಮರಗಳನ್ನು ಬೆಳೆಸಲು ರೈತರಿಗೆ ಇರುವ ಕಾನೂನು ಅಡೆತಡೆಗಳನ್ನು ಮತ್ತಷ್ಟು ಸರಳಗೊಳಿಸುವುದು.

ರಾಜ್ಯದ ಹಸಿರು ಹೊದಿಕೆಯನ್ನು ಹೆಚ್ಚಿಸುವ ಮೂಲಕ 'ಕಾರ್ಬನ್ ಕ್ರೆಡಿಟ್ಸ್' ಗಳಿಸಿ, ಜಾಗತಿಕ ಮಾರುಕಟ್ಟೆಯಲ್ಲಿ ಬಳಸಿಕೊಳ್ಳುವ ಹೊಸ ನೀತಿಯನ್ನು ಸರ್ಕಾರ ಈ ಬಜೆಟ್‌ನಲ್ಲಿ ಪರಿಚಯಿಸಬಹುದು. ಪ್ರಸ್ತುತ ನೀಡಲಾಗುತ್ತಿರುವ ಬಡ್ಡಿ ರಹಿತ ಸಾಲದ ಮಿತಿಯನ್ನು 5 ಲಕ್ಷದಿಂದ 7 ಲಕ್ಷ ರೂ.ಗೆ ಹೆಚ್ಚಿಸುವ ಸಾಧ್ಯತೆ ಇದೆ. ಶೇ.3ರ ಬಡ್ಡಿದರದಲ್ಲಿ ನೀಡುವ ಸಾಲದ ಮಿತಿಯನ್ನು 15 ಲಕ್ಷದಿಂದ 20 ಲಕ್ಷಕ್ಕೆ ಹೆಚ್ಚಿಸುವ ಸಾಧ್ಯತೆಯಿದೆ. ಹಣ್ಣು ಮತ್ತು ತರಕಾರಿ ಹಾಳಾಗದಂತೆ ತಡೆಯಲು ಜಿಲ್ಲಾ ಕೇಂದ್ರಗಳಲ್ಲಿ ಕೋಲ್ಡ್ ಸ್ಟೋರೇಜ್ (ಶೀತಲೀಕರಣ ಘಟಕ) ಮತ್ತು ಮೌಲ್ಯವರ್ಧಿತ ಘಟಕಗಳ ಸ್ಥಾಪನೆಗೆ ಒತ್ತು ನೀಡಬಹುದು. ರೈತರು ಎದುರಿಸುತ್ತಿರುವ ಅತಿದೊಡ್ಡ ಸಮಸ್ಯೆ ಎಂದರೆ 'ಒತ್ತುವರಿ' ಮತ್ತು 'ಪಹಣಿ ಸಮಸ್ಯೆ'ಗಳು. ಈ ಬಜೆಟ್‌ನಲ್ಲಿ ಕಂದಾಯ ಇಲಾಖೆಯ ಡಿಜಿಟಲೀಕರಣದ ಮೂಲಕ ರೈತರ ಅಲೆದಾಟ ತಪ್ಪಿಸುವ ಘೋಷಣೆಗಳನ್ನು ನಿರೀಕ್ಷಿಸಬಹುದಾಗಿದೆ.

ತೆರಿಗೆ ಗ್ಯಾರಂಟಿ

ಸಾಲ ಪಡೆಯುವ ಅವಕಾಶ ಇದ್ದರೂ ಸಾಲ ಪಡೆಯಲಿಲ್ಲ. ಕಾಂಗ್ರೆಸ್ ಮಾತ್ರ ಪ್ರತಿ ವರ್ಷ ಸಾಲ ಪಡೆಯುತ್ತಲೇ ಇದೆ, ಈ ಬಾರಿ 1.15 ಲಕ್ಷ ಕೋಟಿ ಸಾಲ ಪಡೆಯಲಿದೆ. ಜನರ ತಲೆ ಮೇಲೆ ಸಾಲ ಹೇರುವ ಬಜೆಟ್ ಮಂಡಿಸಲಿದ್ದಾರೆ. ನಂಜುಂಡಪ್ಪ ವರದಿಯಲ್ಲಿದ್ದ ಹಿಂದುಳಿದ ತಾಲೂಕುಗಳ ಸಂಖ್ಯೆ, ಗೋವಿಂದರಾವ್ ವರದಿಯಲ್ಲಿ ಇನ್ನಷ್ಟು ಅಧಿಕವಾಗಿದೆ. ಹಿಂದುಳಿದ ತಾಲೂಕುಗಳ ಅಭಿ ವೃದ್ಧಿಗೆ ಪ್ರತಿ ವರ್ಷ 15,000 ಕೋಟಿ ರೂ. ಮೀಸಲಿಡಬೇಕು ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದೇನೆ ಎಂದರು.

ಸಿಎಂ ಹುದ್ದೆಗೆ ಕಚ್ಚಾಟ ನಡೆಯುತ್ತಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗದಿದ್ದರೆ ರಾಜೀನಾಮೆ ನೀಡುತ್ತೇನೆ ಎಂಬುದಾಗಿ ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ. ಇಂತಹ ಸ್ಥಿತಿಯಲ್ಲಿ ಮಂಡಿಸುವ ಬಜೆಟ್‌ನಲ್ಲಿ ಪ್ರಧಾನಿ ಮೋದಿ ಟೀಕಿಸುವ ಅಂಶಗಳಿರುತ್ತದೆ. ಅಭಿಪ್ರಾಯ ಸಂಗ್ರಹಣೆ ಎಂಬುದನ್ನೇ ಸಾಧನೆಯಾಗಿ ಬಜೆಟ್‌ನಲ್ಲಿ ತೋರಿಸಲಿದ್ದಾರೆ. ಪೂರ್ಣಗೊಂಡ ಯೋಜನೆಗಳ ಮಾಹಿತಿ ಇರುವುದಿಲ್ಲ, ತೆರಿಗೆ ಸಂಗ್ರಹದಲ್ಲೂ ಸರ್ಕಾರದ ಸಾಧನೆ ಕೇವಲ 48% ಮಾತ್ರ.

ನಿಗದಿ ಮಾಡಿದ ಅನುದಾನದಲ್ಲಿ ಕೆಲವು ಇಲಾಖೆಗಳಿಗೆ ಶೇ.40ರಷ್ಟೂ ಹಣ ಬಿಡುಗಡೆ ಮಾಡಿಲ್ಲ, ಖರ್ಚು ಮಾಡಲು ಇಲಾಖೆಗಳ ಬಳಿ ಹಣವೇ ಇಲ್ಲ. ಕೆಪಿಎಸ್‌ಸಿ ಎಂದರೆ ಕಳ್ಳರ ದಂಧೆಯ ಕೇಂದ್ರ, ಹಣ ಕೊಡಲ್ಲ ಎಂದರೆ ಕಚೇರಿಯ ಒಳಗೆ ಕೂಡ ಬಿಡುವುದಿಲ್ಲ, ಕುಟುಂಬ, ಜಾತಿ ಎನ್ನುವುದು ಮಾನದಂಡವೇ ಹೊರತು ಅಂಕ, ಪ್ರತಿಭೆ ಮುಖ್ಯವಲ್ಲ. ಕೆಪಿಎಸ್‌ಸಿ ಮುಚ್ಚಿ ಕೇಂದ್ರದ ಯುಪಿಎಸ್‌ಸಿ ಮಾದರಿ ಒಂದು ಸಂಸ್ಥೆ ನಿರ್ಮಿಸಬೇಕು, ಈ ಬಗ್ಗೆ ವಿಧಾನಸಭೆ ಅಧಿವೇಶನ ದಲ್ಲಿ ಮಾತಾಡುತ್ತೇನೆ, ಕಾನೂನು ಸುವ್ಯವಸ್ಥೆ, ಪ್ರತಿಭಟನೆ ಮೊದಲಾದ ವಿಷಯಗಳ ಬಗ್ಗೆ ಮಾತಾಡುತ್ತೇನೆ ಎಂದರು.

200 ಕೋಟಿ ಮೌಲ್ಯದ ಸರ್ಕಾರಿ ಭೂಮಿ ಕಬಳಿಕೆ ಹುನ್ನಾರ!

ಶ್ರೀವತ್ಸ ಅವರು, ಸರ್ವೆ ನಂಬರ್ 4ರ 24.10 ಎಕರೆಯನ್ನು ಮೈಸೂರು ಮಹಾರಾಜರ ಜಿಪಿಎ ಹೋಲ್ಡರ್ ಮೂಲಕ ಖರೀದಿ ಮಾಡಿರುವುದಾಗಿ ರೇವತಿ ಎಂ.ಉಚ್ಚಿಲ್ ಅವರು ದಾಖಲಾತಿ ಹೊಂದಿದ್ದರು ಎಂದು ತಿಳಿಸಿದರು.

ತಾವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ತಮ್ಮ 24.10 ಎಕರೆ ಭೂಮಿಯನ್ನು ಮಾರಾಟ ಮಾಡಲು ಅನುಮತಿ ನೀಡುವಂತೆ ರೇವತಿ ಎಂ.ವುಜ್ಜಿಲ್ ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಆದರೆ ಸರ್ಕಾರ, ರೇವತಿ ಅವರ ಮನವಿಯನ್ನು ತಿರಸ್ಕರಿಸಿತು. ತರುವಾಯ ರೇವತಿ ಅವರು ಸರ್ಕಾರದ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು ಎಂದು ಹೇಳಿದರು.

ರೇವತಿ ಅವರ ಮನವಿ ಆಲಿಸಿದ ಹೈಕೋರ್ಟ್, ಅರ್ಜಿದಾರರ ಅಭಿಪ್ರಾಯ ಆಲಿಸಿ, ಪರಿಶೀಲಿಸುವಂತೆ ಕೋರ್ಟ್ ಸರ್ಕಾರಕ್ಕೆ ಸೂಚನೆ ನೀಡಿತ್ತು. ತರುವಾಯ ಸರ್ಕಾರ 24.10 ಎಕರೆಯಲ್ಲಿ 8 ಎಕರೆಯನ್ನು ಮಾತ್ರ ಕೃಷಿ ಭೂಮಿಯಾಗಿ ಮಾರಾಟ ಮಾಡುವಂತೆ ತಾಕೀತು ಮಾಡಿ, ಇದಕ್ಕೆ ಅನುಮತಿ ನೀಡಿತ್ತು ಎಂದು ತಿಳಿಸಿದರು.

ಆದರೆ 1985ರಲ್ಲಿ ಅಂದಿನ ತಹಶೀಲ್ದಾರ್ ಅವು ರೇವತಿ ಎಂ.ಉಚ್ಚಿಲ್ ಅವರು ತಮ್ಮ ಮಾಲೀಕತ್ವದ ಭೂಮಿ ಎಂದು ಹೇಳುತ್ತಿದ್ದ 24.10 ಎಕರೆ ಜಮೀನು ಸರ್ಕಾರಕ್ಕೆ ಸೇರಿದ ಆಸ್ತಿಯಾಗಿದೆ ಎಂದು ಆದೇಶ ಹೊರಡಿಸಿದ್ದರು. ನಂತರ ಕೆಲವು ವರ್ಷಗಳ ನಂತರ ರೇವತಿ ಎಂ.ಉಚ್ಚಿಲ್ ಅವರು ನಿಧನರಾಗಿದ್ದಾರೆ ಎಂದರು.

1985 ರಂದು ಇದು ಸರ್ಕಾರದ ಆಸ್ತಿ ಎಂದು ತಹಶೀಲ್ದಾರ್ ಆದೇಶ ಹೊರಡಿಸಿದ ನಂತರ ರೇವತಿ ಎಂ.ಉಚ್ಚಿಲ್ ಅವರ ಕುಟುಂಬಸ್ಥರು ತಮ್ಮ ಮಾಲೀಕತ್ವದ ಭೂಮಿ ಎಂದು ಕಾನೂನಾತ್ಮಕವಾದ ಯಾವುದೇ ಪ್ರಕ್ರಿಯೆಯಲ್ಲಿ ತೊಡಗಲಿಲ್ಲ. ಆದರೆ 1985ರಲ್ಲಿ ತಹಶೀಲ್ದಾರ್ ಹೊರಡಿಸಿರುವ ಸರ್ಕಾರದ ಆಸ್ತಿ ಎಂಬ ಆದೇಶವನ್ನು ಪ್ರಶ್ನಿಸಿ ಉಚ್ಚಿಲ್ ಕುಟುಂಬಸ್ಥರು 2017ರಲ್ಲಿ ಹೈಕೋರ್ಟ್ ಮೊರೆ ಹೋದರು. ಅಚ್ಚರಿ ಸಂಗತಿ ಎಂದರೆ, ಕೆಲವು ತಿಂಗಳ ನಂತರ ನ್ಯಾಯಾಲಯದಿಂದ ದಾವೆ ವಾಪಾಸು ಪಡೆದು ಎಂದು ಶ್ರೀವತ್ಸ ಮಾಹಿತಿ ನೀಡಿದರು.

ಮೈಸೂರು ತಹಶೀಲ್ದಾರ್ ಅವರ ಉದ್ದೇಶ ಏನಿತ್ತೋ ಏನೋ ಆಗಸ್ಟ್ 4, 2025ರಂದು ಸರ್ವೆ ನಂಬರ್ 4ರ ಈ 24.10 ಎಕರೆ ಭೂಮಿ ಸರ್ಕಾರಕ್ಕೆ ಸೇರಿದೆ ಎಂದು ದಿಢೀರ್ ಆದೇಶ ಹೊರಡಿಸಿದರು. 1985ರಲ್ಲಿ ಅಂದಿನ ತಹಶೀಲ್ದಾರ್ ಅವರು ಇದು ಸರ್ಕಾರದ ಆಸ್ತಿ ಎಂದು ಹೊರಡಿಸಿದ ಆದೇಶ ಉಲ್ಲೇಖಿಸಿ ಈಗಿನ ತಹಶೀಲ್ದಾರ್ ಅವರು ಮರು ಆದೇಶ ಹೊರಡಿಸಿದ್ದಾರೆ ಎಂದು ಹೇಳಿದರು.

ತಹಶೀಲ್ದಾರ್ ಆದೇಶದ ತರುವಾಯ ಖಾಸಗಿ ವ್ಯಕ್ತಿಗಳು 45 ವರ್ಷದ ನಂತರ ಈ ಪ್ರಕರಣಕ್ಕೆ ಮರುಜೀವ ನೀಡಿದರು. ರೇವತಿ ಎಂ.ಉಚ್ಚಿಲ್ ಅವರ ಕುಟುಂಬಸ್ಥರು ಸರ್ಕಾರದ ಭೂಮಿಯನ್ನು ಡಿಸೆಂಬರ್ 12, 2025ರಂದು ಬೆಂಗಳೂರಿನ ಬಿ.ಎಸ್.ಡೆವಲಪರ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಮತ್ತು ಆದೀಶ ಡೆವಲಪರ್ಸ್‌ಗೆ 40 ಕೋಟಿಗೆ ಮಾರಾಟ ಮಾಡಲು ಸೇಲ್ ಅಗ್ರಿಮೆಂಟ್ ಮಾಡಿಕೊಂಡು, ಅದನ್ನು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ನೋಂದಣಿ ಮಾಡಿಸಿದ್ದಾರೆ ಎಂದು ತಿಳಿಸಿದರು.

ಆರ್‌ಟಿಸಿಯಲ್ಲಿ ಸರ್ಕಾರಕ್ಕೆ ಸೇರಿದ ಭೂಮಿ ಎಂದು ಸ್ಪಷ್ಟ ಉಲ್ಲೇಖವಿದ್ದರೂ ಸಬ್ ರಿಜಿಸ್ಟ್ರಾರ್ ಅವರು ಹೇಗೆ ಸೇಲ್ ಅಗ್ರಿಮೆಂಟ್ ರಿಜಿಸ್ಟರ್ ಮಾಡಿಕೊಟ್ಟರು ಎಂದು ಶ್ರೀವತ್ಸ ಅಚ್ಚರಿಯಿಂದಲೇ ಪ್ರಶ್ನಿಸಿದರು. ಚಾಮುಂಡಿಬೆಟ್ಟದ ತಪ್ಪಲಿನ ಸರ್ವೆ ನಂ.4ಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶದ ಆಧಾರದ ಮೇಲೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದಾರೆ. ಆದರೆ ಈ ಭೂಮಿಯು ಹೈಕೋರ್ಟ್ ಆದೇಶಕ್ಕೆ ಸಂಬಂಧಿಸಿದ್ದಲ್ಲ. ಆದರೂ ಸರ್ಕಾರದ ಆಸ್ತಿಯನ್ನು ಮಾರಾಟ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು. ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲರಾಜ್ ಅರಸ್, ವಕ್ತಾರ ಮೋಹನ್, ಮಾಧ್ಯಮ ವಕ್ತಾರ ಮಹೇಶ್ ರಾಜ್ ಅರಸ್, ಮಾಜಿ ಮೇಯರ್ ಶಿವಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಡಿ ತನಿಖೆಗೆ ಪತ್ರ ಬರೆಯುವೆ

ಚಾಮುಂಡಿಬೆಟ್ಟದ ತಪ್ಪಲಿನ 24.10 ಎಕರೆ ಸರ್ಕಾರಿ ಭೂಮಿ ಮಾರಾಟ ಸಂಬಂಧ ಆಗಿರುವ ಸೇಲ್ ಅಗ್ರಿಮೆಂಟ್‌ನಲ್ಲಿ 40 ಕೋಟಿ ವ್ಯವಹಾರವನ್ನು ತೋರಿಸಿದ್ದಾರೆ. ಈ ಹಣ ಎಲ್ಲಿಂದ ಬಂತು ಎಂಬ ಬಗ್ಗೆ ಜಾರಿ ನಿರ್ದೇಶನಾಲಯ ತನಿಖೆ ಮಾಡಬೇಕು ಎಂದು ಶ್ರೀವತ್ಸ ಒತ್ತಾಯಿಸಿದರು. ಇವರಿಗೆ 40 ಕೋಟಿ ರೂ. ಎಲ್ಲಿಂದ ಬಂದಿದೆ, ಇದರ ಮೂಲ ಯಾವುದು ಎಂಬ ಬಗ್ಗೆ ಇಡಿಯವರು ತನಿಖೆ ಮಾಡಿದರೆ ಇದರ ಹಿಂದಿರುವ ಮತ್ತಷ್ಟು ಅಕ್ರಮಗಳು ಪತ್ತೆಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಈ ಸಂಬಂಧ ತನಿಖೆ ನಡೆಸುವಂತೆ ಇಡಿ ಅವರಿಗೆ ಪತ್ರ ಬರೆಯುತ್ತಿದ್ದೇನೆ. ಅಲ್ಲದೆ ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ ಪ್ರಕರಣದ ಬಗ್ಗೆ ಪೂರ್ಣ ವಿವರ ನೀಡಿ ದೂರು ನೀಡುತ್ತೇನೆ. ಈ ಸರ್ಕಾರಿ ಭೂಮಿ ಉಳಿಸುವ ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇನೆ. ಈ ಮೂಲಕ ಸರ್ಕಾರದ ಆಸ್ತಿ ಉಳಿಸುತ್ತೇನೆ ಎಂದು ಶ್ರೀವತ್ಸ ತಿಳಿಸಿದರು.

ಸಬ್ ರಿಜಿಸ್ಟ್ರಾರ್ ಅಮಾನತು ಮಾಡಲೇಬೇಕು

ದಾಖಲಾತಿಯಲ್ಲಿ ಸರ್ಕಾರಿ ಆಸ್ತಿ ಎಂದು ಬದಲಾಯಿಸುವುದರ ಜೊತೆಗೆ ಇದರ ಸೇಲ್ ಅಗ್ರಿಮೆಂಟ್ ನೋಂದಣಿ ಮಾಡಿದ ಸಬ್ ರಿಜಿಸ್ಟ್ರಾರ್ ಅವರನ್ನು ಅಮಾನತು ಮಾಡಬೇಕು. ಸರ್ಕಾರದ ಆಸ್ತಿಯನ್ನು ಯಾವ ಆಧಾರದ ಮೇಲೆ ಸೇಲ್ ಅಗ್ರಿಮೆಂಟ್ ಮಾಡಿದ್ದಾರೆಂಬ ಬಗ್ಗೆ ತನಿಖೆ ನಡೆಸಬೇಕು. ಇದಕ್ಕೂ ಮುನ್ನ ಸಬ್ ರಿಜಿಸ್ಟ್ರಾರ್ ಅಮಾನತು ಮಾಡಲೇಬೇಕು ಎಂದು ಒತ್ತಾಯಿಸಿದರು. ಸರ್ಕಾರಿ ಆಸ್ತಿ ಮುಟ್ಟಿದರೆ ನಮಗೆ ಜೈಲು ಖಚಿತ ಎಂಬ ಸಂದೇಶ ಇಡೀ ರಾಜ್ಯಕ್ಕೆ ಹೋಗಬೇಕು. ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ದಿಟ್ಟ ಕ್ರಮ ಕೈಗೊಳ್ಳಬೇಕು. **–ಟಿ.ಎಸ್.ಶ್ರೀವತ್ಸ**

ಅಮೆರಿಕ–ಇಸ್ರೇಲ್ ವಿರುದ್ಧ ಇರಾನ್ ಪ್ರಬಲ ಪ್ರತಿದಾಳಿ

ಮತ್ತೆ ಶಾಲೆಗಳ ಮೇಲೆ ದಾಳಿ: ಅಮೆರಿಕ ಮತ್ತು ಇಸ್ರೇಲ್ ಹಾರಿಸಿದ ಕ್ಷಿಪಣಿಗಳು ನೈರುತ್ಯ ಟೆಹರಾನ್‌ನ ಪರಾಂಡ್ ಪಟ್ಟಣದ ಎರಡು ಶಾಲೆಗಳಿಗೆ ಬಡಿದಿವೆ ಎಂದು ಇರಾನ್‌ನ ಫಾರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಹಾನಿಗೊಳಗಾದ ತರಗತಿ ಕೊಠಡಿ ಮತ್ತು ಅವಶೇಷಗಳ ಫೋಟೋಗಳನ್ನು ಹಂಚಿಕೊಳ್ಳಲಾಗಿದೆ. ಹತ್ತಿರದ ಹಲವಾರು ವಸತಿಗಳೂ ಹಾನಿಯಾಗಿದೆ ಎನ್ನಲಾಗಿದ್ದು, ಸಾವು–ನೋವಿನ ಮಾಹಿತಿ ತಿಳಿದುಬಂದಿಲ್ಲ.

ಅಮೆರಿಕಾಗೆ ಹೊಡೆತ: ಶ್ರೀಲಂಕಾ ಕರಾವಳಿಯಲ್ಲಿ ಅಮೆರಿಕವು ಇರಾನ್‌ನ ಐಆರ್‌ಐಎಸ್ ಡೇನಾ ಯುದ್ಧನೌಕೆಯನ್ನು ಮುಳುಗಿಸಿದ ಕೆಲವೇ ಗಂಟೆಗಳಲ್ಲಿ ಇರಾನ್ ಕೂಡ ಸೇಡು ತೀರಿಸಿಕೊಂಡಿದೆ. ಪರ್ಷಿಯನ್ ಗಲ್ಫ್‌ನಲ್ಲಿ ಅಮೆರಿಕದ ಬೃಹತ್ ತೈಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದು, ಹಡಗು ಹೊತ್ತಿ ಉರಿದಿದೆ. ಇದರ ಬೆನ್ನಲ್ಲೇ ಜಗತ್ತಿನ ಪ್ರಮುಖ ತೈಲ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ತನ್ನ ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡಿರುವುದಾಗಿ ಇರಾನ್ ಘೋಷಿಸಿದೆ. ಅಮೆರಿಕ, ಇಸ್ರೇಲ್ ಮತ್ತು ಯುರೋಪಿಯನ್ ರಾಷ್ಟ್ರಗಳ ಯಾವುದೇ ಹಡಗುಗಳು ಈ ಮಾರ್ಗದಲ್ಲಿ ಸಾಗಿದರೆ ಹೊಡೆದು ಉರುಳಿಸುವುದಾಗಿ ಎಚ್ಚರಿಕೆ ನೀಡಿದೆ. ಪರಿಣಾಮ ಜಾಗತಿಕ ತೈಲ ಬೆಲೆಗಳಲ್ಲಿ ದಿಢೀರ್ ಏರಿಕೆ ಭೀತಿ ಜೊತೆಗೆ ಯುರೋಪ್ ಮತ್ತು ಅಮೆರಿಕದ ಆರ್ಥಿಕತೆಗೆ ದೊಡ್ಡ ಪೆಟ್ಟು ನೀಡಲಿದೆ.

ಇಬ್ಬರು ಭಾರತೀಯರ ಬಲಿ: ಓಮನ್ ಕೊಲ್ಲಿಯಲ್ಲಿ ಸ್ಕೈಲೈಟ್ ಎಂಬ ತೈಲ ಟ್ಯಾಂಕರ್ ಮೇಲೆ ನಡೆದ ದಾಳಿಯಲ್ಲಿ ಭಾರತದ ಆಶಿಶ್‌ಕುಮಾರ್ ಮತ್ತು ದಿಲೀಪ್ ಸಿಂಗ್ ಎಂಬ ನಾವಿಕರು ಸಾವನ್ನಪ್ಪಿದ್ದಾರೆ. ಪ್ರಸ್ತುತ 1,074 ಭಾರತೀಯ ಸಿಬ್ಬಂದಿ ಅಪಾಯಕಾರಿ ಪರ್ಷಿಯನ್ ಗಲ್ಫ್‌ನಲ್ಲಿರುವ ಹಡಗುಗಳಲ್ಲೇ ಉಳಿದುಕೊಂಡಿದ್ದಾರೆ ಎಂದು ವರದಿಯಾಗಿದೆ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಭೀಕರ ಸಂಘರ್ಷವು ಈಗ ಜಾಗತಿಕ ನೌಕಾಯಾನ ಮತ್ತು ಭಾರತೀಯ ಸೈನಿಕರ ಪಾಲಿಗೂ ಕಂಟಕವಾಗಿ ಪರಿಣಮಿಸಿದೆ.

ಬಿಗಿಯಾದ ಬಿಕ್ಕಟ್ಟು: ಟೆಹರಾನ್ ಅಜರ್ಬೈಜಾನ್ ಮತ್ತು ಕತಾರ್‌ನಲ್ಲಿರುವ ಅಮೆರಿಕದ ನೆಲೆಗಳ ಮೇಲೆ ಹೊಸ ದಾಳಿ ನಡೆಸಿರುವುದಾಗಿ ವರದಿಯಾಗಿದೆ. ಈ ನಡುವೆ ಇರಾನ್ ಬಿಕ್ಕಟ್ಟು ಮತ್ತಷ್ಟು ಬಿಗಿಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಇದು ದಿನಗಳಲ್ಲ, ವಾರಗಳು ಮತ್ತು ಬಹುಶಃ ತಿಂಗಳುಗಳ ಕಾಲ ಬಿಕ್ಕಟ್ಟು ಮುಂದು ವರೆಯುವ ಸೂಚನೆಗಳಿವೆ ಎಂದು ಯುಕೆಯ ಮಧ್ಯಪ್ರಾಚ್ಯ ಸಚಿವ ಹಮೀಶ್ ಫಾಲ್ಕನರ್ ಸಂಸತ್ತಿಗೆ ತಿಳಿಸಿದ್ದಾರೆ.

ಮಾರಣಹೋಮ: ಯುದ್ಧದ ಈ ಆರು ದಿನಗಳಲ್ಲಿ ಸಾವಿರಾರು ಮಂದಿ ಅಸುನೀಗಿದ್ದಾರೆ. ಮೊದಲ ದಿನ(ಫೆ.28) ಇರಾನ್‌ನ ಮಿನಾಬ್‌ನ ಶಾಲೆಯ ಮೇಲೆ ನಡೆದ ಕ್ಷಿಪಣಿ ದಾಳಿಯಲ್ಲಿ 175 ಶಾಲಾ ಬಾಲಕಿಯರು ಹಾಗೂ ಸಿಬ್ಬಂದಿ ಸೇರಿದಂತೆ ಸುಮಾರು 1,230 ಜನ ಸಾವನ್ನಪ್ಪಿದ್ದಾರೆ. ಮಾರ್ಚ್ 1 ರಂದು ಬೀಟ್ ಶೆಮೆಶ್ ಮೇಲೆ ಇರಾನ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ 11 ಮಂದಿ, ಅಮೆರಿಕಾದ 6 ಮಂದಿ ಸೇವಾ ಸದಸ್ಯರು ಮೃತಪಟ್ಟರು. ಇಸ್ರೇಲ್ ದಾಳಿಯಲ್ಲಿ ಲೆಬನಾನ್‌ನ 77 ಮಂದಿ ಸಾವನ್ನಪ್ಪಿದ್ದಾರೆ. ಕ್ಷಿಪಣಿ ಪ್ರತಿಬಂಧದ ನಂತರ ಬಹ್ರೇನ್‌ನ ಸಲ್ಮಾನ್ ಕೈಗಾರಿಕಾ ನಗರದಲ್ಲಿ ಉಂಟಾದ ಬೆಂಕಿಯಿಂದ ಒಬ್ಬರು, ಇರಾನ್ ಮೇಲಿನ ದಾಳಿಯಲ್ಲಿ ಇಬ್ಬರು ಕುವೈತ್ ಸೈನಿಕರು ಸೇರಿದಂತೆ ನಾಲ್ವರು, ಮಾರ್ಷಲ್ ದ್ವೀಪಗಳ ಧ್ವಜ ಹೊತ್ತ ಉತ್ಪನ್ನ ಟ್ಯಾಂಕರ್‌ಗೆ ಕ್ಷಿಪಣಿ ಬಡಿದು ಓರ್ವ ಹಾಗೂ ಯುಎಇಯಲ್ಲಿ ಮೂವರು, ಹೀಗೆ ಅಮೆರಿಕ ಹಾಗೂ ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಲ್ಲಿ ಸಾವಿರಾರು ಜನ ಬಲಿಯಾಗುತ್ತಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 6 ಮಾರ್ಚ್ 2026

ಚೆಸ್ಕಾಂ ಪ್ರಧಾನ ಕಚೇರಿಯ 4ನೇ ಮಹಡಿ ಕಟ್ಟಡ ಉದ್ಘಾಟನೆ

ಆಡಳಿತಾತ್ಮಕ ಕಾರ್ಯಗಳು ಇನ್ನಷ್ಟು ವೇಗ, ಸುಗಮತೆ ದೊರಕಲಿದೆ



ಚೆಸ್ಕಾಂ ಪ್ರಧಾನ ಕಚೇರಿಯಲ್ಲಿ ನಿರ್ಮಿಸಿರುವ ನಾಲ್ಕನೇ ಮಹಡಿ ಕಟ್ಟಡವನ್ನು ಚೆಸ್ಕಾಂ ಅಧ್ಯಕ್ಷರು, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡರು ಹಾಗೂ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ.ಮುನಿಗೋಪಾಲ್‌ರಾಜು ಉದ್ಘಾಟಿಸಿದರು.

ಮೈಸೂರು, ಮಾ.5(ಜಿಎ)–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಚೆಸ್ಕಾಂ)ದ ಪ್ರಧಾನ ಕಚೇರಿಯಲ್ಲಿ ನಿರ್ಮಿಸಿರುವ 4ನೇ ಮಹಡಿ ಕಟ್ಟಡವನ್ನು ಚೆಸ್ಕಾಂ ಅಧ್ಯಕ್ಷರು, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡರು ಹಾಗೂ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್‌ರಾಜು ಉದ್ಘಾಟಿಸಿದರು.

ಈ ವೇಳೆ ರಮೇಶ್ ಬಂಡಿಸಿದ್ದೇಗೌಡರು ಮಾತನಾಡಿ, ನೂತನ ಕಚೇರಿ ಉದ್ಘಾಟನೆಯಿಂದಾಗಿ ನಿಗಮದ ಆಡಳಿತಾತ್ಮಕ ಕಾರ್ಯಗಳಿಗೆ ಇನ್ನಷ್ಟು ವೇಗ ಮತ್ತು ಸುಗಮತೆ ದೊರೆಯಲಿದೆ. ನಿಗಮದ ಕಾರ್ಯಕ್ಷಮತೆಯನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಉತ್ತಮ ವಾತಾವರಣದ ಮೂಲಕ ಕೆಲಸ ಮಾಡಲು ಈ ಕಟ್ಟಡ ನೆರವಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ವ್ಯಾಪ್ತಿಯ ವಿವಿಧ ಉಪ ವಿಭಾಗಗಳಲ್ಲಿ ಅನುಕಂಪದ ಆಧಾರದಲ್ಲಿ ಉದ್ಯೋಗ ಪಡೆದವರಿಗೆ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ನೇಮಕಾತಿ ಪತ್ರ ವಿತರಿಸಿದರು. ಅದರಂತೆ ಅಶ್ವಿನಿ, ಮಹಾಂತೇಶ್, ಸುಮಂತ್ ರಾಜ್ ಅರಸ್, ಡಿ.ಮನೋಜ್, ಕೆ.ಕವಿತಾ, ಯುವಶ್ರೀ ಹಾಗೂ ವಿಜಯ ಕುಮಾರಿ ಅವರುಗಳು ಸಹಾಯಕರಾಗಿ ನೇಮಕವಾದರೆ. ಕಿರಿಯ ಸಹಾಯಕರಾಗಿ ದೀಕ್ಷಿತ್ ಹಾಗೂ ಸಹಾಯಕ ಪವರ್ ಮ್ಯಾನ್ ಹುದ್ದೆಗೆ ಶ್ರೀಧರ್ ಅವರಿಗೆ ನೇಮಕಾತಿ ಪತ್ರವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಿಗಮದ ತಾಂತ್ರಿಕ ನಿರ್ದೇಶಕ ಡಿ.ಜೆ.ದಿವಾಕರ್, ಮುಖ್ಯ ಆರ್ಥಿಕ ಅಧಿಕಾರಿ ಜಿ.ರೇಣುಕಾ, ಪ್ರಧಾನ ವ್ಯವಸ್ಥಾಪಕರಾದ ಲಿಂಗರಾಜಮ್ಮ ಡಾ.ಬಿ.ಆರ್. ರೂಪ, ಆರ್.ರಾಮಸ್ವಾಮಿ, ಮುಖ್ಯ ಇಂಜಿನಿಯರ್ ಎಲ್.ಲೋಕೇಶ್, ಅಧೀಕ್ಷಕ ಇಂಜಿನಿಯರ್‌ಗಳಾದ ಸುನೀಲ್ ಕುಮಾರ್, ಸೋಮಶೇಖರ್ ಸೇರಿದಂತೆ ನಿಗಮ ಕಾರ್ಯಾಲಯದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮೈಸೂರು ವೃತ್ತದ ಸೆಸ್ಕ್ ಜಾಗೃತ ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟ ಗ್ರಾಮಸ್ಥರಿಂದ ಮನವಿ ಸಲ್ಲಿಕೆ...



ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿಯನ್ನು ಗ್ರೇಟರ್ ಮೈಸೂರು ವ್ಯಾಪ್ತಿಗೆ ಒಳಪಡಿಸಬಾರದೆಂದು ಚಾಮುಂಡಿಬೆಟ್ಟ ಗ್ರಾಮಸ್ಥರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಸಲ್ಲಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ಭರತ್, ಸದಸ್ಯರಾದ ಸುಜಾತ ವೆಂಕಟೇಶ, ಶಂಭುಲಿಂಗ, ಮುಖಂಡರಾದ ಶಿವರಾಮ ನಾಯಕ್, ನಾರಾಯಣ, ದೊರೆಸ್ವಾಮಿ, ಸಣ್ಣಮಾದು, ಮಣಿಕುಮಾರ್, ವಿಜಯ, ಮುದ್ದಪ್ಪ, ಮಂಜುನಾಥ್, ದಿನೇಶ್, ರಾಜೇಂದ್ರ, ನಾಗರಾಜು, ಲಕ್ಷ್ಮಣನಾಯಕ, ಮೋಹನ್ ಮತ್ತಿತರರಿದ್ದರು.

ಅಸ್ಪೃಶ್ಯತೆ ನಿವಾರಣೆ ಅರಿವು ಕಾರ್ಯಾಗಾರ

ಜಾತಿಮುಕ್ತ ಸಮಾಜ ನಿರ್ಮಾಣಕ್ಕೆ ಸರ್ವರು ಸಹಕರಿಸಬೇಕು

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಸವರಾಜು ಸಲಹೆ
- ಅಂಗನವಾಡಿ ಕಾರ್ಯಕರ್ತರು ಗ್ರಾಮೀಣ ಜನರಲ್ಲಿ ಸಮ ಸಮಾಜ ನಿರ್ಮಾಣದ ಅರಿವು ಮೂಡಿಸುವಂತೆ ಸಲಹೆ



ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ಅಸ್ಪೃಶ್ಯತೆ ನಿವಾರಣೆ ಅರಿವು ಕಾರ್ಯಾಗಾರವನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪ ನಿರ್ದೇಶಕ ಬಿ.ಬಸವರಾಜು ಉದ್ಘಾಟಿಸಿದರು.

ಮೈಸೂರು,ಮಾ.5(ಎಂಟಿವೈ)–ಜಾತಿಮುಕ್ತ ಸಮ ಸಮಾಜ ನಿರ್ಮಾಣ ಹಾಗೂ ಅಸ್ಪೃಶ್ಯತೆ ನಿವಾರಣೆಗೆ ಎಲ್ಲರೂ ಪಣ ತೊಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಇಲಾಖೆ ಉಪನಿರ್ದೇಶಕ ಬಿ.ಬಸವರಾಜು ಮನವಿ ಮಾಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಅಸ್ಪೃಶ್ಯತೆ ನಿವಾರಣೆ ಅರಿವು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಜಾತಿಮುಕ್ತ ಸಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಿದರು. ಅಲ್ಲದೆ, ಅಸ್ಪೃಶ್ಯತೆ ನಿವಾರಣೆ ಮಾಡಲು ಪಣ ತೊಟ್ಟಿದ್ದರು. ಆದರೆ ಇಂದಿಗೂ ಸಮಾಜದಲ್ಲಿ ಜಾತಿ ವ್ಯವಸ್ಥೆ ನೆಲೆಯೂರಿದೆ. ಅದನ್ನು ತೊಡೆದು ಹಾಕಲು ಮುಂದಾಗಬೇಕು. ಅಸ್ಪೃಶ್ಯತೆ ಆಚರಣೆ ಕಾನೂನುಬಾಹಿರವಾಗಿದ್ದು, ಅಂತಹ ಅನಿಷ್ಟ ಆಚರಣೆ ಕಂಡುಬಂದರೆ ಮಾಹಿತಿ ನೀಡಬೇಕು. ಈ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರು ಗ್ರಾಮೀಣ ಜನರಿಗೆ ಅರಿವು ಮೂಡಿಸುವ ಮೂಲಕ ಅಸ್ಪೃಶ್ಯತೆ ಆಚರಣೆ ನಿರ್ಮೂಲನೆ ಮಾಡಲು ಎಲ್ಲರೂ ಕೈಜೋಡಿಸಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮಾತನಾಡಿ, ಸಮಾಜದಲ್ಲಿನ ಅಸ್ಪೃಶ್ಯತೆ ತೊಡೆದು ಹಾಕಲು ವಿಶೇಷ ವಿಂಗ್(ಘಟಕ) ಅಥವಾ ನಾಗರಿಕ ಹಕ್ಕು ನಿರ್ದೇಶನಾಲಯವನ್ನು ರಚಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯಿಂದ 1975ರಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯನ್ನು ಬೇರ್ಪಡಿಸಲಾಗಿದೆ. ಸಮಾಜದಲ್ಲಿ ಅಸ್ಪೃಶ್ಯತೆ ಆಚರಣೆ ಮಾಡದಂತೆ ಪ್ರತಿಯೊಂದು ಮನೆಗೂ ಮಾಹಿತಿ ತಲುಪಿಸಬೇಕು. ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಶ್ರಮಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯವನ್ನು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಮುಂದೆ ತರುವಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸಲಿದ್ದಾರೆ. ನಾಗರಿಕ ಸಮಾಜದಲ್ಲಿ ಮೇಲು–ಕೀಳು ಎಂಬ ಭೇದ–ಭಾವ, ಜಾತೀಯತೆ ಇಂದಿಗೂ ತಾಂಡವವಾಡುತ್ತಿದೆ. ಇದನ್ನು ನಾಶ ಮಾಡಲು ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸೋಣ. ಅಸ್ಪೃಶ್ಯತೆ ಆಚರಣೆ ಮಾಡದಂತೆ ಸರ್ಕಾರದಿಂದ ಹಲವಾರು ಕಾಯ್ದೆಗಳು ಮತ್ತು ಶಿಕ್ಷೆಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದರು.

ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಉಪ ಪೊಲೀಸ್ ವರಿಷ್ಠಾಧಿಕಾರಿ ಅನುಶ್ರೀ ರಾಣಿ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರನ್ನು ರಕ್ಷಣೆ ಮಾಡಲು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಸಂವಿಧಾನದಲ್ಲಿ ಹಲವು ಕಾಯ್ದೆಗಳನ್ನು ಜಾರಿಗೆ ತರಲಾಗಿದೆ. ಅಸ್ಪೃಶ್ಯತೆ ಆಚರಣೆ ಮಾಡುವುದು ಕಾನೂನು ಬಾಹಿರ. ಹಿಂದಿನ ಕಾಲದಲ್ಲಿ ವರ್ಣಭೇದ ವ್ಯವಸ್ಥೆಯಿಂದ ತುಂಬಿತ್ತು. ಎಲ್ಲರಿಗೂ ಶಿಕ್ಷಣವನ್ನು ಪಡೆಯುವ ಹಕ್ಕಿರಲಿಲ್ಲ. ಜ್ಞಾನದ ಕೊರತೆ ಹೊಂದಿದ್ದರು. ಆದರೆ ಇಂದು ಎಲ್ಲರೂ ಸರಿಸಮಾನವಾಗಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ತಾರತಮ್ಯ ಮಾಡುವುದು ಕಡಿಮೆಯಾಗಿದೆ. ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟು ಪಂಗಡಕ್ಕೆ ಸೇರಿದ ವ್ಯಕ್ತಿಯ ಮೇಲೆ ಯಾವುದೇ ಅಪರಾಧ ಕೃತ್ಯವನ್ನು ಎಸಗಿದರೆ ಭಾರತೀಯ ದಂಡ ಸಂಹಿತೆ (1980ರ 45)ರ ಅಡಿಯಲ್ಲಿ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುತ್ತದೆ ಎಂದು ಎಚ್ಚರಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದ್ದರೂ ಇಂದಿಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯದ ಜನಾಂಗವನ್ನು ಕೆಲವು ಕಡೆ ದೇವಾಲಯ ಪ್ರವೇಶಕ್ಕೆ ನಿರ್ಬಂಧಿಸಲಾಗಿದೆ. ಕಾನೂನು ವ್ಯವಸ್ಥೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗವನ್ನು ದೇವಸ್ಥಾನಕ್ಕೆ ಪ್ರವೇಶಿಸಲು ಅವಕಾಶ ಮಾಡಿಕೊಡಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಚಿಂತಕ ಡಾ.ಕೃಷ್ಣಮೂರ್ತಿ ಚಮರಂ ಸೇರಿದಂತೆ ವಿವಿಧ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದರು.

ಕನಿಷ್ಠ ವೇತನ ಪರಿಷ್ಕರಣೆ ಅಂತಿಮ ಅಧಿಸೂಚನೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಕಾರ್ಮಿಕ ಭವನದ ಎದುರು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.


ಮೈಸೂರು, ಮಾ.5(ಎಂಕೆ)– ಕನಿಷ್ಟ ವೇತನ ಪರಿಷ್ಕರಣೆಯ ಅಂತಿಮ ಅಧಿಸೂಚನೆ ಹೊರಡಿಸುವಂತೆ ಹಾಗೂ ತುಟ್ಟಿಭತ್ಯೆ ಹೆಚ್ಚಿಸಿ ಕನಿಷ್ಟ ವೇತನ ಜಾರಿಗೊಳಿಸುವಂತೆ ಆಗ್ರಹಿಸಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಕಾರ್ಮಿಕ ಭವನದ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು, ಕಾರ್ಮಿಕರ ಆರ್ಥಿಕ ಸುಧಾರಣೆಗಾಗಿ ಕನಿಷ್ಠ ಕೂಲಿ ಅಧಿಸೂಚನೆಯ ಅಂತಿಮ ಅಧಿಸೂಚನೆಯನ್ನು ಪ್ರಕಟಿಸಬೇಕು. ಮೂರು ವರ್ಷಗಳ ವಿಳಂಬವನ್ನು ಸರಿದೂಗಿಸುವ ನಿಟ್ಟಿನಲ್ಲಿ 2022ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆಯಾಗಬೇಕು. ತುಟ್ಟಿಭತ್ಯೆ (ಡಿಎ) ದರವನ್ನು ಪ್ರತಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಪಾಯಿಂಟ್ 8 ಪೈಸೆಗೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಹಾಗೆಯೇ ಸುಪ್ರೀಂಕೋರ್ಟ್ ಮಾನದಂಡಗಳ ಪ್ರಕಾರ ಕ್ಯಾಲೋರಿ ಸೇವನೆಯನ್ನು ಪ್ರಸ್ತಾವಿತ 2321.4ರ ಬದಲಿಗೆ 2700 ಕ್ಯಾಲೋರಿಗಳಿಗೆ ಹೆಚ್ಚಿಸಬೇಕು. ಗಾರ್ಮೆಂಟ್ಸ್, ಬೀಡಿ, ಅಗರಬತ್ತಿ ಮತ್ತು ಪ್ಲಾಂಟೇಷನ್ ವಲಯಗಳಲ್ಲಿ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಶೇ.40 ವೇತನ ಅಸಮಾನತೆಯನ್ನು ಏಕರೂಪದ ಅಧಿಸೂಚನೆಯ ತಾರತಮ್ಯವನ್ನು ಅಂತ್ಯಗೊಳಿಸಬೇಕೆಂದು ಎಂದು ಆಗ್ರಹಿಸಿದರು.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಎನ್.ಕೆ.ದೇವದಾಸ್, ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಕಾರ್ಯದರ್ಶಿಗಳಾದ ಕೆ.ಜಿ.ಸೋಮರಾಜೇಅರಸ್, ರಾಮು ಮತ್ತಿತರರು ಉಪಸ್ಥಿತರಿದ್ದರು.

ಭಾರತೀಯ ಬಾಲಕಿಯರ ಟೆನ್ನಿಸ್ ತಂಡಕ್ಕೆ ಪದ್ಮಪ್ರಿಯಾ ಆಯ್ಕೆ



ಮೈಸೂರು, ಮಾ.5(ಎಂಟಿವೈ)– ಮೈಸೂರಿನ ಉದಯೋನ್ಮುಖ ಟೆನಿಸ್ ಪಟು ಪದ್ಮಪ್ರಿಯಾ ರಮೇಶ್‌ಕುಮಾರ್ ಅವರು 14 ವರ್ಷದೊಳಗಿನ ಭಾರತೀಯ ಬಾಲಕಿಯರ ಟೆನಿಸ್ ತಂಡಕ್ಕೆ ಆಯ್ಕೆಯಾಗಿದ್ದು, ಮಾಸಾಂತ್ಯದಲ್ಲಿ ಶ್ರೀಲಂಕಾದಲ್ಲಿ ನಡೆಯುವ ಐಟಿಎಫ್ ಏಷ್ಯಾ 14 ವರ್ಷದೊಳಗಿನ ಡೆವಲಪ್‌ಮೆಂಟ್ ಚಾಂಪಿಯನ್‌ಶಿಪ್–2026 ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

14 ವರ್ಷದೊಳಗಿನ ಟೆನಿಸ್ ಆಟಗಾರರಲ್ಲಿ ಭಾರತ ಮತ್ತು ಏಷ್ಯಾದ ಕ್ರಮವಾಗಿ 1 ಮತ್ತು 2ನೇ ಶ್ರೇಯಾಂಕ ಆಟಗಾರ್ತಿಯಾಗಿರುವ ಪದ್ಮಪ್ರಿಯಾ ರಾಷ್ಟ್ರೀಯ ಮತ್ತು ಏಷ್ಯಾಮಟ್ಟದ ಹಲವು ಪಂದ್ಯಾವಳಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತದ ನಂ.1 ಶ್ರೇಯಾಂಕ ಹೊಂದಿದ್ದ ಪದ್ಮಪ್ರಿಯಾ ಅವರನ್ನು 14 ವರ್ಷದೊಳಗಿನ ಬಾಲಕಿಯರ ಭಾರತದ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಶ್ರೀಲಂಕಾದ ಕೊಲಂಬೋದಲ್ಲಿ ಮಾ.28ರಿಂದ ಏ.10ರವರೆಗೆ ನಡೆಯುವ ಐಟಿಎಫ್ ಏಷ್ಯಾ ಅಂಡರ್ 14 ಡೆವಲಪ್‌ಮೆಂಟ್ ಚಾಂಪಿಯನ್‌ಶಿಪ್ 2026 ಪಂದ್ಯಾವಳಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಈ ಪಂದ್ಯಾವಳಿ ಬಳಿಕ ಪದ್ಮಪ್ರಿಯಾ ಏ.21ರಿಂದ 26ರವರೆಗೆ ಮಲೇಷಿಯಾದ ಕುಚಿಂಗ್‌ನಲ್ಲಿ ನಡೆಯುವ ಐಟಿಎಫ್ ವಿಶ್ವ ಜೂನಿಯರ್ಸ್ ತಂಡ ಸ್ಪರ್ಧೆ–ಅಂತಿಮ ಅರ್ಹತಾ ಪಂದ್ಯಾವಳಿಯಲ್ಲೂ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಕೂರ್ಗಳ್ಳಿಯಲ್ಲಿರುವ ಎಕ್ಸೆಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿ ಪದ್ಮಪ್ರಿಯಾ, ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಹಾಗೂ ಚಾಮರಾಜನಗರ ವೃತ್ತದ ಸಿಸಿಎಫ್ ಡಾ.ಮಾಲತಿಪ್ರಿಯಾ ದಂಪತಿ ಪುತ್ರಿಯಾಗಿದ್ದಾರೆ. ರಘುವೀರ್ ಟೆನ್ನಿಸ್ ಅಕಾಡೆಮಿ ತರಬೇತುದಾರ ರಘುವೀರ್ ಪೊನ್ನುಸ್ವಾಮಿ, ಫಿಟ್‌ನೆಸ್ ತರಬೇತುದಾರ ಎಕ್ಸ್‌ಟ್ರಾನ್ಸ್ ಹೈ ಪರ್ಫಾರ್ಮೆನ್ಸ್ ಸೆಂಟರ್‌ನಿಂದ ಸಾಗರ್ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಈಕೆಯ ಸಾಧನೆಗೆ ಎಕ್ಸೆಲ್ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲ ಕೆ.ಜೆ. ಮ್ಯಾಥ್ಯೂಸ್ ಅಭಿನಂದಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮಾ.5(ಜಿಎ)–ಮೈಸೂರಿನ ದಟ್ಟಗಳ್ಳಿ ಆದಿತ್ಯ ವೃತ್ತ ಬಳಿಯ ರೋಟರಿ ಮೈಸೂರು ಶಾಲೆಯಲ್ಲಿ ಮಾ.8ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೋಟೇರಿಯನ್ ಅನಿಲ್ ಸಲ್ಡಾನ ಮಾತನಾಡಿ, ವಿವಿಧ ಆಸ್ಪತ್ರೆಗಳು ಶಿಬಿರಕ್ಕೆ ಕೈಜೋಡಿಸಿವೆ. ಶಿಬಿರದಲ್ಲಿ ಮೂಳೆ ಖನಿಜ ಸಾಂದ್ರತೆ ಪರೀಕ್ಷೆ, ಇಎನ್‌ಟಿ ತಪಾಸಣೆ, ಕಣ್ಣಿನ ತಪಾಸಣೆ, ಶ್ವಾಸಕೋಶ ತಪಾಸಣೆ, ಇಸಿಜಿ, ಬಿಪಿ, ಶುಗರ್ ಪರೀಕ್ಷೆ, ವೈದ್ಯರ ಸಮಾಲೋಚನೆ ಇರಲಿವೆ. ರಿಯಾಯಿತಿ ದರದಲ್ಲಿ ಎಲ್ಲಾ ವಿಧದ ರಕ್ತ ಪರೀಕ್ಷೆ, ಎಕ್ಸ್–ರೇ, ಅಲ್ಟ್ರಾ ಸೌಂಡ್, ಸಿಟಿ ಸ್ಕ್ಯಾನ್ ಕೂಪನ್ ನೀಡಲಾಗುವುದು ಎಂದರು. ಗೋಷ್ಠಿಯಲ್ಲಿ ರವಿಶಂಕರ್, ಡಾ.ಮಧುಸೂದನ್, ಪ್ರಭಾವತಿ ಇದ್ದರು.

ನಾಲೆಯಲ್ಲಿ ಮುಳುಗಿ ಅಸುನೀಗಿದ ಮಕ್ಕಳಿಗೆ ತಲಾ 2 ಲಕ್ಷ ಪರಿಹಾರ



ಪ್ರವಾಸಕ್ಕೆ ತೆರಳಿದ್ದ ವೇಳೆ ನಾಲೆಯಲ್ಲಿ ಮುಳುಗಿ ಸಾವನ್ನಪ್ಪಿದ್ದ ವಿದ್ಯಾರ್ಥಿಗಳ ಪೋಷಕರಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ.ಆರ್ಥಿಕ ಸಹಾಯಧನ ಚೆಕ್ ಅನ್ನು ನೀಡಲಾಯಿತು.

ಮೈಸೂರು, ಮಾ.5(ಎಂಕೆ)– ಪ್ರವಾಸಕ್ಕೆ ತೆರಳಿದ್ದ ವೇಳೆ ನಾಲೆಯಲ್ಲಿ ಮುಳುಗಿ ಸಾವನ್ನಪ್ಪಿದ್ದ ಮೈಸೂರಿನ ಶಾಂತಿನಗರ ಮದರಸದ ನಾಲ್ವರು ವಿದ್ಯಾರ್ಥಿಗಳ ಪೋಷಕರಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ತಲಾ ಎರಡು ಲಕ್ಷ ರೂ. ಆರ್ಥಿಕ ಸಹಾಯಧನದ ಚೆಕ್ ಅನ್ನು ಗುರುವಾರ ನೀಡಲಾಯಿತು.

ಮೈಸೂರಿನ ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯ ಶಾಂತಿನಗರದಲ್ಲಿರುವ ಮದರಸದಿಂದ 2025ರ ನವೆಂಬರ್ ತಿಂಗಳಲ್ಲಿ ಪ್ರವಾಸಕ್ಕೆಂದು ತೆರಳಿದ್ದ ವೇಳೆ ವಿದ್ಯಾರ್ಥಿನಿಯರಾದ ಆಯಿಷಾ, ಉಮ್ಮೇಹಾನಿ, ಸಾನಿಯ ಪರ್ವೀನ್ ಮತ್ತು ಅಫ್ರೀನಾ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಪೊಲೀಸ್ ಠಾಣೆ ವ್ಯಾಪ್ತಿಯ ನಾಲೆಯಲ್ಲಿ ಮುಳುಗಿ ಮೃತಪಟ್ಟಿದ್ದರು.

ಮಕ್ಕಳನ್ನು ಕಳೆದುಕೊಂಡ ಪೋಷಕರಿಗೆ ಮಾನವೀಯ ದೃಷ್ಟಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಗರಿಷ್ಠ ಪರಿಹಾರವನ್ನು ಮಂಜೂರು ಮಾಡುವಂತೆ ಶಾಸಕ ತನ್ವೀರ್ ಸೇಠ್ ಹಾಗೂ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮನವಿ ಮೇರೆಗೆ ತಲಾ 2 ಲಕ್ಷ ರೂ.ನಂತೆ 8 ಲಕ್ಷ ರೂ.ಪರಿಹಾರವನ್ನು ಮಂಜೂರು ಮಾಡಲಾಗಿತ್ತು. ಅದರಂತೆ ಮೈಸೂರು ಜಿಪಂ ಸಭಾಂಗಣದಲ್ಲಿ ಶಾಸಕ ತನ್ವೀರ್ ಸೇಠ್ ಹಾಗೂ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಕ್ಕಳನ್ನು ಕಳೆದುಕೊಂಡ ಪೋಷಕರಿಗೆ ಪರಿಹಾರದ ಚೆಕ್ ವಿತರಣೆ ಮಾಡಿದರು. ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ, ತಹಸೀಲ್ದಾರ್ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ...



ಮೈಸೂರು ಮಹಾನಗರಪಾಲಿಕೆ ಕಚೇರಿಯಲ್ಲಿ ಮೈಸೂರು ನಗರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮಾಜಿ ಉಪಮೇಯರ್ ಶ್ರೀಮತಿ ಪುಷ್ಪವಲ್ಲಿ, ಉಪಾಧ್ಯಕ್ಷ ಗಿರೀಶ್, ಹಾಗೂ ಸಮಿತಿ ಸದಸ್ಯರಾದ ಚಂದ್ರಕಲಾ ಶಿವರಾಜ್ ಅವರನ್ನು ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಭೂಷಣ್, ರವಿ, ನಾಗೇಶ್, ಡೈರಿ ವೆಂಕಟೇಶ್, ಸದಾ, ಇಂದಿರಾ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಕನ್ನಡಿಗರ ವ್ಯಾಪಾರ ವೇದಿಕೆ ಪ್ರಾರಂಭ



ಮೈಸೂರು.ಮಾ.5– ಕರ್ನಾಟಕದಾದ್ಯಂತ ಕನ್ನಡ ಮಾತನಾಡುವ ವ್ಯಾಪಾರಿಗಳನ್ನು ಸಂಘಟಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ ಸ್ಥಾಪನೆಯಾಗಿರುವ ಕನ್ನಡಿಗರ ವ್ಯಾಪಾರ ವೇದಿಕೆಯ ಮೈಸೂರು ತಂಡವಾದ 'ಅರಮನೆ ತಂಡ'ದ ಉದ್ಘಾಟನಾ ಕಾರ್ಯಕ್ರಮವು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ಕನ್ನಡಿಗರ ವ್ಯಾಪಾರ ವೇದಿಕೆಯು ಕನ್ನಡ ಮಾತನಾಡುವ ಎಲ್ಲಾ ವ್ಯಾಪಾರಿಗಳನ್ನು ಒಟ್ಟುಗೂಡಿಸಿ, ವಿವಿಧ ಕ್ಷೇತ್ರಗಳ ವ್ಯಾಪಾರಿಗಳ ಒಂದು ತಂಡವನ್ನು ರಚಿಸಲಾಗುತ್ತದೆ. ವೇದಿಕೆಯ ಸಭೆಗಳು ಕನ್ನಡದಲ್ಲಿ ನಡೆಯುವುದರಿಂದ ಸ್ಥಳೀಯ ವ್ಯಾಪಾರಿಗಳಿಗೆ ತಮ್ಮ ವ್ಯವಹಾರವನ್ನು ಸಹ ಸದಸ್ಯರಿಗೆ ವಿವರಿಸಲು, ಸದಸ್ಯರ ಸಂಪರ್ಕ, ಪರಿಚಯ, ಇತರ ವ್ಯಾಪಾರಿಗಳ ಅನುಭವಗಳನ್ನು, ವ್ಯವಹಾರದ ಬೆಳವಣಿಗೆಗೆ ಸಹಾಯ ಮಾಡುವಂತಹ ಅವಕಾಶಗಳನ್ನು ತಿಳಿಯಲು ಸಹಾಯ ಮಾಡುತ್ತದೆ ಎಂದು ವೇದಿಕೆ ತಿಳಿಸಿದೆ. ಕಾರ್ಯಕ್ರಮದಲ್ಲಿ ಕನ್ನಡಿಗರ ವ್ಯಾಪಾರ ವೇದಿಕೆಯ ಸ್ಥಾಪಕರಾದ ಶರತ್ ಖದ್ರಿ, ಸೇರಿದಂತೆ ವೇದಿಕೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂಧಿವಾತ, ಮೂಳೆ ರೋಗ ಸಂಬಂಧ ಉಚಿತ ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು, ಮಾ.5–ಹಾರ್ಟ್ ಸಂಸ್ಥೆ, ಮೈಸೂರು ಹಾಗೂ ಸಂಧಿವಾತ ಮತ್ತು ಮೂಳೆ ರೋಗ ತಜ್ಞರಾದ ಡಾ.ಮಹಾಬಲೇಶ್ವರ ಮಾದಾಪುರದ ಸಂಯುಕ್ತಾಶ್ರಯದಲ್ಲಿ ಸಂಧಿವಾತ ಮತ್ತು ಮೂಳೆ ರೋಗ ಕುರಿತು ಉಚಿತ ತಪಾಸಣೆ, ರಕ್ತ ಪರೀಕ್ಷೆ ಮತ್ತು ಚಿಕಿತ್ಸಾ ಶಿಬಿರವನ್ನು ಅಗ್ರಹಾರದ ಸಂಧಿವಾತ ಮತ್ತು ಕೀಲು ರೋಗ ಚಿಕಿತ್ಸಾ ಕೇಂದ್ರದಲ್ಲಿ ಮಾ.8ರಂದು ಬೆಳಗ್ಗೆ 9ರಿಂದ 1 ಮಧ್ಯಾಹ್ನ 1ರವರೆಗೆ ಆಯೋಜಿಸಲಾಗಿದೆ. ಮಾಹಿತಿಗೆ ಮೊ.7338463486, 8867525114 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು: ಯುವರಾಜ ಕಾಲೇಜು ಪ್ರಾಧ್ಯಾಪಕ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಡಿ. ಪರಶುರಾಮ ಅವರ ಮಾರ್ಗದರ್ಶನದಲ್ಲಿ ಪ್ರತಿಮಾ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಮೈಸೂರು ನಗರದಲ್ಲಿ 2026ರ ಜನವರಿ-ಫೆಬ್ರವರಿಯಲ್ಲಿ 32 ಸೈಬರ್ ಪ್ರಕರಣ ದಾಖಲು

ಒಟ್ಟಾರೆ 62,57,906 ರೂ. ಸಂತ್ರಸ್ತರ ಕೈ ಸೇರಿದೆ

ಮೈಸೂರು,ಮಾ.5(ಪಿಎಂ)– ಮೈಸೂರು ನಗರ ಪೊಲೀಸ್ ವ್ಯಾಪ್ತಿಗೆ ಸಂಬಂಧಿಸಿದಂತೆ 2026ರ ಜನವರಿ ಮತ್ತು ಫೆಬ್ರವರಿಯಲ್ಲಿ 32 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಈ ಸಂಬಂಧ ಒಟ್ಟಾರೆ 62,57,906 ರೂ. ಸಂತ್ರಸ್ತರಿಗೆ ಕಲ್ಪಿಸಲಾಗಿದೆ.

ಈ 32 ಪ್ರಕರಣಗಳ ಸಂಬಂಧ ಒಟ್ಟಾರೆ 7,22,54,919 ರೂ. ಕಳೆದು ಹೋಗಿದ್ದರೆ, 94,63,340 ರೂ. ಬ್ಯಾಂಕ್ ಖಾತೆಗಳಲ್ಲಿ ಸ್ಥಗಿತಗೊಂಡಿದೆ. ಈ ಪೈಕಿ ಜನವರಿಯಲ್ಲಿ ಒಟ್ಟು 20 ಪ್ರಕರಣಗಳು ದಾಖಲಾಗಿದ್ದರೆ, ಅವುಗಳಲ್ಲಿ 5,57,28,279 ರೂ. ಕಳೆದು ಹೋಗಿದ್ದರೆ, 50,84,053 ರೂ. ಖಾತೆಗಳಲ್ಲಿ ಸ್ಥಗಿತಗೊಂಡಿದೆ. ಈ ಸಂಬಂಧ 27,08,235 ರೂ. ಬಿಡುಗಡೆಗೊಂಡಿದೆ. ಅದೇ ರೀತಿಯಲ್ಲಿ ಫೆಬ್ರವರಿಯಲ್ಲಿ 12 ಪ್ರಕರಣಗಳು ದಾಖಲಾಗಿದ್ದು, 1,65,26,640 ರೂ. ಕಳೆದು ಹೋಗಿದೆ. ಈ ಸಂಬಂಧ 43,79,287 ಬ್ಯಾಂಕ್ ಖಾತೆಗಳಲ್ಲಿ ಸ್ಥಗಿತಗೊಂಡಿದ್ದರೆ, 35,49,671 ರೂ. ಬಿಡುಗಡೆಯಾಗಿದೆ. ಈ ಎಲ್ಲಾ 32 ಪ್ರಕರಣಗಳು ತನಿಖಾ ಹಂತದಲ್ಲಿವೆ.

ಅಲ್ಲದೆ, ಫೆಬ್ರವರಿ 28ರವರೆಗೆ ಹೂಡಿಕೆ (ವ್ಯಾಪಾರ) ಸಂಬಂಧ 15, ಡಿಜಿಟಲ್ ಅರೆಸ್ಟ್ 3, ಜಿಐಎಫ್‌ಟಿ 3, ವೈವಾಹಿಕ ವಂಚನೆ 1, ಇತರೆ ವ್ಯವಹಾರ ವಂಚನೆ 1 ಹಾಗೂ ಡೇಟಾ ಕಳ್ಳತನ 1 ಪ್ರಕರಣಗಳು ಸೇರಿದಂತೆ ಒಟ್ಟು 24 ಪ್ರಕರಣಗಳು ದಾಖಲಾಗಿದ್ದು, ಈ ಸಂಬಂಧ 7,02,83,779 ರೂ. ನಗದು ಕಳೆದು ಹೋಗಿದೆ.

ಟಿ.ನರಸೀಪುರ ರೇಷ್ಮೆ ಕಾರ್ಖಾನೆ ಆವರಣದಲ್ಲಿ

ಕ್ರೀಡಾಂಗಣ ವಿರೋಧಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಪ್ರತಿಭಟನೆ



ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.5(ಎಂಕೆ)– ಟಿ.ನರಸಿಪುರದಲ್ಲಿರುವ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ (ಕೆಎಸ್‌ಐಸಿ) ರೇಷ್ಮೆ ನೂಲು ಬಿಚ್ಚುವ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಖಂಡಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಹಳೆ ಮೈಮುಲ್ ಡೈರಿಯಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಕಾಲ್ನಡಿಗೆ ಜಾಥಾ ನಡೆಸಿದ ರೈತರು, ರಾಜ್ಯ ಸರ್ಕಾರದ ವಿರುದ್ಧ ದಿಕ್ಕಾರ ಕೂಗಿ ಕೆಎಸ್‌ಐಸಿ ಹಾಗೂ ರೇಷ್ಮೆ ಬೆಳೆಗಾರರನ್ನು ಉಳಿಸುವಂತೆ ಆಗ್ರಹಿಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1912ರಲ್ಲಿ ಕೆಎಸ್‌ಐಸಿ ಕಾರ್ಖಾನೆ ಸ್ಥಾಪನೆ ಮಾಡುವ ಮೂಲಕ ಮೈಸೂರು ರೇಷ್ಮೆ ಪರಂಪರೆ, ರೇಷ್ಮೆ ಕೃಷಿ ಹಾಗೂ ಉದ್ಯೋಗ ಸೃಷ್ಟಿಸಿದ್ದಾರೆ. ಸಾವಿರಾರು ಜನರಿಗೆ ಆಶ್ರಯ ನೀಡಿರುವ ಟಿ.ನರಸೀಪುರದ ಕೆಎಸ್‌ಐಸಿ ನೂಲು ಬಿಚ್ಚುವ ಕಾರ್ಖಾನೆ ಜಾಗದಲ್ಲಿರುವ ಕ್ರೀಡಾಂಗಣ ನಿರ್ಮಾಣವಾಗಬಾರದು ಎಂದರು.

ಅಲ್ಲದೆ ಕ್ರೀಡಾಂಗಣ ನಿರ್ಮಾಣದಿಂದ 500ಕ್ಕೂ ಹೆಚ್ಚು ಮರಗಳಿಗೆ ಕೊಡಲಿ ಬೀಳಲಿದ್ದು, ಪಕ್ಷಿ ಸಂಪತ್ತಿನ ನಾಶವಾಗಲಿದೆ. ತಾಪಮಾನ ಹೆಚ್ಚಾಗುತ್ತಿರುವ ಕಾಲದಲ್ಲಿ ಮರಗಳನ್ನು ಕಡಿಯುವುದು ಸರಿಯಲ್ಲ. ಆದ್ದರಿಂದ ಕೂಡಲೇ ರಾಜ್ಯ ಸರ್ಕಾರ ಟಿ.ನರಸೀಪುರದ ಕೆಎಸ್‌ಐಸಿ ಕಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಚಿಂತನೆಯನ್ನು ಕೈಬಿಡಬೇಕು. ಜೊತೆಗೆ ಬೇರೆ ಸ್ಥಳ ನಿಗದಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು. ಬಳಿಕ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮೈಸೂರು ಮಿತ್ರ ಶುಕ್ರವಾರ 6 ಮಾರ್ಚ್ 2026

ಪಂಚ ಗ್ಯಾರಂಟಿಗಳಿಗೆ ಎಸ್‌ಸಿ, ಎಸ್‌ಟಿ ಹಣ ದುರ್ಬಳಕೆ

ಹಣ ವಾಪಸ್ ಕೊಡದಿದ್ದರೆ ಕೊಡಗು ಜಿಲ್ಲಾ ಗಡಿ ಬಂದ್

ಬಿಜೆಪಿ ಪರಿಶಿಷ್ಟ ಜಾತಿ, ಪಂಗಡ ಮೋರ್ಚಾ ಎಚ್ಚರಿಕೆ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾದ ಜಿಲ್ಲಾಧ್ಯಕ್ಷ ಪಿ.ಎಂ.ರವಿ ಮಾತನಾಡಿದರು.

ಮಡಿಕೇರಿ, ಮಾ.5– ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ಕಳೆದ 3 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕೆ ಮೀಸಲಿಟ್ಟಿದ್ದ 39 ಸಾವಿರ ಕೋಟಿ ರೂ.ಗಳನ್ನು ಬಳಸಿ ಕೊಳ್ಳುವ ಮೂಲಕ ದುರ್ಬಳಕೆ ಮಾಡಿದೆ. ಈ ಹಣವನ್ನು ಹಿಂದಿರುಗಿಸಲು ಅಗತ್ಯ ಕ್ರಮ ಕೈಗೊಳ್ಳದಿದ್ದಲ್ಲಿ ಕೊಡಗಿನ ಗಡಿಭಾಗದ ಗೇಟ್‌ಗಳನ್ನು ಮುಚ್ಚಿ ಉಗ್ರ ಹೋರಾಟವನ್ನು ರೂಪಿಸಲಾಗುತ್ತದೆ ಎಂದು ಬಿಜೆಪಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೋರ್ಚಾ ಎಚ್ಚರಿಕೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಬಿಜೆಪಿಯ ಪರಿಶಿಷ್ಟ ಜಾತಿ ಮೋರ್ಚಾದ ಜಿಲ್ಲಾಧ್ಯಕ್ಷ ಪಿ.ಎಂ.ರವಿ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳಿಗೆ ಮೀಸಲಾಗಿದ್ದ ಹಣವನ್ನು ಪಂಚ ಗ್ಯಾರಂಟಿ ಗಳಿಗೆ ಬಳಕೆ ಮಾಡಿದೆ. ಮುಂಬರುವ ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಟರಿಗೆ ಮೀಸಲಾಗಿದ್ದ ಹಣದಲ್ಲಿ ಉಳಿಕೆಯಾಗಿರುವ 15 ಸಾವಿರ ಕೋಟಿ ರೂ.ಗಳನ್ನು ಬಳಸಿ ಕೊಳ್ಳಲು ಮುಂದಾಗುತ್ತಿದೆ ಎನ್ನುವ ಮಾಹಿತಿ ಇದೆ. ಯಾವುದೇ ಕಾರಣಕ್ಕೂ ಶೋಷಿತ ಸಮುದಾಯದ ಕಲ್ಯಾಣಕ್ಕೆ ಮೀಸಲಾದ ಹಣವನ್ನು ದುರ್ಬಳಕೆ ಮಾಡಬಾರದು. ಬಜೆಟ್‌ಗೂ ಮುನ್ನವೇ ಮುಖ್ಯಮಂತ್ರಿಗಳು ಪರಿಶಿಷ್ಟರಿಗೆ ಮೀಸಲಾದ ಹಣಕ್ಕೆ ಕೈ ಹಾಕುವುದಿಲ್ಲ ಎಂದು ಘೋಷಿಸ ಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರ 2023–24ನೇ ಸಾಲಿನಲ್ಲಿ ಪಂಚ ಗ್ಯಾರಂಟಿಗಳಿಗಾಗಿ ಪರಿಶಿಷ್ಟರಿಗೆ ಮೀಸಲಾಗಿದ್ದ ಹಣದಲ್ಲಿ 11,144 ಕೋಟಿ ರೂ.ಗಳನನ್ನು ಬಳಸಿಕೊಂಡಿದ್ದರೆ, 2024–25ನೇ ಸಾಲಿನಲ್ಲಿ 14,282 ಕೋಟಿ, 2025–26ನೇ ಸಾಲಿನಲ್ಲಿ 13,433 ಕೋಟಿ ರೂ.ಗಳನ್ನು ಬಳಸಿಕೊಂಡಿದೆ ಎಂದು ಗಂಭೀರ ಆರೋಪ ಮಾಡಿದರು. 2025–26ನೇ ಸಾಲಿನ ಬಜೆಟ್‌ನಲ್ಲಿ ಪರಿಶಿಷ್ಟರಿಗಾಗಿ 42,018 ಕೋಟಿ ಮೀಸಲಿಡಲಾಗಿತ್ತು. ಇದರಲ್ಲಿ 23,788 ಕೋಟಿ ಮಾತ್ರ ಬಳಕೆಯಾಗಿದೆ. ಆದರೆ, ಬಳಕೆಯಾದ ಹಣದಲ್ಲಿ 13,443 ಕೋಟಿಗಳನ್ನು ಗ್ಯಾರಂಟಿಗಳಿಗೆ ಬಳಸಲಾಗಿದೆ. ಆದ್ದರಿಂದ ಪರಿಶಿಷ್ಟರ ಕಲ್ಯಾಣಕ್ಕೆ ಬಳಕೆಯಾದದ್ದು ಕೇವಲ 10,345 ಕೋಟಿ ರೂ. ಮಾತ್ರವೇ ಎಂದು ಬೇಸರ ವ್ಯಕ್ತಪಡಿಸಿದರು. ಸರ್ಕಾರ ಪಂಚ ಗ್ಯಾರಂಟಿಗಳಿಗೆ ಹಣವನ್ನು ವಿನಿಯೋಗಿಸುತ್ತಿರುವುದರಿಂದ ಪರಿಶಿಷ್ಟರ ಕಲ್ಯಾಣ ಎನ್ನುವುದು ಮರೀಚಿಕೆಯಾಗಿದೆ. ಬಹುತೇಕ ಎಲ್ಲಾ ನಿಗಮಗಳು, ವಿವಿಧ ಕಲ್ಯಾಣ ಯೋಜನೆಗಳು ಅಗತ್ಯ ನೆರವು ಲಭ್ಯವಿಲ್ಲದೆ ಸೊರಗಿರುವುದಾಗಿ ಬೇಸರ ವ್ಯಕ್ತಪಡಿಸಿದರು.

ದಲಿತ ಸಂಘಟನೆಗಳಿಂದ ಪ್ರತಿಭಟನೆ: ರಾಜ್ಯದ ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ಬೆಂಬಲ ನೀಡಿದ್ದ ದಲಿತ ಸಂಘಟನೆಗಳೆ ಪ್ರಸ್ತುತ ಪರಿಶಿಷ್ಟ ಕಲ್ಯಾಣಕ್ಕೆ ಮೀಸಲಾಗಿದ್ದ ಹಣವನ್ನು ಪಂಚ ಗ್ಯಾರಂಟಿಗಳಿಗೆ ಬಳಕೆಯಾಗುತ್ತಿರುವುದನ್ನು ಅರ್ಥೈಸಿಕೊಂಡು, ಸರ್ಕಾರದ ನಿಲುವನ್ನು ವಿರೋಧಿಸಿ ಪ್ರತಿಭಟನೆಗೂ ಮುಂದಾಗಿರುವುದಾಗಿ ಹೇಳಿದರು. ಕಳೆದ 3 ವರ್ಷಗಳ ಅವಧಿಯಲ್ಲಿ ದುರ್ಬಳಕೆಯಾಗಿರುವ ಹಣವನ್ನು ಸರ್ಕಾರ ಹಿಂದಕ್ಕೆ ನೀಡಬೇಕು. ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿದ್ದ 39 ಸಾವಿರ ಕೋಟಿ ಹಣದಲ್ಲಿ ಎಲ್ಲಾ ಜಿಲ್ಲೆಗಳಿಗೆ ದಲಿತರ ಕಲ್ಯಾಣಕ್ಕಾಗಿ ತಲಾ 1 ಕೋಟಿ ಹಣವನ್ನು ಒದಗಿಸಬೇಕು. ಪರಿಶಿಷ್ಟರ ಅಭ್ಯುದಯಕ್ಕೆ ಮೀಸಲಾಗಿರುವ ಎಲ್ಲಾ ನಿಗಮಗಳಿಗೆ ತಲಾ 1 ಸಾವಿರ ಕೋಟಿ ರೂ.ಗಳ ಅನುದಾನವನ್ನು ಬಜೆಟ್ ಸಂದರ್ಭದಲ್ಲಿ ಘೋಷಿಸಬೇಕು. ಇಲ್ಲವಾದಲ್ಲಿ ದೊಡ್ಡ ಮಟ್ಟದ ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ ಎಂದು ತಿಳಿಸಿದರು.

ಸರ್ಕಾರ ಆರ್ಥಿಕವಾಗಿ ದಿವಾಳಿ: ರಾಜ್ಯ ಸರ್ಕಾರ ಪ್ರಸ್ತುತ ಪೌರ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ವಿವಿಧ ಇಲಾಖೆಗಳ ಉದ್ಯೋಗಿಗಳಿಗೆ ಮಾಸಿಕ ವೇತನ ಕೊಡಲು ಪರದಾಡುವ ಮೂಲಕ ಆರ್ಥಿಕವಾಗಿ ದಿವಾಳಿಯಾಗಿದೆ. ತನ್ನ ಈ ಎಡವಟ್ಟುಗಳನ್ನು ಮುಚ್ಚಿಕೊಳ್ಳಲು ಮೀಸಲಾತಿಯ ಗೊಂದಲವನ್ನು ಸೃಷ್ಟಿಸಿ ಯುವಜನರ ಕನಸುಗಳನ್ನು ಹಾಳು ಮಾಡುತ್ತಿರುವುದಾಗಿ ಆರೋಪಿಸಿದರು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು ಹಾಗೂ ದಿಶಾ ಸಮಿತಿ ಸದಸ್ಯ ಆರ್.ಕೆ. ಚಂದ್ರ ಮಾತನಾಡಿ, ಸುಳ್ಳು ಭರವಸೆಗಳ ಮೂಲಕ ಅಧಿಕಾರಕ್ಕೆ ಬಂದವರ ನಿರ್ಲಕ್ಷ್ಯತೆಗಳಿಂದಾಗಿ ಇಂದಿಗೂ ಜಿಲ್ಲೆಯ ಆದಿವಾಸಿ ಗಿರಿಜನರ ಹಾಡಿಗಳು ಕನಿಷ್ಠ ನೀರು, ಬೆಳಕು, ಸಂಪರ್ಕ ವ್ಯವಸ್ಥೆಗಳಿಂದ ವಂಚಿತವಾಗಿದೆ. ಈ ಬಗ್ಗೆ ಜಿಲ್ಲೆಯ ಶಾಸಕರು ಕಾಳಜಿ ವಹಿಸುವ ಅಗತ್ಯವಿದೆ ಎಂದು ತಿಳಿಸಿದರು. ರಾಜ್ಯ ಬಜೆಟ್‌ನಲ್ಲಿ ಜಿಲ್ಲೆಯ ಪರಿಶಿಷ್ಟರ ಅಭಿ ವೃದ್ಧಿಗೆ ಹೆಚ್ಚಿನ ಅನುದಾನವನ್ನು ಒದಗಿಸಬೇಕು. ಇಲ್ಲ ವಾದಲ್ಲಿ ಜಿಲ್ಲೆಯ ಗಡಿ ಭಾಗದ ಸಂಪಾಜೆ, ಆನೆ ಚೌಕೂರು ಸೇರಿದಂತೆ ಎಲ್ಲಾ ಗೇಟ್‌ಗಳನ್ನು ಮುಚ್ಚಿ ಪ್ರತಿಭಟಿಸುವುದಾಗಿ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಪಿ.ಕೆ.ಚಂದ್ರು, ಎಸ್‌ಸಿ ಮಡಿಕೇರಿ ಗ್ರಾಮಾಂ ತರ ಮಂಡಲದ ಪ್ರಧಾನ ಕಾರ್ಯದರ್ಶಿ ಈರಾ ಸುಬ್ಬಯ್ಯ, ಬಿಜೆಪಿ ಎಸ್‌ಟಿ ಮೋರ್ಚಾದ ವಿರಾಜಪೇಟೆ ಮಂಡಲದ ಅಧ್ಯಕ್ಷ ಮುತ್ತುರಾಜು ಉಪಸ್ಥಿತರಿದ್ದರು.

ಇದು ಘೋರ ಅನ್ಯಾಯ

ರಾಜ್ಯ ಸರ್ಕಾರ 56,342 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದೆ. ಆದರೆ, ಈ ಭರ್ತಿ ಪ್ರಕ್ರಿಯೆಯನ್ನು ಶೇ.56ರ ಮೀಸಲಾತಿಗೆ ಬದಲಾಗಿ ಹಳೆಯ ಶೇ.50ರ ಮೀಸಲಾತಿಯಡಿ ನಡೆಸುತ್ತಿರುವುದು ಪರಿಶಿಷ್ಟರಿಗೆ ಮಾಡುತ್ತಿರುವ ಘೋರ ಅನ್ಯಾಯವಾಗಿದೆ. ಇದರಿಂದ ರಾಜ್ಯ ವ್ಯಾಪಿ 4 ಸಾವಿರದಷ್ಟು ಪರಿಶಿಷ್ಟರು ಅನ್ಯಾಯಕ್ಕೆ ಒಳಗಾಗಲಿದ್ದಾರೆ. ಒಳ ಮೀಸಲಾತಿಯ ವರ್ಗೀಕರಣಕ್ಕಾಗಿ ನ್ಯಾ.ನಾಗಮೋಹನದಾಸ್ ಆಯೋಗ ರಚನೆಯ ಸಂದರ್ಭ ಮತ್ತು ಸರ್ಕಾರ ಒಳ ಮೀಸಲಾತಿಯ ಮಸೂದೆ ಮಂಡಿಸಿ ರಾಜ್ಯಪಾಲರ ಅನುಮೋದನೆ ಪಡೆಯುವ ಹಂತದಲ್ಲಿ ಶೇ.56 ಮೀಸಲಾತಿ ಇತ್ತು. ಇದೀಗ ಏಕಾಏಕಿ ಈ ಮೀಸಲಾತಿಯನ್ನು ಶೇ.50ಕ್ಕೆ ಇಳಿಸುವಾಗ ಪರಿಶಿಷ್ಟ ವರ್ಗದವರನ್ನು ಕತ್ತಲಲ್ಲಿ ಇರಿಸಿದೆ. –ಎಂ.ಎಂ.ಪರಮೇಶ್ವರ್ ಬಿಜೆಪಿ ಪರಿಶಿಷ್ಟ ಪಂಗಡ

ಅಪಾಯದ ಸ್ಥಿತಿಯಲ್ಲಿ ಸೀಗೆ ಹೊಸೂರು–ಕಕ್ಕೆ ಹೊಳೆ ಸೇತುವೆ

ದಿನನಿತ್ಯ ಕಲ್ಲುಕೋರೆಗಳ ಲಾರಿಗಳ ಸಂಚಾರ, ಕುಸಿದುಬೀಳುವ ಸ್ಥಿತಿಯಲ್ಲಿ ಸೇತುವೆ



ಶಿಥಿಲಗೊಂಡಿರುವ ಸೇತುವೆಯ ಮೇಲೆ ಭಾರೀ ವಾಹನಗಳು ಸಂಚರಿಸುತ್ತಿರುವುದು. ಸೇತುವೆ ಬಿರುಕು ಬಿಟ್ಟಿರುವುದು(ಬಲಚಿತ್ರ).

ಮಡಿಕೇರಿ,ಮಾ.5– ಕುಶಾಲನಗರ ತಾಲೂಕುನಿಂದ ಕೂಡಿಗೆ, ಮದಲಾಪುರ, ಸೀಗೆಹೊಸೂರು, ಯಲಕನೂರು ಮಾರ್ಗವಾಗಿ ಸೋಮವಾರಪೇಟೆಯನ್ನು ಸಂಪರ್ಕಿಸುವ ಬ್ರಿಟಿಷರ ಕಾಲದ ಸೀಗೆಹೊಸೂರು ಕಕ್ಕೆಹೊಳೆ ಸೇತುವೆ ಸಂಪೂರ್ಣ ಶಿಥಿಲಗೊಂಡಿದೆ. ಸೇತುವೆಯಲ್ಲಿ ಬಿರುಕು ಕಾಣಿಸಿಕೊಂಡು ಕುಸಿದು ಬೀಳುವ ಆತಂಕ ಸೃಷ್ಟಿಸಿದೆ. ಈ ಸೇತುವೆಯ ಮೇಲೆ ಕಲ್ಲು ಕೋರೆಗಳ ನೂರಾರು ಲಾರಿಗಳು ಹಾಗೂ ಟ್ರ್ಯಾಕ್ಟರ್‌ಗಳು ಸಂಚರಿಸುತ್ತಿದ್ದು, ಸೇತುವೆ ಈಗಲೋ ಆಗಲೋ ಬೀಳುವ ಹಂತದಲ್ಲಿದೆ ಎಂದು ಸ್ಥಳೀಯ ನಿವಾಸಿಗಳು ಆತಂಕ ತೋಡಿಕೊಂಡಿದ್ದಾರೆ. ಕೂಡಿಗೆ, ಬ್ಯಾಡಗೊಟ್ಟ, ಕಣಿವೆ, ಹಳೆ ಮದಲಾಪುರ, ಯಲಕನೂರು ಹೊಸಳ್ಳಿ ಮೊದಲಾದ ಗ್ರಾಮೀಣ ಪ್ರದೇಶಗಳ ರೈತರ ಪ್ರಮುಖ ಸಂಚಾರಕ್ಕೆ ಇರುವ ಈ ಸೇತುವೆ ಕುಸಿದು ಬಿದ್ದರೆ ಈ ಭಾಗದ ಜನರ ಬದುಕು ಅತಂತ್ರವಾಗಲಿದೆ.

ಆದ್ದರಿಂದ ಜಿಲ್ಲಾಡಳಿತ ಕೂಡಲೇ ಈ ಸೇತುವೆಯ ಮೇಲೆ ಕಲ್ಲು ಕ್ವಾರಿಗಳ ಲಾರಿಗಳ ಸಂಚಾರವನ್ನು ಸ್ಥಗಿತಗೊಳಿಸಬೇಕು. ಕೂಡಲೇ ಬದಲಿ ಸೇತುವೆಯ ನಿರ್ಮಾಣಕ್ಕೆ ಯೋಜನೆ ರೂಪಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಬೇಕು. ಈ ಮಾರ್ಗದಲ್ಲಿ ದಿನವೂ ನೂರಾರು ವಾಹನಗಳು ಸಂಚರಿಸುತ್ತಿದ್ದು ಭಾರಿ ವಾಹನಗಳ ಓಡಾಟ ಹೆಚ್ಚಾಗಿದೆ. ಇದರಿಂದ ಸೇತುವೆಯಲ್ಲಿ ಉಂಟಾದ ಬಿರುಕು ಯಾವುದೇ ಕ್ಷಣದಲ್ಲಿ ಅನಾಹುತಕ್ಕೆ ಎಡೆ ಮಾಡಿಕೊಡುವ ಸಾಧ್ಯತೆ ಇರುವುದಾಗಿ ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

ಈ ಸಂದರ್ಭ ಕೂಡಿಗೆ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಸ್ಥಳೀಯ ನಿವಾಸಿ ಅನಂತ್ ಮಾತನಾಡಿ, ಮಸಗೋಡು ಹಾಗೂ ಕಣಿವೆ ಗ್ರಾಮಗಳನ್ನು ಸಂಪರ್ಕಿಸುವ ಕಕ್ಕೆ ಹೊಳೆ ಸೇತುವೆಯ ದುರಸ್ತಿ ಬಗ್ಗೆ ಮಡಿಕೇರಿ ಕ್ಷೇತ್ರದ ಶಾಸಕರ ಗಮನಕ್ಕೆ ತರಲಾಗಿದೆ. ಈ ಸೇತುವೆ ಅಪಾಯಕಾರಿ ಹಂತಕ್ಕೆ ತಲುಪಿದ್ದು ಜೀವ ಭಯದಲ್ಲೇ ಸೇತುವೆ ಮೇಲೆ ಸಂಚರಿಸಬೇಕಿದೆ. ಸೋಮವಾರಪೇಟೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ಸೇತುವೆ ಇಂದು ಅಪಾಯದ ಸಂಕೇತ ನೀಡುತ್ತಿದೆ. ಈ ಸೇತುವೆ ಕುಸಿದು ಬಿದ್ದಲ್ಲಿ ಗ್ರಾಮಸ್ಥರಿಗೆ ಸಂಚರಿಸಲು ಪರ್ಯಾಯ ರಸ್ತೆ ಇಲ್ಲದಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸ್ಥಳೀಯ ನಿವಾಸಿ ಸಂದೀಪ್ ಮಾತನಾಡಿ, ಸೇತುವೆ ಶಿಥಿಲಾವಸ್ಥೆ ತಲುಪಿದ್ದರೂ ಸಹ ಸಂಬಂಧಿಸಿದ ಅಧಿಕಾರಿಗಳು ಇನ್ನೂ ನಿದ್ದೆಯಲ್ಲೇ ಇದ್ದಾರೆ. ಸಂಬಂಧಪಟ್ಟ ಇಲಾಖೆ ತಕ್ಷಣ ಎಚ್ಚೆತ್ತುಕೊಂಡು ಶಾಶ್ವತ ಪರಿಹಾರಕ್ಕೆ ಮುಂದಾಗದಿದ್ದರೆ ಮುಂದೆ ಸಂಭವಿಸುವ ಅನಾಹುತಕ್ಕೆ ಯಾರು ಹೊಣೆ ಎಂಬ ಪ್ರಶ್ನೆ ಕಾಡುತ್ತಿದೆ. ಈ ಸೇತುವೆ ಮೇಲೆ ಭಾರೀ ವಾಹನಗಳ ಸಂಚಾರವನ್ನು ನಿಲ್ಲಿಸಬೇಕು. ತಪ್ಪಿದ್ದಲ್ಲಿ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭ ಸ್ಥಳೀಯರಾದ ಮಂಜುನಾಥ್, ಧನಂಜಯ, ಗಣಪತಿ, ಪವನ್, ಜನಿತ್, ಮನು ಕುಮಾರ್, ಮಣಿ, ಅಣ್ಣ, ಚಂದ್ರೇಶ್, ಮಧುಚಂದ್ರ, ಕುಮಾರ ಎಡಿಕೇರಿ, ವಾಸು ಹಾಗೂ ಸೀಗೆ ಹೊಸೂರು, ಯಲಕನೂರು ಗ್ರಾಮಸ್ಥರು ಹಾಜರಿದ್ದರು.

ರಸ್ತೆ ಬದಿ ಎದೆಗೆ ಗುಂಡು ಹಾರಿಸಿಕೊಂಡು ವ್ಯಕ್ತಿ ಆತ್ಮಹತ್ಯೆ



ಮಡಿಕೇರಿ, ಮಾ.5– ವ್ಯಕ್ತಿಯೊಬ್ಬರು ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಹಿಂಭಾಗ ಬಡಾವಣೆ ರಸ್ತೆಯಲ್ಲಿ ನಡೆದಿದೆ.

ಗುತ್ತಿಗೆದಾರ ಅಮೆ ಮನೆ ದೇವಿ ಪ್ರಸಾದ್(43) ಮೃತ ವ್ಯಕ್ತಿಯಾಗಿದ್ದಾರೆ. ಗುರುವಾರ ಸಂಜೆ ವೇಳೆ ಒಂಟಿ ನಳಿಕೆ ಬಂದೂಕು ಸಹಿತ ಮನೆಯಿಂದ ಹೊರ ಬಂದ ದೇವಿ ಪ್ರಸಾದ್ ರಸ್ತೆ ಬದಿಯಲ್ಲೇ ಎದೆಯ ಭಾಗಕ್ಕೆ ಗುಂಡು ಹೊಡೆದುಕೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಘಟನೆ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೇವಿ ಪ್ರಸಾದ್ ಹಲವು ಸಮಯಗಳಿಂದ ಬೆನ್ನು ನೋವಿನ ಸಮಸ್ಯೆಯಿಂದ ಬಳಲುತ್ತಿದ್ದು, ನೆನ್ನೆ ದಿನ ಮೈಸೂರು ಖಾಸಗಿ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದರು ಎನ್ನಲಾಗಿದೆ.

ಮಡಿಕೇರಿ ಡಿವೈಎಸ್‌ಪಿ ಸೂರಜ್, ವೃತ್ತ ನಿರೀಕ್ಷಕ ಪಿ.ಕೆ.ರಾಜು, ಠಾಣಾಧಿಕಾರಿ ಅನ್ನಪೂರ್ಣ ಮತ್ತು ಕ್ರೈಂ ಸಿಬ್ಬಂದಿಗಳು ಹಾಗೂ ವಿಧಿ ವಿಜ್ಞಾನ ತಜ್ಞರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಕೃತ್ಯಕ್ಕೆ ಬಳಕೆಯಾದ ಬಂದೂಕನ್ನು ಪೊಲೀಸರು ಮುಂದಿನ ತನಿಖೆಗಾಗಿ ವಶಕ್ಕೆ ಪಡೆದಿದ್ದಾರೆ.

ಕೊಡವ ಮಹಿಳೆಯರಿಗೆ ಆಂತರಿಕ ಮೀಸಲಾತಿಗೆ ಆಗ್ರಹಿಸಿ ಮನವಿ ಸಲ್ಲಿಕೆ

ಮಡಿಕೇರಿ, ಮಾ.5– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಂತರಾಷ್ಟ್ರೀಯ ಮಹಿಳಾ ದಿನವಾದ ಮಾ.8ರಂದು ಕೊಡವ ಮಹಿಳೆಯರಿಗೆ ಶೇ.33ರಷ್ಟು ಆಂತರಿಕ ಮೀಸಲಾತಿ ನೀಡಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ. ಡಿಸಿ ಕಚೇರಿ ಆವರಣದಲ್ಲಿ ಬೆಳಿಗ್ಗೆ 10.30 ಗಂಟೆಗೆ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ಸಲ್ಲಿಸಲಾಗುವುದು.

ಕಾವೇರಿ ದೇಗುಲದಲ್ಲಿ ಹುಣ್ಣಿಮೆ ಪೂಜೆ



ಕುಶಾಲನಗರ: ಇಲ್ಲಿನ ಕೊಪ್ಪ ಗಡಿಭಾಗದ ಕಾವೇರಿ ದೇಗುಲದಲ್ಲಿ ಬಾರವಿ ಕಾವೇರಿ ಕನ್ನಡ ಸಂಘದ ವತಿಯಿಂದ ಫಾಲ್ಗುಣ ಪೂರ್ಣಿಮೆ ಅಂಗವಾಗಿ ಆರತಿ ಪೂಜಾ ಕಾರ್ಯಕ್ರಮವು ಜರುಗಿತು.

ಕಾವೇರಿ ಪ್ರತಿಮೆಗೆ ಹಾಲು, ತುಪ್ಪ, ಜೇನು, ಎಳನೀರು, ಅರಿಶಿನ, ಕುಂಕುಮಗಳಿಂದ ಅಭಿಷೇಕ ಮಾಡಲಾಯಿತು. ಅರ್ಚಕ ಪುರುಷೋತ್ತಮ್ ಭಟ್ ನೇತೃತ್ವದಲ್ಲಿ ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸಿ ಆರತಿ ಬೆಳಗಲಾಯಿತು.

ಬೆಂಗಳೂರಿನ ಕೌಶಿಕ್ ಸುನಂದಾ ಕುಟುಂಬಸ್ಥರು ಮತ್ತು ಬೇಲೂರಿನ ಸುರೇಶ್, ವನಿತಾ ಕುಟುಂಬಸ್ಥರಿಂದ ದಿನದ ಪೂಜಾ ಸೇವಾರ್ಥ ನಡೆಯಿತು. ನೆರೆದಿದ್ದ ಭಕ್ತರಿಗೆ ಅನ್ನಸಂತರ್ಪಣೆ ನಡೆಸಲಾಯಿತು. ಬೇಸಿಗೆ ಆರಂಭಗೊಂಡಿದ್ದು ನದಿಯಲ್ಲಿ ನೀರಿನ ಹರಿವು ಕ್ಷೀಣಗೊಳ್ಳುತ್ತಿದೆ. ಬರ ಆವರಿಸುವ ಮುನ್ನ ಆದಷ್ಟು ಬೇಗ ಮಳೆಯಾಗಿ ಕಾವೇರಮ್ಮ ಎಲ್ಲರಿಗೂ ಸಮೃದ್ಧಿ ಕಲ್ಪಿಸುವಂತಾಗಲಿ ಎಂದು ಸಂಘ ಪ್ರಮುಖ ರವೀಂದ್ರ ಪ್ರಸಾದ್ ತಿಳಿಸಿದರು.

ಈ ಸಂದರ್ಭ ಬಾರವಿ ಕಾವೇರಿ ಕನ್ನಡ ಸಂಘದ ಪ್ರಮುಖರಾದ ಬಜೀಂದ್ರ ಪ್ರಸಾದ್, ವಿಜಯೇಂದ್ರ ಪ್ರಸಾದ್, ಚಂದ್ರು, ತಿಲಕ್ ಪೂಜಾರಿ, ರುದ್ರ, ಕಾವೇರಿಮಣಿ, ವಿನು ಅಯ್ಯಪ್ಪ, ವೆಳ್ಳಿಯಪ್ಪ ಮತ್ತಿತರರು ಹಾಜರಿದ್ದರು.

ಉಮ್ಮತ್ತೂರಲ್ಲಿ ಕೋಳಿ ಫಾರಂಗೆ ಆಕಸ್ಮಿಕ ಬೆಂಕಿ: ನಾಲ್ಕು ಸಾವಿರ ಕೋಳಿಗಳು ಭಸ್ಮ



ಕೋಳಿ ಫಾರಂಗೆ ಬೆಂಕಿ ಬಿದ್ದು ಕೋಳಿಗಳು ಮೃತಪಟ್ಟಿರುವುದು

ಯಳಂದೂರು, ಮಾ.5– ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಗ್ರಾಮದಲ್ಲಿ ಮಂಗಳವಾರ ರಾತ್ರಿ ಆಕಸ್ಮಿಕ ಬೆಂಕಿ ತಗುಲಿ ಲಕ್ಷಾಂತರ ರೂ. ನಷ್ಟವಾಗಿದ್ದು ಸಾವಿರಾರು ಕೋಳಿಗಳು ಮೃತಪಟ್ಟಿರುವ ಘಟನೆ ನಡೆದಿದೆ.

ಗ್ರಾಮದ ಎಂ.ರಾಜೇಶ್ ಎಂಬುವರಿಗೆ ಸೇರಿದ ಕೋಳಿ ಫಾರಂ ಇದಾಗಿದೆ. ಸರ್ವೇ ನಂ. 532/02 ರಲ್ಲಿ 3.31 ಎಕರೆ ಜಮೀನು ಇವರ ತಂದೆ ಬಿ. ಮುದ್ದುಬಸಪ್ಪರವರ ಹೆಸರಿನಲ್ಲಿದೆ. ಇದರಲ್ಲಿ 1 ಎಕರೆ ಪ್ರದೇಶದಲ್ಲಿ ಇವರು ಕಳೆದ 15 ವರ್ಷಗಳಿಂದಲೂ ಕೋಳಿ ಫಾರಂ ನಡೆಸುತ್ತಿದ್ದರು. ಇದರಲ್ಲಿ ಮಾಂಸದ ಕೋಳಿಗಳನ್ನು ಸಾಕಾಣಿಕೆ ಮಾಡುತ್ತಿದ್ದರು. ಇದಕ್ಕಾಗಿ ದೊಡ್ಡದಾದ 2 ಶೆಡ್‌ಗಳನ್ನು ನಿರ್ಮಾಣ ಮಾಡಿದ್ದರು. ಒಟ್ಟು 7 ಸಾವಿರ ಕೋಳಿಗಳನ್ನು ಇವರು ಸಾಕುತ್ತಿದ್ದರು. ಆದರೆ ಮಂಗಳವಾರ ರಾತ್ರಿ ಒಂದು ಶೆಡ್‌ಗೆ ಬೆಂಕಿ ಬಿದ್ದಿದ್ದು ಇದರಲ್ಲಿದ್ದ 4 ಸಾವಿರ ಕೋಳಿಗಳು, ಕೋಳಿಗೆ ಹಾಕುವ 10 ಕ್ವಿಂಟಾಲ್ ಫೀಡ್ಸ್, ಅನೇಕ ಪರಿಕರಗಳು, ವಿದ್ಯುತ್ ವಸ್ತುಗಳೆಲ್ಲಾ ಸುಟ್ಟು ಕರಕಲಾಗಿದ್ದು ಲಕ್ಷಾಂತರ ರೂ. ನಷ್ಟವಾಗಿದೆ.

15 ವರ್ಷಗಳಲ್ಲಿ ಇಂತಹ ಯಾವುದೇ ಅವಘಡಗಳು ಆಗಿಲ್ಲ. ನನಗೆ ಮುಖ್ಯ ಕಸುಬು ಇದಾಗಿತ್ತು. ಇದರೊಂದಿಗೆ ಉಳಿಕೆ ಜಮೀನಿನಲ್ಲಿ ವ್ಯವಸಾಯವನ್ನು ಮಾಡುತ್ತಿದ್ದೆ. ಯಾವ ಕಾರಣಕ್ಕೆ ಬೆಂಕಿ ಬಿದ್ದಿದೆ ಎಂಬುದು ಗೊತ್ತಾಗುತ್ತಿಲ್ಲ. ಇಲ್ಲಿಗೆ ಹಾಕಲಾಗಿದ್ದ ಶೀಟ್‌ಗಳು ಸಹ ಬೆಂಕಿಯ ಕೆನ್ನಾಲಿಗೆ ಸುಟ್ಟು ಮುದುಡಿವೆ. ಅಲ್ಲದೆ ಪಕ್ಕದಲ್ಲಿದ್ದ ತೆಂಗಿನ ಮರಗಳಿಗೂ ಕೂಡ ಬೆಂಕಿಯ ಕೆನ್ನಾಲಿಗೆ ಆವರಿಸಿದ್ದು 14 ಫಲ ಕೊಡುವ ತೆಂಗಿನ ಮರಗಳು ಸಹ ಸುಟ್ಟು ಕರಕಲಾಗಿದೆ. ಕೋಳಿ ಮರಿಗಳಿಗೆ ನೀರುಣಿಸುವ ಪರಿಕರಗಳು ಸಹ ಸುಟ್ಟಿವೆ. ಇದನ್ನೇ ನಂಬಿ ಇವರು ಬದುಕು ಕಟ್ಟಿಕೊಂಡಿದ್ದು ಈಗ ಇದಕ್ಕೆ ದೊಡ್ಡ ಹೊಡೆತ ಬಿದ್ದಿದೆ. 12 ರಿಂದ 14 ಲಕ್ಷ ರೂ. ನಷ್ಟವಾಗಿದೆ. ಸಂಬಂಧಪಟ್ಟವರು ನನಗೆ ಸೂಕ್ತ ಪರಿಹಾರವನ್ನು ನೀಡಬೇಕು ಎಂದು ಎಂ. ರಾಜೇಶ್ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಈ ಸಂಬಂಧ ಕುದೇರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಸ್ಥಳಕ್ಕೆ ಠಾಣೆಯ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸಿದ್ದಾರೆ.

ಕೈ ಕಾಲು ಗಟ್ಟಿಯಾಗಿರುವವರೆಗೂ ನಾಡಿನ ಕಲ್ಯಾಣಕ್ಕಾಗಿ ನಾಡಿನಾದ್ಯಂತ ಹೋರಾಟ

ಸೋಮಹಳ್ಳಿಯಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಘೋಷಣೆ



ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿಯಲ್ಲಿ ನಡೆದ ಸಿದ್ದಮಲ್ಲಿಕಾರ್ಜುನ ಮಹಾಸ್ವಾಮಿಗಳವರ 76ನೇ ವಾರ್ಷಿಕ ಆರಾಧನೆ ಮತ್ತು ಶಿಲಾಮಠದ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸುತ್ತೂರು ಶ್ರೀಗಳು ಸೇರಿದಂತೆ ಇನ್ನಿತರ ಗಣ್ಯರು ಮತ್ತು ಮಠಾಧೀಶರು ಭಾಗವಹಿಸಿರುವುದು.

ಬೇಗೂರು/ಚಾಮರಾಜನಗರ, ಮಾ.5– ನಾಡಿನ ಕಲ್ಯಾಣಕ್ಕಾಗಿ, ಜನರ ನೆಮ್ಮದಿಯಿಂದ ಬದುಕಲು ನನ್ನ ಕೈಕಾಲು ಗಟ್ಟಿಯಾಗಿ ಇರುವವರೆಗೂ ನಾಡಿನ ಉದ್ದಗಲಕ್ಕೂ ತೆರಳಿ ಹೋರಾಟ ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿಯಲ್ಲಿ ಸಿದ್ದಮಲ್ಲಿಕಾರ್ಜುನ ಮಹಾಸ್ವಾಮಿಗಳವರ 76ನೇ ವಾರ್ಷಿಕ ಆರಾಧನೆ ಮತ್ತು ಶಿಲಾಮಠದ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಡಿನಲ್ಲಿ ಹುಟ್ಟಿದ ಹೆಣ್ಣು ಮಗಳು ಗೌರವದಿಂದ ಬಾಳಿ ಬದುಕಬೇಕು ಎಂಬ ಉದ್ದೇಶದಿಂದ ಸಿಎಂ ಆಗಿದ್ದಾಗ ಭಾಗ್ಯಲಕ್ಷ್ಮೀ ಯೋಜನೆಯನ್ನು ಜಾರಿಗೆ ತಂದಿದ್ದೆ. ಇಂದು ಕೋಟ್ಯಾಂತರ ಮಂದಿ ಹೆಣ್ಣು ಮಕ್ಕಳು ಅದರ ಸೌಲಭ್ಯ ಪಡೆದು ಜೀವನ ನಡೆಸುತ್ತಿದ್ದಾರೆ ಎಂದರು.

ಪ್ರಸ್ತುತ ಅನ್ನದಾತರು ಜ್ವಲಂತ ಸಮಸ್ಯೆಗಳ ಮಧ್ಯೆ ಸಿಕ್ಕಿ ನಲುಗುತ್ತಿದ್ದಾರೆ. ಆದ್ದರಿಂದ ಸರ್ಕಾರಗಳು ರೈತರಿಗೆ ಇನ್ನೂ ಹೆಚ್ಚು ಸವಲತ್ತು ಕೊಡಬೇಕು. ಈ ಮೂಲಕ ರೈತನ ಪರವಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ತಿಳಿಸಿದರು.

ಮಠದ ಅಭಿವೃದ್ಧಿಗೆ 1.70ಕೋಟಿ ಅನುದಾನ: ನಾನು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅಂದು ಶಾಸಕರಾಗಿದ್ದ ನಿರಂಜನ ಕುಮಾರ್ ಸತತ ಪ್ರಯತ್ನದ ಫಲವಾಗಿ ಸೋಮಹಳ್ಳಿ ಮಠದ ಅಭಿವೃದ್ಧಿಗೆ 1.70 ಕೋಟಿ ಅನುದಾನ ನೀಡಿ ಅಭಿವೃದ್ಧಿಪಡಿಸಿದ್ದೇವೆ. ಆದ್ದರಿಂದ ಧರ್ಮ ಉಳಿಸುವ ಕಾಯಕದಲ್ಲಿ ಮಠ ಮಾನ್ಯಗಳಿಗೆ ಸಾಧ್ಯವಿರುವಷ್ಟು ಸಹಕಾರ ಬೆಂಬಲ ನೀಡಬೇಕು. ಇಲ್ಲದಿದ್ದರೆ ಮುಂದಿನ ಪೀಳಿಗೆಗೆ ಧರ್ಮ, ಸಂಸ್ಕೃತಿ ಉಳಿಯುವುದಾದರು ಹೇಗೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಈ ನಿಟ್ಟಿನಲ್ಲಿ ಸೋಮಹಳ್ಳಿ ಮಠವು ಕೂಡ ಅನ್ನ, ಅರಿವು, ಸಂಸ್ಕೃತಿ, ತಾಯಿ ಮನೆಯಾಗಿ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿದೆ. ನಿರಂತರ ಪ್ರಸಾದ ವಿನಿಯೋಗ ಈ ಮಠದ ಅತೀ ದೊಡ್ಡ ಶಕ್ತಿ ಎಂದು ಬಣ್ಣಿಸಿದರು.

ಸೋಮಹಳ್ಳಿ ಮಠಕ್ಕೆ 800 ವರ್ಷ ಇತಿಹಾಸ: ಸೋಮಹಳ್ಳಿ ಮಠ ಸುಮಾರು 800 ವರ್ಷಗಳ ಇತಿಹಾಸ ಹೊಂದಿದ್ದು, ಇಲ್ಲಿನ ಮೂಲ ಗುರು ಶ್ರೀಗುರು ಗಂಗಾಧರೇಶ್ವರರು ತಮ್ಮ ತಪಸ್ಸಿನ ಚೈತನ್ಯದಿಂದ ಮನು ಕುಲದ ಉದ್ಧಾರಕ್ಕಾಗಿ ಅವತರಿಸಿದ್ದಾರೆ ಎಂದು ಶ್ಲಾಘಿಸಿದರು.

ಆಧ್ಯಾತ್ಮದಿಂದ ನೆಮ್ಮದಿ ಸಾಧ್ಯ: ಇರಾನ್ ಹಾಗೂ ಇಸ್ರೇಲ್, ಅಮೇರಿಕಾ ನಡುವಿನ ಯುದ್ಧ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಕೋಪ, ದ್ವೇಷ, ವೈರತ್ವದಿಂದ ಶಾಂತಿ ನೆಲೆಸಲು ಸಾಧ್ಯವಿಲ್ಲ. ಜಗತ್ತಿನಲ್ಲಿ ಶಾಂತಿ ನೆಮ್ಮದಿ ನೆಲೆಸಬೇಕಾದರೆ ಆಧ್ಯಾತ್ಮಿಕ ಮಾರ್ಗದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀಸಿದ್ದಲಿಂಗ ಸ್ವಾಮೀಜಿ, ಸೋಮಹಳ್ಳಿ ವೀರಸಿಂಹಾಸನ ಮಠದ ಸಿದ್ಧಮಲ್ಲಸ್ವಾಮೀಜಿ, ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದ ಮಹಾಂತ ಸ್ವಾಮೀಜಿ, ಶಾಸಕ ಎಚ್.ಎಂ.ಗಣೇಶಪ್ರಸಾದ್, ಮಾಜಿ ಶಾಸಕ ಸಿ.ಎಸ್. ನಿರಂಜನಕುಮಾರ್, ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ ಇತರರು ಹಾಜರಿದ್ದರು.

> ಗ್ಯಾರಂಟಿ ಯೋಜನೆಗಳಿಂದ ಸರ್ಕಾರಕ್ಕೆ ಹೆಚ್ಚು ಹೊರೆಯಾಗುತ್ತದೆ ಎನ್ನುವ ರೀತಿಯಲ್ಲಿ ಡಿ.ಕೆ.ಶಿವಕುಮಾರ್ ಅವರು ಹೇಳಿಕೆ ನೀಡಿದ್ದಾರೆ. ಆದರೆ, ಇದು ಸರ್ಕಾರಕ್ಕೆ ಬಿಟ್ಟಿರುವ ವಿಚಾರ. ಆದರೆ, ಸರ್ಕಾರ ಈ ಬಾರಿ ನಾಡಿನ ರೈತರಿಗೆ, ದೀನ–ದಲಿತರಿಗೆ ಅನುಕೂಲಕರವಾದ ಹಾಗೂ ರಾಜ್ಯದ ಜನರು ನೆಮ್ಮದಿಯಿಂದ ಬದುಕುವ ರೀತಿಯಲ್ಲಿ ಬಜೆಟ್ ಮಂಡಿಸಬೇಕು.
> – ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಕೆಪಿಎಸ್‌ಸಿ ಪರೀಕ್ಷೆ ಅಕ್ರಮ: ತನಿಖೆಗೆ ಸಿಎಂಗೆ ಮನವಿ



ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ: ಕೆ.ಪಿ.ಎಸ್.ಸಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಾರಿಯ ಕೆಪಿಎಸ್‌ಸಿಯ ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ನಡೆದ ಪರೀಕ್ಷೆಗಳಲ್ಲಿ ಅಕ್ರಮ ನಡೆದಿದೆ ಎಂದು ಕಳೆದ ಎರಡು ದಿನಗಳಿಂದ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದು, ಇದರ ಬಗ್ಗೆ ಈಗಾಗಲೇ ಅವಕಾಶ ವಂಚಿತ ಅನೇಕ ವಿದ್ಯಾರ್ಥಿಗಳು ಇದರ ಸಂಬಂಧ ಸಂಶಯ ವ್ಯಕ್ತಪಡಿಸಿದ್ದಾರೆ ಮತ್ತು ಈ ವಿಚಾರವಾಗಿ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಸಹ ಕೆ.ಪಿ.ಎಸ್.ಸಿ ಯಿಂದ ವರದಿ ಕೇಳಿದ್ದಾರೆ. ಇದರಿಂದ ಮೇಲ್ನೋಟಕ್ಕೆ ಇಲ್ಲಿ ಅಕ್ರಮವಾಗಿರುವುದು ಕಾಣುತ್ತದೆ. ಆದ್ದರಿಂದ ಕೆ.ಪಿ.ಎಸ್.ಸಿ ಪರೀಕ್ಷೆ ಬರೆದಿರುವ ಸಾವಿರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಮತ್ತು ಅವರ ಮುಂದಿನ ಭವಿಷ್ಯ ನಿರ್ನಾಮವಾಗಿದೆ ಆದ್ದರಿಂದ ಈ ಸಾರಿ ನಡೆದಿರುವ ಕೆ.ಪಿ.ಎಸ್.ಸಿ ಪರೀಕ್ಷೆಯ ಅಕ್ರಮ ಬಗ್ಗೆ ತನಿಖರ ನಡೆಸಿ ಅರ್ಹ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಮಹಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಒತ್ತಾಯಿಸಿದ್ಧಾರೆ.

ಈ ಸಂದರ್ಭದಲ್ಲಿ ಪಣ್ಯದಹುಂಡಿ ರಾಜು, ಪರ್ವತರಾಜು, ರಾಚಪ್ಪ, ಪ್ರಕಾಶ್ ಮೂಡ್ಲುಪುರ ಇತರರು ಹಾಜರಿದ್ದರು.

ನಾಳೆಯಿಂದ ಉತ್ಪನ್ನಗಳ ವಸ್ತು ಪ್ರದರ್ಶನ, ಮಾರಾಟ ಮೇಳ

ಚಾಮರಾಜನಗರ: ಸಂಜೀವಿನಿ ಕುಸೆಆರ್ ಎಲ್‌ಪಿಎಸ್ ಯೋಜನೆಯಡಿ ಮಹಿಳಾ ಸ್ವ ಸಹಾಯ ಸಂಘದ ಗುಂಪುಗಳ ಸದಸ್ಯರು ಉತ್ಪಾದಿಸುತ್ತಿರುವ ವಿವಿಧ ಬಗೆಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಮಾ.7 ರಿಂದ 9 ರವರೆಗೆ ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗಿದೆ. ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು ತಯಾರಿಸಿದ ವಿವಿಧ ರೀತಿಯ ಉತ್ಪನ್ನಗಳಾದ ಜ್ಯೂಟ್ ಬ್ಯಾಗ್, ಯೋಗ ಮ್ಯಾಟ್, ಕೈಮಗ್ಗ ಸೀರೆಗಳು, ಸಿರಿಧಾನ್ಯ ಪೌಡರ್, ವನ–ಧನ ವಿಕಾಸ ಕೇಂದ್ರದ ಉತ್ಪನ್ನಗಳು, ಜೇನು ತುಪ್ಪ, ಗಾಣದ ಎಣ್ಣೆ, ವೈರ್ ಬುಟ್ಟಿ, ವಿವಿಧ ಬಗೆಯ ಉಪ್ಪಿನಕಾಯಿ, ಹಪ್ಪಳ, ಸಾಂಬಾರ್ ಪೌಡರ್, ಬಿದಿರಿನ ಉತ್ಪನ್ನಗಳು, ಅಲಂಕಾರಿಕ ಹೂವಿನ ಹಾರಗಳು, ಸಿಹಿ ತಿಂಡಿಗಳು, ಪಾಪ್ ಕಾರ್ನ್, ಪಾನಿಪುರಿ ಹಾಗೂ ಇತರೆ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಯಶಸ್ವಿಗೊಳಿಸಬೇಕೆಂದು ಜಿಪಂ ಉಪಕಾರ್ಯದರ್ಶಿ ಹಾಗೂ ಎನ್‌ಆರ್‌ಎಲ್‌ಎಂ ನೋಡಲ್ ಅಧಿಕಾರಿ ಶ್ರುತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಜಿಲ್ಲೆಯ ಶಾಸಕರ ಮನೆ ಮುಂಭಾಗ ಧರಣಿ



ಜಿ.ಪಂ. ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ಮಾತನಾಡುತ್ತಿರುವುದು.

ಚಾಮರಾಜನಗರ: ಒಳ ಮೀಸಲಾತಿ ಜಾರಿಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಿ 101 ಜಾತಿ ಗಳಿಗೂ ಸಮಾನ ಅವಕಾಶ ದೊರೆಯುವಂತೆ ಸದನದಲ್ಲಿ ಚರ್ಚೆ ಮಾಡುವಂತೆ ಆಗ್ರಹಿಸಿ ಜಿಲ್ಲೆಯ ಶಾಸಕರ ಮನೆಯ ಮುಂಭಾಗ ಮಾ.7 ರಂದು ಧರಣಿ ನಡೆಸಲಾಗುವುದು ಎಂದು ಬಲಗೈ ಸಮುದಾಯಗಳ ಒಕ್ಕೂಟದ ಮುಖಂಡರು, ಜಿ.ಪಂ.ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಗ್ಗೆ 11 ಗಂಟೆಗೆ ಜಿಲ್ಲೆಯ ಎಲ್ಲಾ ಶಾಸಕರ ಮನೆ ಮುಂಭಾಗ ಬಲಗೈ ಸಮುದಾಯದ ಮುಖಂಡರು ಜಮಾಯಿಸಿ ಧರಣಿ ನಡೆಸಿ ಮನವಿ ಸಲ್ಲಿಸಲಾಗುವುದು ಎಂದರು.

ಒಳ ಮೀಸಲಾತಿಯಲ್ಲಿ ಎಲ್ಲ ಸಮುದಾಯಕ್ಕೂ ಸಮನಾದ ಅವಕಾಶ ಸಿಗಬೇಕು. ಆದರೆ, ಮಾದಿಗ ಸಮುದಾಯದ ಭಾಸ್ಕರ್ ಪ್ರಸಾದ್ ಹಾಗೂ ಅರುಣ್ ಕುಮಾರ್ ಅವರು ನಮ್ಮ ಸಮುದಾಯದ ಮೇಲೆ ಇಲ್ಲ ಸಲ್ಲದ ಆರೋಪ ಮಾಡುತ್ತಿರುವುದು ಖಂಡನೀಯ. ಅಲ್ಲದೇ ಮುಂದಿನ ಚುನಾವಣೆಗಳಲ್ಲಿ ಬಲಗೈ ಸಮುದಾಯದ ನಾಯಕರನ್ನು ಸೋಲಿಸುತ್ತೇವೆ ಎಂದು ಹೇಳಿಕೆ ನೀಡುತ್ತಾರೆ. ಅವರು ಆ ರೀತಿ ಮಾಡಲು ಮುಂದಾದರೆ, ಎಡಗೈ ಸಮುದಾಯದ ನಾಯಕರಿಗೆ ನಮ್ಮ ಸಮುದಾಯದ ಮತದಾರರು ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಚಿವ ಸಂಪುಟದ ತೀರ್ಮಾನಕ್ಕೆ ಅಗೌರವ : ಸಚಿವ ಸಂಪುಟದಲ್ಲಿ ಒಳ ಮೀಸಲಾತಿ ವಿಚಾರ ಸುಪ್ರೀಂಕೋರ್ಟ್ ನಲ್ಲಿರುವುದರಿಂದ ಹಳೆ ಮೀಸಲಾತಿ ಪ್ರಕಾರ ಸರ್ಕಾರ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನ ಕೈಗೊಂಡಿರುವುದನ್ನು ಸಚಿವರಾದ ಆರ್.ಬಿ.ತಿಮ್ಮಾಪುರ್, ಕೆ.ಎಚ್.ಮುನಿಯಪ್ಪ ಉಲ್ಲಂಘಿಸಿ ವಿರೋಧ ವ್ಯಕ್ತಪಡಿಸುವ ಮೂಲಕ ಸಚಿವ ಸಂಪುಟಕ್ಕೆ ಅಗೌರವ ತೋರಿಸಿದ್ದಾರೆ ಆಗಾಗಿ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಲು ಆಗ್ರಹಿಸಿದರು.

ತಾ.ಪಂ.ಮಾಜಿ ಅಧ್ಯಕ್ಷ ಆರ್.ಮಹದೇವ್ರು ಮಾತನಾಡಿದರು. ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಸೋಮೇಶ್ವರ, ಆರ್.ಪಿ.ನಂಜುಂಡಸ್ವಾಮಿ, ನಾಗಯ್ಯ, ರಂಗಸ್ವಾಮಿ, ಸೋಮಣ್ಣ, ಯ.ಪಾಪಣ್ಣ ಇದ್ದರು.



ಸಾರಾ ಮಹೇಶ್ ನಿರ್ಮಾಣದ ಸೆಲೆಬ್ರಿಟಿ ಚಿತ್ರಕ್ಕೆ ಸುದೀಪ್ ಸಾಥ್

ಜೆಡಿಎಸ್ ನಾಯಕ ಸಾರಾ ಮಹೇಶ್ ನೇತೃತ್ವದ ಗೌರಿ ಆರ್ಟ್ಸ್‌ನ ಪ್ರಥಮ ಚಿತ್ರ 'ಸೆಲೆಬ್ರಿಟಿ'. ಕಿರಣ್ ವಿಶ್ವನಾಥ್ ನಿರ್ದೇಶನವಿರುವ ಈ ಚಿತ್ರದ ಟೈಟಲ್ ಲಾಂಚ್ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು, ನಟ ಸುದೀಪ್ ಅವರು ಚಿತ್ರದ ಶೀರ್ಷಿಕೆ ಅನಾವರಣಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ಸುದೀಪ್, ಈ ಚಿತ್ರದ ಟೈಟಲ್ ಟೀಸರ್, ವಿಜಯ್ ಅವರ ಮ್ಯೂಸಿಕ್ ತುಂಬಾ ಚೆನ್ನಾಗಿದೆ. ಇವರು ಅರ್ಜುನ್ ಜನ್ಯರ ಶಿಷ್ಯ. ಟೀಸರ್‌ನಲ್ಲಿ ನಾಯಕ ಅದ್ಭುತವಾಗಿ ಡ್ಯಾನ್ಸ್ ಮಾಡಿದ್ದಾರೆ. ಅವರಿಗೆ ಒಳ್ಳೆಯ ಕಲೆಯಿದೆ. ನಾನಿಲ್ಲಿಗೆ ಬರಲು ಮುಖ್ಯಕಾರಣ ಮಹೇಶಣ್ಣ. ಅವರು ನನಗೆ ಬಹಳ ವರ್ಷಗಳ ಪರಿಚಯ. ತುಂಬಾ ಬೇಕಾದ ವ್ಯಕ್ತಿ ಕೂಡ. 'ಸೆಲೆಬ್ರಿಟಿ' ಸಿನಿಮಾದ ಟೈಟಲ್ ಲಾಂಚ್ ಆಗಿದೆ. ಒಂದು ಸಿನಿಮಾ ಮಾಡುವುದು ಈಜಿ ಕೆಲಸವಾದರೆ, ಅದು ಗೆಲ್ಲಬೇಕು ಎಂದರೆ ಪ್ರೇಕ್ಷಕರ ಸಹಕಾರ ಬೇಕೇ ಬೇಕು. ಈ ಚಿತ್ರದಲ್ಲಿ ಕೆಲಸ ಮಾಡಿದ ಎಲ್ಲರಿಗೂ ಒಳ್ಳೆಯದಾಗಲಿ ಎಂದರು.

ಈ ಚಿತ್ರದಲ್ಲಿ ನಾಯಕನಾಗಿ ಅಶ್ವಿನ್, ನಾಯಕಿಯಾಗಿ ಪ್ರಿಯಾಂಕಾ ಆಚಾರ್ ಹಾಗೂ ತಾಯಿಯ ಪಾತ್ರದಲ್ಲಿ ಯಾರೇ ನೀನು ಚೆಲುವೆ ಖ್ಯಾತಿಯ ನಟಿ ಸಂಗೀತಾ ನಟಿಸಿದ್ದಾರೆ. ಸಾರಾ ಮಹೇಶ್ ಹಾಗೂ ಸುಷ್ಮಾ ಅಶ್ವಿನ್ ನಿರ್ಮಾಣದ ಈ ಚಿತ್ರಕ್ಕೆ ಕಿರಣ್ ವಿಶ್ವನಾಥ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಗುಮ್ಮಿನೇನಿ ವಿಜಯ್ ಅವರ ಸಂಗೀತ, ರವಿವರ್ಮಾ ಅವರ ಸಾಹಸ, ಗುಣ ಅವರ ಕಲಾನಿರ್ದೇಶನ, ಅನಿರುದ್ಧ ಶಾಸ್ತ್ರಿ ಅವರ ಸಾಹಿತ್ಯ ಈ ಚಿತ್ರಕ್ಕಿದೆ.

'ಟಾಕ್ಸಿಕ್'ಗೆ ಯುದ್ಧ ಭೀತಿ



ರಾಕಿಂಗ್‌ಸ್ಟಾರ್‌ಯಶ್ ಅಭಿನಯದ ಬಹುನಿರೀಕ್ಷಿತ ಪ್ಯಾನ್‌ವರ್ಲ್ಡ್ ಚಿತ್ರ 'ಟಾಕ್ಸಿಕ್' ಅಂದುಕೊಂಡಂತೆ ಆಗಿದ್ದರೆ ಇದೇ ತಿಂಗಳ 19ರಂದು ಪ್ರಪಂಚದಾದ್ಯಂತ ರಿಲೀಸಾಗಬೇಕಿತ್ತು. ಆದರೆ, ಮಧ್ಯಪ್ರಾಚ್ಯ ದೇಶಗಳಲ್ಲಿ ಉಂಟಾದ ಅಲ್ಲೋಲ ಕಲ್ಲೋಲ; ಇರಾನ್, ಇಸ್ರೇಲ್‌ನಲ್ಲಿ ನಿರ್ಮಾಣವಾದ ಉದ್ವಿಗ್ನ ಪರಿಸ್ಥಿತಿ ಪ್ರಪಂಚದ ಎಲ್ಲಾ ದೇಶಗಳ ಮೇಲೆ ಪರಿಣಾಮ ಬೀರಿದೆ. ಹೇಳಿ ಕೇಳಿ ಟಾಕ್ಸಿಕ್ ಗ್ಲೋಬಲ್ ಆಡಿಯನ್ಸ್ ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಚಿತ್ರ, ಕನ್ನಡ, ಇಂಗ್ಲೀಷ್ ಸೇರಿದಂತೆ ಹಲವು ಭಾಷೆಗಳಲ್ಲಿ ತಯಾರಾಗಿರುವ ಈ ಚಿತ್ರವನ್ನು ವರ್ಲ್ಡ್‌ವೈಡ್ ರಿಲೀಸ್ ಮಾಡಬೇಕೆಂಬ ಪ್ಲಾನ್ ಇತ್ತು, ಆದರೆ ಪ್ರಪಂಚದ ಹಲವೆಡೆ ಯುದ್ಧದ ಕಾರ್ಮೋಡ ಕವಿದ ಪರಿಣಾಮ ಅಲ್ಲೆಲ್ಲ ರಿಲೀಸ್ ಮಾಡಲು ಸಾಧ್ಯವಿಲ್ಲ ಎಂದರಿತ ಚಿತ್ರತಂಡ ಬಿಡುಗಡೆ ದಿನಾಂಕವನ್ನು ಮುಂದೂಡಿದೆ. ವಿತರಕರ ಜತೆ ಚರ್ಚೆಮಾಡಿ ಹೊಸ ದಿನಾಂಕವನ್ನು ಪ್ರಕಟಿಸಿದೆ. ಆ ಪ್ರಕಾರ 'ಟಾಕ್ಸಿಕ್' ಚಿತ್ರ 2026ರ ಜೂನ್ 4ರಂದು ರಿಲೀಸಾಗಲಿದೆ.

ಈಗಾಗಲೇ ತನ್ನ ಮೇಕಿಂಗ್ ಸ್ಟಿಲ್ಸ್, ಹಾಡುಗಳ ಮೂಲಕವೇ ದೊಡ್ಡಮಟ್ಟದ ಹೈಪ್ ಕ್ರಿಯೇಟ್ ಮಾಡಿರುವ 'ಟಾಕ್ಸಿಕ್' ಚಿತ್ರವನ್ನ ಕೆವಿಎನ್ ಪ್ರೊಡಕ್ಷನ್ಸ್ ಜೊತೆಗೂಡಿ ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಮೂಲಕ ಯಶ್ ಅವರು ನಿರ್ಮಾಣ ಮಾಡಿದ್ದಾರೆ. ಮಲಯಾಳಂನ ಗೀತು ಮೋಹನದಾಸ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ.

'ಟಾಕ್ಸಿಕ್' ಚಿತ್ರದ ಓವರ್‌ಸೀಸ್ ಹಕ್ಕುಗಳನ್ನು ಫಾರ್ಸ್ ಫಿಲಂಸ್ ಪಡೆದಿದೆ. ಗಲ್ಫ್ ದೇಶಗಳಲ್ಲಿ 'ಟಾಕ್ಸಿಕ್' ಚಿತ್ರವು ಭರ್ಜರಿ ಓಪನಿಂಗ್ ಪಡೆಯುವ ನಿರೀಕ್ಷೆಯಿದೆ. ಆದರೆ, ಸದ್ಯ ಯುದ್ಧದ ಪರಿಸ್ಥಿತಿ ಇರುವುದರಿಂದ, ಅದು ಸಿನಿಮಾ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ, ವಿತರಕರ ಸಲಹೆ ಪಡೆದೇ ಚಿತ್ರದ ಬಿಡುಗಡೆ ದಿನಾಂಕವನ್ನು ಒಂದೂವರೆ ತಿಂಗಳು ಮುಂದಕ್ಕೆ ಹಾಕಲಾಗಿದೆ. ಹಾಗಾಗಿ ಮಾ.8ರಂದು ನಡೆಯಬೇಕಿದ್ದ ಟ್ರೇಲರ್ ಲಾಂಚ್ ಇವೆಂಟ್‌ನ್ನು ಸಹ ಮುಂದೂಡಲಾಗಿದೆ. ಈ ಕಾರ್ಯಕ್ರಮಕ್ಕೆ ದೇಶದ ವಿವಿಧ ಭಾಗಗಳಿಂದ ಮಾಧ್ಯಮ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇತ್ತು ಈಗ ಇದೆಲ್ಲಕ್ಕೂ ಬ್ರೇಕ್ ಬಿದ್ದಿದೆ. ಟೀಸರ್‌ನಲ್ಲಿರೋ ಎರೋಟಿಕ್ ಸೀನ್ ಮೂಲಕ ಸುದ್ದಿಯಾಗಿದ್ದ ಟಾಕ್ಸಿಕ್ ಚಿತ್ರದ ಮೊದಲ ಹಾಡು 'ತಬಾಹಿ' ಇತ್ತೀಚೆಗೆ ಬಿಡುಗಡೆಯಾಗಿದೆ.

ಇದೇ 19ರಂದು ನಾವು 'ಟಾಕ್ಸಿಕ್' ಚಿತ್ರವನ್ನು ರಿಲೀಸ್ ಮಾಡಲು ಉತ್ಸುಕರಾಗಿದ್ದೆವು. ಆದರೆ ಮಧ್ಯಪ್ರಾಚ್ಯದ ಅನಿಶ್ಚಿತ ಪರಿಸ್ಥಿತಿ ನಮ್ಮ ಜಾಗತಿಕ ಗುರಿಗೆ ಅಡ್ಡಿಯಾಗುವ ಸಾಧ್ಯತೆ ಇದೆ, ನಮ್ಮ ಪಾಲುದಾರರು ಮತ್ತು ಪ್ರೇಕ್ಷಕರ ಹಿತದೃಷ್ಟಿಯಿಂದ ಬಿಡುಗಡೆ ದಿನಾಂಕವನ್ನು ಮುಂದೂಡಲು ತೀರ್ಮಾನಿಸಿದ್ದೇವೆ ಎಂದು ನಿರ್ಮಾಪಕರು ತಿಳಿಸಿದ್ದಾರೆ. ಕನ್ನಡ, ಇಂಗ್ಲೀಷ್‌ನಲ್ಲಿ ಏಕಕಾಲಕ್ಕೆ ಚಿತ್ರೀಕರಣವಾಗಿರುವ 'ಟಾಕ್ಸಿಕ್' ಹಿಂದಿ, ತಮಿಳು, ತೆಲುಗು ಹಾಗೂ ಮಲಯಾಳಂ ಭಾಷೆಗಳಿಗೆ ಡಬ್ ಆಗಿದೆ. ಪಂಚ ಕನ್ಯೆಯರಾದ ನಯನತಾರಾ, ಕಿಯಾರಾ ಅಡ್ವಾಣಿ, ಹುಮಾ ಖುರೇಶಿ, ರುಕ್ಮಿಣಿ ವಸಂತ್ ಹಾಗೂ ತಾರಾ ಸುತಾರಿಯಾ ಚಿತ್ರದಲ್ಲಿದ್ದಾರೆ.

ನಟಿ ಸಪ್ತಮಿಗೌಡ ಕಿಡಿ

ನಮ್ಮ ವಿಡಿಯೋ ಮಿಸ್ ಯೂಸ್ ಆಗ್ತಿವೆ..

ಬೇರೆ ಬೇರೆ ಆ್ಯಂಗಲ್‌ನಲ್ಲಿ ನಟಿಯರ ಫೋಟೋ ಅಥವಾ ವಿಡಿಯೋ ತೆಗೆದು ಅದನ್ನು ಸೋಷಿಯಲ್ ಮೀಡಿಯಾಗಳಲ್ಲಿ ಪೋಸ್ಟ್ ಮಾಡುವವರ ವಿರುದ್ಧ ನಟಿ ಸಪ್ತಮಿಗೌಡ ಅವರು ಇತ್ತೀಚೆಗೆ ಕಿಡಿಕಾರಿದ್ದರು. ಅದರ ಬೆನ್ನಲ್ಲೇ, ನಟಿ ರಮ್ಯಾ, ರಕ್ಷಿತಾ, ಬೃಂದಾ ಆಚಾರ್ಯ, ಆಶಿಕಾ ರಂಗನಾಥ್, ಸಂಜನಾ ಆನಂದ್, ಚೈತ್ರಾ ಆಚಾರ್, ಯುವ ರಾಜಕುಮಾರ್ ಸೇರಿದಂತೆ ಚಿತ್ರರಂಗದ ಅನೇಕರು ಅಂಥವರ ವಿರುದ್ಧ ಪೋಸ್ಟ್ ಹಂಚಿಕೊಳ್ಳುವ ಮೂಲಕ ಸಪ್ತಮಿಗೌಡ ಅವರಿಗೆ ಬೆಂಬಲವಾಗಿ ನಿಂತಿದ್ದಾರೆ.

ಕಿರಿಕಿರಿ ಅನ್ನೋದು ನನ್ನೊಬ್ಬಳಿಗೆ ಅಂತಲ್ಲ. ಅಷ್ಟೊ ಜನ ಈ ಬಗ್ಗೆ ಧ್ವನಿ ಎತ್ತಿದ್ದಾರೆ ಅಂದರೆ, ಪ್ರತಿಯೊಬ್ಬ ನಟಿಗೂ ಈ ರೀತಿಯ ಅನುಭವ ಆಗಿರುತ್ತದೆ. ಹೆದರಿಕೆ ಕೂಡ ಇರುತ್ತೆ. ಏನಪ್ಪಾ ಸುಮ್ನೆ ಆಮೇಲೆ ಏನಾದ್ರೂ ಹಾಕ್ತಾರೆ ಅಂತ. ಆದರೆ, ನಾನು ನನ್ನ ಒಂದಷ್ಟು ವಿಡಿಯೋಗಳನ್ನ ನೋಡಿದೆ. ನನಗೊಬ್ಬಳಿಗೇ ಈ ರೀತಿ ಆಗಿದ್ಯಾ ಅನ್ನೋ ಡೌಟ್‌ನಲ್ಲಿ ನನಗೆ ಪರಿಚಯ ಇರೋರನ್ನ ವಿಚಾರಿಸಿದಾಗ ಅವರೆಲ್ಲ ಹೌದು.. ಈ ರೀತಿ ನಮಗೂ ಆಗಿದೆ ಅಂದ್ರು. ಬೇಕು ಅಂತಲೇ ಅಸಭ್ಯವಾಗಿ ತೆಗೆದ ಚಿತ್ರವನ್ನು ಪ್ರೊಜೆಕ್ಟ್ ಮಾಡ್ತಾರೆ. ಅದನ್ನೇ ಜೂಮ್ ಮಾಡ್ತಾರೆ. ನಾವೇನೋ ಮಾತಾಡೋದನ್ನ ವಿಡಿಯೋ ಮಾಡೋದು. ತುಂಬಾ ಜನ ಇದನ್ನೇ ಮಾಡಿದ್ದಾರೆ ಎಂದು ಸಪ್ತಮಿಗೌಡ ಹೇಳಿದ್ದಾರೆ.

ಒಬ್ಬೊಬ್ಬರೇ ಈ ರೀತಿ ನಿಂತುಕೊಳ್ಳೋದಕ್ಕೆ ಎಲ್ರಿಗೂ ಭಯ ಇರುತ್ತೆ, ಇವತ್ತು ಇಂಡಸ್ಟ್ರಿಯಲ್ಲಿ ನಾವು ಕೆಲಸ ಮಾಡ್ತಿದ್ದೀವಿ. ನಾವೆಲ್ಲರೂ ಸಿನಿಮಾನೇ ಮಾಡ್ತಿರೋದು. ಹಾಗಾಗಿ, ಈ ವಿಷಯದಲ್ಲಿ ಎಲ್ಲರೂ ಒಟ್ಟಿಗೆ ನಿಂತುಕೊಳ್ಳೋಣ ಅಂದಾಗ, ಎಲ್ರೂ ಒಪ್ಪಿಕೊಂಡರು. ಇದನ್ನೆಲ್ಲಾ ಮಾಡ್ತಿರೋರಿಗೆ ಹೆದರಿಕೆ ಹುಟ್ಟಿಸಬೇಕು ಎಂದವರು ಹೇಳಿದರು.



ಖುಷಿಯ ವಿಚಾರ ಅಂದರೆ ಇಡೀ ಸ್ಯಾಂಡಲ್ವುಡ್ ನನ್ನ ಜೊತೆ ನಿಂತಿದೆ. ಎಲ್ಲರೂ ನನಗೆ ಸಪೋರ್ಟ್ ಮಾಡ್ತಿದ್ದಾರೆ. ಇದಕ್ಕೆಲ್ಲ ಫಿಲಂ ಚೇಂಬರ್ ರೂಲ್ಸ್ ಮಾಡಬೇಕು, ಆಗಲೇ ಇಂಥವರನ್ನು ಕಂಟ್ರೋಲ್ ಮಾಡಬಹುದು,

ಸಭೆಯಲ್ಲಿ ಯಾವುದರ ಅರಿವಿಲ್ಲದೆ ಕೂತಿರುವ ನಮ್ಮನ್ನು ಅಶ್ಲೀಲವಾಗಿ, ಯಾವುದ್ಯಾವುದೋ ಆಂಗಲ್‌ನಲ್ಲಿ ವಿಡಿಯೋ ತೆಗೆಯುತ್ತಾರೆ. ಕೆಲವೊಂದಷ್ಟೇ ನಮ್ಮ ಕಣ್ಣಿಗೆ ಬಿದ್ದಿರುತ್ತೆ. ಮಿಕ್ಕಿದ್ದು ಅವರ ಫೋನ್‌ಗಳಲ್ಲೇ ಇರುತ್ತೆ, ಆ ವಿಡಿಯೋಗಳು ಎಲ್ಲೋ ಬೇರೆ ಕಡೆ ಮಿಸ್‌ಯೂಸ್ ಆಗಲ್ಲ ಅಂತ ನಮಗೆ ಏನ್ ಗ್ಯಾರಂಟಿ ಡೀಪ್‌ಫೇಕ್ ಮತ್ತು ಎಐ ಕಾಲದಲ್ಲಿ ನಾವು ಇದನ್ನೆಲ್ಲಾ ಹೇಗೆ ತಗೊಳ್ಳೋದು ಎಂದು ಸಪ್ತಮಿಗೌಡ ಕಿಡಿಕಾರಿದ್ದಾರೆ.

ಪಂಚಭೂತಗಳ ಪ್ರತಿನಿಧಿಸುವ 'ಪಂಚ ರತ್ನಗಳು'



ಪ್ರಕೃತಿಯಲ್ಲಿ ಪಂಚಭೂತಗಳು ಎಂದರೆ ಭೂಮಿ, ಆಕಾಶ, ಗಾಳಿ, ನೀರು, ಬೆಂಕಿ. ಈ ಐದನ್ನು ಪ್ರತಿನಿಧಿಸುವ ಮಕ್ಕಳ ಸಾಹಸದ ಕಥೆಯನ್ನು ಹೇಳುವ 'ಪಂಚ ರತ್ನಗಳು' ಚಿತ್ರ ಈವಾರ ತೆರೆಕಾಣುತ್ತಿದೆ. ಗೌತಮ್ ಆರ್. ಅವರ ನಿರ್ದೇಶನವಿರುವ ಈ ಚಿತ್ರದಲ್ಲಿ ಮಕ್ಕಳಾದ ಪ್ರಥಮ್, ಯಶಸ್, ವಿಹಾನ್, ತನ್ವಿ ಹಾಗೂ ಆಧ್ಯ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕರು ಪಂಚಭೂತಗಳ ಥೀಮ್‌ನಲ್ಲಿ ಈ 5 ಪಾತ್ರಗಳನ್ನು ತೋರಿಸಿದ್ದಾರೆ.

ಲವ್, ಮಾಸ್, ಆಕ್ಷನ್ ಚಿತ್ರಗಳ ನಡುವೆ ಅಲ್ಲೊಂದು ಇಲ್ಲೊಂದು ಮಕ್ಕಳ ಚಿತ್ರಗಳು ನಿರ್ಮಾಣವಾಗುತ್ತಿವೆ. ಅದರಲ್ಲಿ ಪಂಚರತ್ನಗಳು ಒಂದು. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಪ್ರದರ್ಶಕ ಹಾಗೂ ವಿತರಕ ಜಿ.ಆರ್. ನಾರಾಯಣ ಗೌಡ ಅವರು ಕ್ಯಾಲಮ್ಮದೇವಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಒಂದಷ್ಟು ಸಿನಿಮಾಗಳಲ್ಲಿ ನಟಿಸಿರುವ ಮೈಸೂರು ಮೂಲದ ಗಾಯಕ ಗೌತಮ್ ಆರ್. ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ. ಜತೆಗೆ ಮೂರು ಹಾಡುಗಳ ಸಾಹಿತ್ಯವನ್ನೂ ರಚಿಸಿದ್ದಾರೆ.

ತಾಯಿಯ ಪಾತ್ರದಲ್ಲಿ ಬಿಂದೂ ಆಚಾರ್ಯ, ಶಿಕ್ಷಣ ಸಚಿವರಾಗಿ ಆನಂದ್ ನಗರಕರ್ ಅಭಿನಯಿಸಿದ್ದಾರೆ. ಪ್ರಾವ್ ಅವರ ಸಂಗೀತ ನಿರ್ದೇಶನ, ಅನಿಲ್ ಕಶ್ಯಪ್ ಅವರ ಛಾಯಾಗ್ರಹಣ, ಅಭಿಷೇಕ್ ಅವರ ಸಂಕಲನ ಈ ಚಿತ್ರಕ್ಕಿದೆ. ವೆಂಕಟ್‌ಗೌಡ ಚಿತ್ರದ ವಿತರಕರು,

ನಿರ್ದೇಶಕ ಗೌತಮ್ ಮಾತನಾಡುತ್ತ ಸಮಾಜದ ಸಮಸ್ಯೆಗಳನ್ನು ದೊಡ್ಡವರು ಗಮನಕ್ಕೆ ತೆಗೆದುಕೊಳ್ಳದೇ ಹೋದಾಗ, ಆ ವಿಷಯವನ್ನು ಸರ್ಕಾರಕ್ಕೆ ತಲುಪಿಸುವ ತೀರ್ಮಾನಕ್ಕೆ ಬಂದ ಐವರು ಮಕ್ಕಳು, ಅದನ್ನು ಹೇಗೆ ತಾವೇ ಸರಿಪಡಿಸುವ ಮೂಲಕ ಹೇಗೆ ಪಂಚರತ್ನಗಳಾಗುತ್ತಾರೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ ಎಂದು ಹೇಳಿದರು. ಈ ಮೊದಲು ಚಿತ್ರಕ್ಕೆ ಪಂಚಭೂತಗಳು ಎಂಬ ಹೆಸರನ್ನಿಡಲಾಗಿತ್ತು. ನಂತರ ಇದು ನೆಗೆಟಿವ್ ಟೈಟಲ್ ಎನಿಸುತ್ತೆ ಎಂದು ಪಂಚರತ್ನಗಳು ಅಂತ ಬದಲಾಯಿಸಿದೆವು. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ ಎಂದೂ ಅವರು ಹೇಳಿದರು.

ಸಿನಿಪದಬಂಧ-617



ಉಮ್ಮತ್ತೂರು ಇಂದುಶೇಖರ್
ಮೊ.9880820462

1			2			3		4		
		5								
6										
		7								8
9					10		11		12	
	13						14			
			15		16					
17										

ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1. ಗಣೇಶ್ – ಪೂಜಾಗಾಂಧಿ ಸುರಿಸಿದ ವರ್ಷಧಾರೆ ! 5
4. ಮನಸಾಗಿದೆ ಚಿತ್ರದ ನಾಯಕಿ ಮೋಡವನ್ನು ಧರಿಸಿದ್ದಾಳೆ 3
5. ಮದಗದ ಕೆರೆ ಎಂದೊಡನೆ ನೆನಪಾಗುವ ಹಳ್ಳಿಯ ಹಾಡು 9
6. 'ಹೃದಯದಲಿ ಇದೇನಿದು _ _ ಯೊಂದು ಓಡಿದೆ.... ', 2
7. ಚಂಡ _ _ _ 3
9. ಮೋಡದ ಘರ್ಷಣೆಯ ಬೆಳಕು ಇಲ್ಲಿ ತಿರುಗಿದೆ 2
11. ಸುನಾದ್ ರಾಜ್ ಮೋಡದ ಸರ ಅಲಂಕರಿಸಿದ್ದಾನೆ 4
13. ಮೊದಲ ಮಳೆ ಚಿತ್ರದ ಹಾಡಿನಲ್ಲಿ ಕಾಣಿಸಿಕೊಂಡ ಕಪ್ಪನೆಯ ಮೋಡ 5
15. ಡಾ.ರಾಜ್, ಸರಿತಾ, ಅಂಬಿಕಾ ಅಭಿನಯದಲ್ಲಿ ಮೇಘಗಳ ಹಾದು ಹೋಗುವಿಕೆ 8
17. ಮಾಜಿ ಮುಖ್ಯಮಂತ್ರಿಯೊಬ್ಬರ ಕಾದಂಬರಿಯ 'ಚಕ್ರ ಮಾರುತ' 4

ಮೇಲಿನಿಂದ ಕೆಳಕ್ಕೆ

1. ರಮೇಶ್ – ಶಿಲ್ಪಾ ಅಭಿನಯದಿ ಮುಗಿಲಿನಲ್ಲಿ ಕಾಣಿಸಿಕೊಂಡ ಬೆಳಕು 6
2. ಪಶ್ಚಿಮ ಘಟ್ಟದ ಕಿಬ್ಬದಿಯ ಪ್ರದೇಶದಿ ಬೀಸಿದ ಗಾಳಿ ಸಂಗೀತಮಯ 6
3. 'ಲಾಲಿ' ಚಿತ್ರದ ಹಾಡಿನಲ್ಲಿ ಸುರಿದ ಇದೇ ತಿಂಗಳ ವರ್ಷಧಾರೆ 4
4. ಮಣ್ಣಿನ ದೋಣಿಯ ಹಾಡೊಂದರ ಮೊದಲ ಸಾಲಿನಲ್ಲೇ ರಮೇಶ್ ಅಭಿನಯವಿದೆ 6
8. ತನುಷ್ – ಹರ್ಷಿಕಾ ಪೂಣಚ್ಚ ಪ್ರೀತಿಯಲ್ಲಿ ಎಬ್ಬಿದ 'ತರಂಗ' 2
10. ಗುಡುಗಿನೊಂದಿಗೆ ಆರ್ಭಟಿಸಿದ ಭಾನ ಅನಲ 3
12. ಮುಂಗಾರುವಿನಲ್ಲಿ ಡಾಲಿ ಧನಂಜಯ – ರಚಿತಾರಾಮ್ ಹಾಡಿದ ಹಾಡು 5
13. ವಿಶುಕುಮಾರ್ ನಿರ್ದೇಶನದ ತೀರ ಪ್ರದೇಶ 4
14. ತ್ರಿವೇಣಿ ಕಾದಂಬರಿಗೆ ಪುಟ್ಟಣ್ಣ ಕಣಗಾಲ್ ನಿರ್ದೇಶನವಿದೆ 4
15. 'ಅಂಬಿಕಾ _ _ ತಾಳೇನು ಅಂಬಿಕಾ.....', 2
16. ನೀರಿನಲ್ಲಿ ಚಕ್ರಾಕಾರವಾಗಿ ಸುತ್ತುತಿದೆ 2

ಸಿನಿ ಪದಬಂಧ 616ರ ಉತ್ತರ

ಮ	ಹಾ	ಕಾ	ಳಿ			ಸ್ವ	ರ್ಣ	ಸಂ	ಸಾ	ರ
ನ				ಗಂ		ಯಂ				ನ್ನ
ಮೆ	ರ	ವ	ಣಿ	ಗೆ		ವ		ಪ		
ಚ್ಚಿ						ರ	ಣ	ವಿ	ಕ್ರ	ಮ
ದ	ನ	ಕಾ	ಯೋ	ನು				ತ್ರ		ಹಾ
ಹು				ಜೇ		ದಾ				ಕ
ಡು		ಸು				ಸ	ರೋ	ಜಾ	ದೇ	ವಿ
ಗಿ	ರಿ	ಮ	ಲ್ಲಿ	ಗೆ						ಕಾ
		ನ್		ದ್ದ		ಜಂ	ಭ	ದ	ಕೋ	ಳಿ
ತಾ				ಮ		ಗ್ಲಿ				ದಾ
ರಾ	ಯ	ರ	ಮ	ಗ			ಮ	ಧು	ಮಾ	ಸ

ವಿಜೇತರು: ಜಗದೀಶ್ ಎ.ಎನ್. ನಂ.141/1, 3ನೇ ಕ್ರಾಸ್, ರಾಘವೇಂದ್ರ ಬಡಾವಣೆ, ಮೈಸೂರು-26

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಅಧಿಕಾರಿಗಳ ವರದಿ ಆಧರಿಸಿ

ಕೆಎಸ್ಐಸಿಯಲ್ಲಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ ತೀರ್ಮಾನ

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟನೆ



ಎಂಎಲ್‌ಸಿ ಡಾ.ಯತೀಂದ್ರ ಕ್ರೀಡಾಂಗಣ ನಿರ್ಮಾಣದ ಜಾಗ ಪರಿಶೀಲಿಸಿದರು.

ತಿ.ನರಸೀಪುರ, ಮಾ.5– ಕೆಎಸ್ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಬೇಕೆ, ಬೇಡವೇ ಎಂಬುದನ್ನು ಅಧಿಕಾರಿಗಳು ನೀಡುವ ವರದಿ ಮೇಲೆ ನಿರ್ಧರಿಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಕೆಎಸ್ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಕಳೆದ 15 ದಿನಗಳಿಂದ ಕಾರ್ಮಿಕರು, ವಿವಿಧ ಸಂಘಟನೆಗಳ ಮುಖಂಡರು, ಪರಿಸರವಾದಿಗಳು ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಗುರುವಾರ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಲು ಕ್ರೀಡಾ ಇಲಾಖೆ ಗುರ್ತಿಸಿರುವ ಜಾಗ ಪರಿಶೀಲಿಸಿ, ಪ್ರತಿಭಟನಾಕಾರರ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

ಇಲ್ಲಿನ ಕೆಎಸ್ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಆದರೆ ಗೊತ್ತು ಗುರಿ ಇಲ್ಲದೇ ಈ ನಿರ್ಧಾರ ತೆಗೆದುಕೊಂಡಿಲ್ಲ. ಅಲ್ಲದೇ ಕೆಎಸ್ಐಸಿ ಕಾರ್ಖಾನೆ ಕಾರ್ಮಿಕರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಕೂಡ ಅಲ್ಲ. ಈ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರು ನಮ್ಮ ವರುಣ ಮತ್ತು ತಿ.ನರಸೀಪುರ ಕ್ಷೇತ್ರದವರು. ಅವರಿಗೆ ತೊಂದರೆಯಾದರೆ, ನಮಗೆ ತೊಂದರೆಯಾದಂತೆ. ಹೀಗಾಗಿ ಅವರಿಗೆ ತೊಂದರೆ ಕೊಟ್ಟು ಕ್ರೀಡಾಂಗಣ ನಿರ್ಮಿಸಬೇಕೆಂಬ ಉದ್ದೇಶ ಕೂಡ ಇರಲಿಲ್ಲ. ಆದರೆ ಬೇರೆ ಯಾವುದೇ ಜಾಗ ಲಭ್ಯವಿರಲಿಲ್ಲ. ಇದಕ್ಕೂ ಮುನ್ನಾ, ಪಟ್ಟಣದ ಒಳಗೆ ಕ್ರೀಡಾಂಗಣ ನಿರ್ಮಿಸಲು ತೋಟಗಾರಿಕೆ ಇಲಾಖೆ ಜಾಗ ಪರಿಶೀಲಿಸಿದ ವೇಳೆ ಜಾಗ ಸಾಲದೆಂಬ ಕಾರಣಕ್ಕೆ ಹಾಗೂ ಟಿಎಪಿಸಿಎಂಎಸ್ ಜಾಗ ತೆಗೆದುಕೊಳ್ಳಲು ಬರುವುದಿಲ್ಲ ಎಂಬ ಕಾರಣಕ್ಕೆ ಅವುಗಳನ್ನು ಕೈ ಬಿಟ್ಟು ಅಧಿಕಾರಿಗಳು ಕೆಎಸ್ಐಸಿ ಆವರಣದ ಜಾಗ ಸೂಕ್ತ ಎಂದು ವರದಿ ಕೊಟ್ಟ ಮೇಲಷ್ಟೇ ಈ ಜಾಗದ ಗುರುತು ಮಾಡಲಾಗಿದೆ ಎಂದರು.

ನಂತರದ ಬೆಳವಣಿಗೆಯಲ್ಲಿ ಹಲವು ಸಂಘಟನೆಗಳು, ಪರಿಸರವಾದಿಗಳು, ಕಾರ್ಮಿಕರು ಕ್ರೀಡಾಂಗಣ ನಿರ್ಮಾಣಕ್ಕೆ ಇದು ಸೂಕ್ತ ಜಾಗವಲ್ಲ. ಕಾರ್ಖಾನೆಗೆ ನದಿಯಿಂದ ಪೈಪ್‌ಲೈನ್ ಹೋಗಿದೆ. ಬಾಯ್ಲರ್ ಇದೆ. ಕಲ್ಲಿದ್ದಲು ಸುರಿಯಲು ಜಾಗದ ಅವಶ್ಯಕತೆ ಇದೆ ಎಂದು ಹಲವು ತಾಂತ್ರಿಕ ಕಾರಣಗಳನ್ನು ನೀಡಿದ್ದಾರೆ. ಹೀಗಾಗಿ ಇಷ್ಟೆಲ್ಲಾ ಸಮಸ್ಯೆಗಳನ್ನು ಪರಿಶೀಲಿಸಿ ಮತ್ತೊಮ್ಮೆ ಅಧಿಕಾರಿಗಳಿಗೆ ವರದಿ ನೀಡುವಂತೆ ಕೇಳಿದ್ದೇನೆ. ಅಧಿಕಾರಿಗಳು ಜಾಗ ಸೂಕ್ತವಲ್ಲ ಎಂದು ವರದಿ ನೀಡಿದರೆ ಇಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಡೋಣ. ಒಂದು ವೇಳೆ ಕ್ರೀಡಾಂಗಣ ನಿರ್ಮಿಸಲು ಈ ಜಾಗ ಸೂಕ್ತವಾಗಿದೆ. ಕಾರ್ಮಿಕರು ಕೊಟ್ಟಿರುವ ತಾಂತ್ರಿಕ ಕಾರಣಗಳು ಸರಿ ಇಲ್ಲ ಎಂದು ವರದಿ ನೀಡಿದರೆ ಇಲ್ಲೇ ಕ್ರೀಡಾಂಗಣ ನಿರ್ಮಿಸೋಣ ಎಂದು ಸ್ಪಷ್ಟ ಪಡಿಸಿದ ಅವರು, ಕ್ರೀಡಾಂಗಣವನ್ನು ನಾವು ವೈಜ್ಞಾನಿಕ ಆಧಾರದ ಮೇಲೆ ನಿರ್ಮಿಸಬೇಕಾಗುತ್ತದೆ. ನಾವು ಈ ಜಾಗವನ್ನು ಆಯ್ಕೆ ಮಾಡಿದ್ದು ಕೂಡ ಅಧಿಕಾರಿಗಳು ಹೇಳಿದ ಮೇಲೆಯೇ ಹೊರತು ರ‍್ಯಾಂಡಮ್ ಆಗಿ ಅಲ್ಲ ಎಂದರು.

ಕೆಎಸ್ಐಸಿ ಮುಚ್ಚಿ ತೊಂದರೆ ಕೊಡಲ್ಲ: ಅಧಿಕಾರಿಗಳು ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ಯೋಗ್ಯವಾಗಿದೆ ಎಂದು ವರದಿ ನೀಡಿದರೇ ಮಾತ್ರ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗುತ್ತೇವೆ. ಆದರೆ ಯಾವುದೇ ಕಾರಣಕ್ಕೂ ಫ್ಯಾಕ್ಟರಿ ಮುಚ್ಚಿ ಕಾರ್ಮಿಕರಿಗೆ ತೊಂದರೆ ಕೊಡುವುದಿಲ್ಲ. ಫ್ಯಾಕ್ಟರಿ ಮುಚ್ಚುವ ಪ್ರಮೇಯವೇ ಇಲ್ಲ. ಯಾರೂ ಆತಂಕ ಪಡುವ ಅವಶ್ಯಕತೆ ಇಲ್ಲ. ಆದರೆ ಕೆಲವರು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಆತಂಕ ಸೃಷ್ಟಿಸುತ್ತಿದ್ದಾರೆ. ಕಾರ್ಮಿಕರ ಹಿತಾಸಕ್ತಿ ಇಟ್ಟುಕೊಂಡೇ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದರು.

ಅಧಿಕಾರಿಗಳು, ಮುಖಂಡರ ಸಭೆ: ಕಾರ್ಖಾನೆ ಭೇಟಿಗೆ ಮೊದಲು ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಹಳೇ ಸಂತೇಮಾಳದ ಬಳಿಯ ಅತಿಥಿ ಗೃಹದಲ್ಲಿ ಕ್ರೀಡಾಂಗಣ ನಿರ್ಮಾಣ ಹಾಗೂ ಅದರಿಂದ ಆಗಬಹುದಾದ ಅನಾನುಕೂಲಗಳ ಬಗ್ಗೆ ಅಧಿಕಾರಿಗಳು ಹಾಗೂ ಸಾರ್ವಜನಿಕರಿಂದ ಮಾಹಿತಿ ಪಡೆದುಕೊಂಡರು.

ಈ ವೇಳೆ ಕ್ರೀಡಾಂಗಣ ನಿರ್ಮಾಣವಾಗದಿದ್ದಲ್ಲಿ ಬಂದಿರುವ ಅನುದಾನ ವಾಪಸ್ ಹೋಗುತ್ತದೆ ಎಂದು ಕೆಲವರು ಆತಂಕ ವ್ಯಕ್ತಪಡಿಸಿದರು. ಆದರೆ ಯಾವುದೇ ಕಾರಣಕ್ಕೂ ಹಣ ವಾಪಸ್ ಹೋಗುವುದಿಲ್ಲ ಎಂದು ಯತೀಂದ್ರ ತಿಳಿಸಿದರು.

ಈ ವೇಳೆ ಕ್ರೀಡಾಂಗಣ ನಿರ್ಮಾಣದಿಂದ ಕಾರ್ಮಿಕರಿಗೆ ತೊಂದರೆ ಉಂಟಾದರೆ ಅಲ್ಲಿ ಕ್ರೀಡಾಂಗಣ ನಿರ್ಮಿಸುವುದು ಬೇಡ. ಬೇರೆ ಜಾಗದಲ್ಲಿ ನಿರ್ಮಿಸಿ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಿಕೊಡುವಂತೆ ಕೆಲ ಮುಖಂಡರು ಮನವಿ ಮಾಡಿದರು. ಆನಂತರ ಜಿಲ್ಲಾಧಿಕಾರಿ, ಎಸ್ಪಿ, ಫ್ಯಾಕ್ಟರಿ ಎಂಡಿ, ತಹಸೀಲ್ದಾರ್ ಜೊತೆಗೂಡಿ ಯತೀಂದ್ರ ಸ್ಥಳ ಪರಿಶೀಲಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್, ಕೆಎಸ್ಐಸಿ ಜನರಲ್ ಮ್ಯಾನೇಜರ್ ಮಂಜುಳಾ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹ ದೇವಣ್ಣ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ಸದಸ್ಯ ಎಂ.ರಮೇಶ್, ಜಿಪಂ ಮಾಜಿ ಸದಸ್ಯ ಕೆ. ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಪುರಸಭಾ ಮಾಜಿ ಅಧ್ಯಕ್ಷರಾದ ಎಸ್.ಸೋಮು, ಎಸ್. ಮದನ್‌ರಾಜ್, ಸಿ.ಪ್ರಕಾಶ್, ಮಾಜಿ ಸದಸ್ಯ ಎಲ್.ಮಂಜುನಾಥ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಗಣೇಶ್, ಗ್ರಾಪಂ ಮಾಜಿ ಸದಸ್ಯ ಎಂ.ಮಿಥುನ್, ಪುರಿ ನಟರಾಜು, ಹಾಳೇಗೌಡ ಸೇರಿದಂತೆ ಮತ್ತಿತರರಿದ್ದರು.

ಕಾರ್ಮಿಕರ ಪ್ರತಿಭಟನೆ ಅಂತ್ಯ, ನಾಳೆಯಿಂದ ಕೆಲಸಕ್ಕೆ ಹಾಜರು

ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಕುರಿತಂತೆ ಗೊಂದಲ ಮುಂದುವರೆದಿದ್ದರೂ, ಕಾರ್ಮಿಕರು ಫ್ಯಾಕ್ಟರಿ ಎಂಡಿ ನಜೀರ್ ಖಾಸಿಮ್ ನೀಡಿದ ಭರವಸೆ ಮೇರೆಗೆ ಪ್ರತಿಭಟನೆ ಅಂತ್ಯಗೊಳಿಸಿ ನಾಳೆಯಿಂದ ಕೆಲಸಕ್ಕೆ ಹಾಜರಾಗಲು ನಿರ್ಧರಿಸಿದ್ದಾರೆ. ಕಾರ್ಖಾನೆ ಆವರಣದಲ್ಲಿ ಯಾವುದೇ ಕಾರಣಕ್ಕೂ ಕ್ರೀಡಾಂಗಣ ನಿರ್ಮಾಣವಾಗುವುದಿಲ್ಲ. ಅದಕ್ಕೆ ನಾನು ಗ್ಯಾರಂಟಿ ಕೊಡುತ್ತೇನೆ. ನಿಮಗೆ ಯಾವುದೇ ತೊಂದರೆಯಾಗುವುದಿಲ್ಲ. ಹಾಗಾಗಿ ಎಲ್ಲರೂ ಪ್ರತಿಭಟನೆ ಅಂತ್ಯ ಗೊಳಿಸಿ ಕರ್ತವ್ಯಕ್ಕೆ ಹಾಜರಾಗುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಎಂಡಿಯುವರ ಮಾತಿನ ಭರವಸೆ ಮೇರೆಗೆ ಪ್ರತಿಭಟನೆ ಅಂತ್ಯಗೊಳಿಸಿದ್ದು, ನಾಳೆಯಿಂದ ಕೆಲಸಕ್ಕೆ ಹಾಜರಾಗಲಿದ್ದಾರೆ. ಕಳೆದ 15 ದಿನಗಳಿಂದ ಸ್ಥಗಿತ ಗೊಂಡಿದ್ದ ಕಾರ್ಖಾನೆಯಲ್ಲಿ ನೂಲು ತೆಗೆಯುವ ಪ್ರಕ್ರಿಯೆ ನಾಳೆಯಿಂದ ಆರಂಭಗೊಳ್ಳಲಿದೆ.

ವೈಜ್ಞಾನಿಕ ಸಮೀಕ್ಷೆ ನಡೆಸಿ, ಮೀಸಲಾತಿ ಜಾರಿಗೊಳಿಸಲಿ

ಕೂಡ್ಲಾಪುರ ಗ್ರಾಪಂ ಮಾಜಿ ಅಧ್ಯಕ್ಷ ವಾಸುದೇವಮೂರ್ತಿ ಆಗ್ರಹ



ಸುದ್ದಿಗೋಷ್ಠಿಯಲ್ಲಿ ಕೂಡ್ಲಾಪುರ ಗ್ರಾಪಂ ಮಾಜಿ ಅಧ್ಯಕ್ಷ ವಾಸುದೇವಮೂರ್ತಿ ಮಾತನಾಡಿದರು.

ನಂಜನಗೂಡು, ಮಾ.5– ನ್ಯಾಯಮೂರ್ತಿ ನಾಗಮೋಹನ್ ದಾಸ್ ನೀಡಿರುವ ಮೀಸಲಾತಿ ವರ್ಗೀಕರಣ ಅವೈಜ್ಞಾನಿಕವಾಗಿದ್ದು, ಇದರಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಆದ್ದರಿಂದ ನಾಗಮೋಹನ್ ದಾಸ್ ವರದಿ ತಿರಸ್ಕರಿಸಿ ಸರ್ಕಾರ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ ವರದಿ ಜಾರಿಗೆ ಮುಂದಾಗಬೇಕು ಎಂದು ಕೂಡ್ಲಾಪುರ ಗ್ರಾಪಂ ಮಾಜಿ ಅಧ್ಯಕ್ಷ ವಾಸುದೇವಮೂರ್ತಿ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ.ನಾಗಮೋಹನ್ ದಾಸ್ ಅವರು ಮೊದಲಿನಿಂದಲೂ ಒಂದು ಸಮುದಾಯದ ಪರವಾಗಿದ್ದರು. ಅಲ್ಲದೇ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ವಿಭಜಿಸಿ ಪ್ರತ್ಯೇಕ ಗುಂಪುಗಳಾಗಿ ಮಾಡಿ ಹೆಚ್ಚಿರುವ ಸಮುದಾಯವನ್ನು ಕಡಿಮೆ ಎಂದು ಕಡಿಮೆ ಇರುವ ಸಮುದಾಯವನ್ನು ಹೆಚ್ಚು ಎಂದು ವರದಿಯಲ್ಲಿ ತೋರಿಸಿದ್ದಾರೆ. ಜೊತೆಗೆ ನಗರದಲ್ಲಿರುವವರ ಸಮೀಕ್ಷೆ ಪೂರ್ಣಗೊಳಿಸದೆ ವರದಿ ನೀಡಿದ್ದಾರೆ. ಆದ್ದರಿಂದ ಜನಸಂಖ್ಯೆಗೆ ಅನುಗುಣವಾಗಿ, ಭೂ ಒಡೆತನದ ಆಧಾರದ ಮೇಲೆ ಮತ್ತು ಉದ್ಯೋಗ ಪ್ರಮಾಣದ ಮೇಲೆ, ಉದ್ಯಮ ಒಡೆತನದ ಆಧಾರದ ಮೇಲೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ ಮೀಸಲಾತಿ ಸಿದ್ಧಪಡಿಸಿ ಪುನರ್ ವಿಂಗಡಣೆ ಬಗ್ಗೆ ಸದನದಲ್ಲಿ ಸಂಪೂರ್ಣ ಚರ್ಚೆ ನಡೆಸಿ ಜಾರಿಗೆ ತರಲು ಮುಂದಾಗಬೇಕು. ಈಗ ಸಲ್ಲಿಸಿರುವ ಅವೈಜ್ಞಾನಿಕ ವರದಿ ತಿರಸ್ಕರಿಸಿ ಬಲಗೈ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಜಿ.ಬಸವರಾಜು ಮಾತನಾಡಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಮೇಲೆ ಅತಿಯಾದ ಆತ್ಮವಿಶ್ವಾಸ ಇದ್ದಿದ್ದರಿಂದ ವರದಿ ಬಗ್ಗೆ ಹೆಚ್ಚು ಚರ್ಚೆ ನಡೆಸದೆ ಜಾರಿಗೆ ತರಲಾಯಿತು. ಆದರೆ ಈ ವರದಿ ಬಗ್ಗೆ ಸದನದಲ್ಲಿ ಚರ್ಚೆ ನಡೆಸಿ ಜಾರಿಗೊಳಿಸಬೇಕು. ಅಲ್ಲದೇ ಮಾದಿಗ ಸಮುದಾಯದ ಗೋವಿಂದ ಕಾರಜೋಳ ಅವರೇ ಈ ವರದಿ ಅವೈಜ್ಞಾನಿಕ ಎಂದು ಹೇಳಿದ್ದಾರೆ. ಜೊತೆಗೆ ಕೆಲವು ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳು ಸಮುದಾಯದವರಲ್ಲಿ ಒಡಕು ಮೂಡಿಸುವ ಸಲುವಾಗಿ ಎತ್ತಿಕಟ್ಟಿದ್ದಾರೆ. ಅವರ ಮಾತನ್ನು ಸಮುದಾಯ ಎಂದೂ ಸ್ವೀಕರಿಸುವುದಿಲ್ಲ. ಒಳ ಮೀಸಲಾತಿಯ ಹೋರಾಟಗಾರ ಭಾಸ್ಕರ್ ಪ್ರಸಾದ್ ರಾಜಕೀಯ ಗುಲಾಮರಂತೆ ಹೇಳಿಕೆ ನೀಡಬಾರದು. ಅನಗತ್ಯವಾಗಿ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಸಮುದಾಯದ ನಾಯಕರನ್ನು ಟಾರ್ಗೆಟ್ ಮಾಡಿಕೊಂಡು ತಾತ್ಸಾರದ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ನಾವು ಕೂಡ ಬಳೆ ತೊಟ್ಟಿಲ್ಲ ಎಂಬುದನ್ನು ಅವರು ಅರಿಯಬೇಕು. ಒಂದು ವೇಳೆ ಭಾಸ್ಕರ್ ಪ್ರಸಾದ್ ಇದೇ ಚಾಳಿ ಮುಂದುವರಿಸಿದ್ದಲ್ಲಿ ಡಾ.ಹೆಚ್.ಸಿ.ಮಹದೇವಪ್ಪ ಪರವಾಗಿ ಅವರ ಶಕ್ತಿ ತೋರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಪ.ಜಾತಿ ಸಂಚಾಲಕರಾದ ರವಿಪ್ರಕಾಶ್, ನಗರಸಭಾ ಮಾಜಿ ಸದಸ್ಯ ಎನ್.ಎಸ್.ಯೋಗೀಶ್, ಮುಖಂಡರಾದ ಸಿ.ಆರ್.ಮಹದೇವು ಉಪಸ್ಥಿತರಿದ್ದರು.

ಮಾದಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ

ಅಧ್ಯಕ್ಷರಾಗಿ ಶಿವಣ್ಣ, ಉಪಾಧ್ಯಕ್ಷರಾಗಿ ರಾಜಶೇಖರ್ ಆಯ್ಕೆ



ಮಾದಾಪುರ ಡೇರಿ ಅಧ್ಯಕ್ಷರಾಗಿ ಶಿವಣ್ಣ, ಉಪಾಧ್ಯಕರಾಗಿ ರಾಜಶೇಖರ್ ಆಯ್ಕೆಯಾದರು.

ತಿ.ನರಸೀಪುರ, ಮಾ.5– ತಾಲೂಕಿನ ಮಾದಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಶಿವಣ್ಣ, ಉಪಾಧ್ಯಕ್ಷರಾಗಿ ರಾಜಶೇಖರ್ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಿವಣ್ಣ ಹಾಗೂ ಶಿವಕುಮಾರ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಮತದಾನದಲ್ಲಿ ಶಿವಣ್ಣ 6 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಶಿವಕುಮಾರ್ 5 ಮತಗಳನ್ನು ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ರಾಜಶೇಖರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಘೋಷಿಸಿದರು.

ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ಪಿ.ಸೋಮಶೇಖರ್, ಪ್ರವೀಣ, ಪಿ. ಮಹದೇವಪ್ಪ, ಭೋಜಪ್ಪ, ವಿ.ರವಿ ಸೇರಿದಂತೆ ಎಲ್ಲಾ 11 ಸದಸ್ಯರು ಹಾಜರಿದ್ದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಸರ್ಕಾರದ ನಾಮ ನಿರ್ದೇಶಕ ಸದಸ್ಯ ವಿ.ರವಿ, ಸರ್ಕಾರದಿಂದ ಬರುವ ಸವಲತ್ತುಗಳೊಂದಿಗೆ, ಮೈಮುಲ್‌ನಿಂದ ಸಬ್ಸಿಡಿ ಹಣ ಹಾಗೂ ಹಸುಗಳಿಗೆ ಪಶು ಆಹಾರ ಕೊಡಿಸುವ ಮೂಲಕ ಸಹಕಾರ ಸಂಘದ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ. ಡಾ.ಕುರಿಯನ್ ಕಂಡಿದ್ದ ಕನಸು ರೈತರ ಮೂಲಕ ನನಸಾಗಬೇಕು. ಕ್ಷೀರ ಕ್ರಾಂತಿಯಾಗಬೇಕು. ಹೀಗಾಗಿ ಹಾಲು ಉತ್ಪಾದಕರು ಡೈರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ನೂತನ ಅಧ್ಯಕ್ಷ ಶಿವಣ್ಣ ಮಾತನಾಡಿ, ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡಬೇಕು. ರೈತರು ಮತ್ತು ನಿರ್ದೇಶಕರು ಕೊಟ್ಟಿರುವ ಅಧಿಕಾರ ಬಳಸಿಕೊಂಡು ಸಂಘ ಉನ್ನತ ಸ್ಥಾನಕ್ಕೇರಲು ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದರು.

ಈ ವೇಳೆ ಮುಖಂಡರಾದ ಅಂಗಡಿ ಕೆಂಚಪ್ಪ, ಮಹದೇವಪ್ಪ, ಚನ್ನಬಸಪ್ಪ, ಪ್ರಭುಸ್ವಾಮಿ, ಸೋಮಶೇಖರಪ್ಪ, ಚೇರ್ಮನ್ ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಸೋಮಣ್ಣ, ನಾಗರಾಜು, ಪುರಿ ಬಸವಗೌಡ, ದೀಪು, ಎನ್.ಮಹೇಶ್, ಪುಟ್ಟಮಾದಶೆಟ್ಟಿ, ಗುರುಸ್ವಾಮಿ, ರಾಜು ಸಿ, ನಂಜುಂಡ, ಶಿವಶಂಕರ್, ಉಮೇಶ್, ಮಹೇಶ್ ಹಾಗೂ ಮಾದಾಪುರ ಗ್ರಾಮಸ್ಥರು ಹಾಜರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಮಹಿಳೆಯರ ಆರ್ಥಿಕಾಭಿವೃದ್ಧಿ

ತಾಲೂಕು ಯೋಜನಾಧಿಕಾರಿ ಭಾಸ್ಕರ್



ಸಾಮೂಹಿಕ ಗಣಪತಿ ಹೋಮ ಮತ್ತು ಬಿಲ್ವಾರ್ಚನೆ ಧಾರ್ಮಿಕ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಮಾ.5– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಡಾ.ಡಿ.ವೀರೇಂದ್ರ ಹೆಗ್ಗಡೆಯವರು 6 ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಅವರ ಆರ್ಥಿಕಾಭಿವೃದ್ಧಿಗೆ ನೆರವಾಗಿದ್ದಾರೆ ಎಂದು ಸಂಸ್ಥೆ ತಾಲೂಕು ಯೋಜನಾಧಿಕಾರಿ ಭಾಸ್ಕರ್ ತಿಳಿಸಿದರು.

ತಾಲೂಕಿನ ಹೊನ್ನಮ್ಮನಕಟ್ಟೆಯಲ್ಲಿ ಏರ್ಪಡಿಸಿದ್ದ ಸಾಮೂಹಿಕ ಗಣಪತಿ ಹೋಮ ಮತ್ತು ಬಿಲ್ವಾರ್ಚನೆ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಇಲ್ಲಿವರೆಗೆ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ 900 ಕೋಟಿ ರೂ. ಸಾಲ ವಿತರಿಸಲಾಗಿದೆ. ಎಲ್ಲಾ ಸಾಲ ಮರು ಪಾವತಿಯಾಗಿ ಪ್ರಸ್ತುತ 130 ಕೋಟಿ ಸಾಲ ಬಾಕಿ ಇದೆ. ಹಾಗೆಯೇ ಸಾಲ ಪಡೆದ ಕುಟುಂಬಕ್ಕೆ ವಿಮೆ ಮಾಡಿಸಿದ್ದು, ವ್ಯಕ್ತಿ ಆಕಸ್ಮಿಕವಾಗಿ ಮೃತಪಟ್ಟರೇ ಆ ಕುಟುಂಬಕ್ಕೆ ಸಾಲ ಹೊರೆಯಾಗಬಾರದು ಎಂಬ ಕಾರಣಕ್ಕೆ ವಿಮೆ ಕಂಪನಿ ಮೂಲಕ ಹಣ ಮರುಪಾವತಿಯಾಗುತ್ತದೆ. ರಾಜ್ಯದಲ್ಲಿ 11525 ಸಾಮಾನ್ಯ ಸೇವಾ ಕೇಂದ್ರಗಳಿದ್ದು, ಇವುಗಳ ಮೂಲಕ ನೇರವಾಗಿ ಸದಸ್ಯರ ಖಾತೆಗಳಿಗೆ ಸಾಲ ನೀಡುವುದು ಮತ್ತು ಸಂದಾಯ ಆಗುವ ಕೆಲಸ ಮಾಡಲಾಗುತ್ತದೆ ಎಂದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ನಿವೃತ್ತ ಪ್ರಾಂಶುಪಾಲ ಅಂಜುಂಪಾಷ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಾಮೂಹಿಕ ಗಣಪತಿ ಹೋಮ ಮತ್ತು ಬಿಲ್ವಾರ್ಚನೆ ಧಾರ್ಮಿಕ ಸಮಿತಿ ಅಧ್ಯಕ್ಷ ಟಿ.ಮಂಜು, ನಿವೃತ್ತ ಸಿಪಿಐ ಚಲುವೇಗೌಡ, ಉದ್ಯಮಿ ನಿಂಗರಾಜು, ಮುಖಂಡರಾದ ದಿನೇಶ್, ನಿಂಗರಾಜು, ರಾವಳನಾಯಕ್, ಶಿವಣ್ಣ ಶೆಟ್ಟಿ, ರಿಯಾಜ್ ಪಾಷ, ಸಿಂಗಾರಯ್ಯ, ಬಸವರಾಜು, ರವಿ, ಮರಿಲಿಂಗಯ್ಯ, ಶಿವಪ್ರಕಾಶ್, ಭಾಸ್ಕರ್, ಶೋಭಾ, ಅಶ್ವಿನಿ, ತಿಮ್ಮನಾಯಕ, ಪುಟ್ಟಶೆಟ್ಟಿ, ಭೈರೇಗೌಡ, ಗಣೇಶ್, ಶಿವಣ್ಣ, ಚಂದ್ರಶೇಖರ್ ಇದ್ದರು.

ಬೆಟ್ಟದತುಂಗ: ಅಡಿಕೆ ಕಳ್ಳತನ

ಬೆಟ್ಟದಪುರ, ಮಾ.5– ಸಿಸಿ ಕ್ಯಾಮರಾ ನಾಶಪಡಿಸಿ, ಉಗ್ರಾಣದಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಅಡಿಕೆ ಕಳವು ಮಾಡಿರುವ ಘಟನೆ ಇಲ್ಲಿಗೆ ಸಮೀಪದ ಬೆಟ್ಟದತುಂಗ ಗ್ರಾಮದಲ್ಲಿ ನಡೆದಿದೆ.

ಮಾಜಿ ಸಿಎಂ ದಿ.ಡಿ.ದೇವರಾಜ ಅರಸು ಅವರ ಮನೆಯಲ್ಲೇ ಕಳ್ಳತನ ನಡೆದಿರುವುದು. ಅರಸು ಅವರ ಸಂಬಂಧಿಕರಾದ ರೈತ ಟಿ.ಆರ್.ಶ್ರೀನಾಥ್ ರಾಜೇ ಅರ್ಸ್ ಅವರು ಅಕ್ಕಪಕ್ಕದ ಗ್ರಾಮಸ್ಥರಿಂದ ಅಡಿಕೆ ಖರೀದಿಸಿ ಸಂಸ್ಕರಣೆ ಮಾಡಿ ವ್ಯಾಪಾರ ಮಾಡಲು ಇಟ್ಟಿದ್ದರು. ಆದರೆ ಅವರು ಮೈಸೂರಿಗೆ ತೆರಳಿದ್ದ ವೇಳೆ ಕಳೆದ ರಾತ್ರಿ ಮನೆಗೆ ನುಗ್ಗಿರುವ ಕಳ್ಳರು ಸಿಸಿ ಕ್ಯಾಮರಾ ನಾಶಗೊಳಿಸಿ 12 ಲಕ್ಷ ರೂ. ಮೌಲ್ಯದ 20 ಕ್ವಿಂಟಾಲ್ ಅಡಿಕೆಯನ್ನು ಕಳವು ಮಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ದೀಪಕ್, ಬೆಟ್ಟದ ಪುರ ಪೊಲೀಸರು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಶಾಸಕ ಡಿ.ರವಿಶಂಕರ್ ಸೂಚನೆ



ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಮಾ.5– ಬೇಸಿಗೆಯಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮುನ್ನಚ್ಚರಿಕೆ ವಹಿಸಿ, ಅಗತ್ಯ ದಾಸ್ತಾನು ಮತ್ತು ಪರಿಹಾರ ಕ್ರಮಗಳನ್ನು ಅಧಿಕಾರಿಗಳು ಕೈಗೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ಸೂಚಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನಲ್ಲಿ ಬಿಸಿಲಿನ ಬೇಗೆ ಜೋರಾಗಿದೆ. ಈ ವೇಳೆ ಕುಡಿಯುವ ನೀರು ಹಾಗೂ ಮೇವಿನ ಭವಣೆ ನೀಗಿಸಲು ಮತ್ತು ಯಾವುದೇ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಗಟ್ಟಲು ಸೂಕ್ತ ಕ್ರಮ ವಹಿಸಬೇಕು. ಈ 3 ತಿಂಗಳು ಸಂಬಂಧಪಟ್ಟ ಅಧಿಕಾರಿಗಳು ನನ್ನ ಸಂಪರ್ಕದಲ್ಲಿದ್ದು, ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಬೇಕೆಂದು ತಿಳಿಸಿದರು.

ಮಾರ್ಚ್ ಆರಂಭದಿಂದ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಜಾತ್ರಾ ಮಹೋತ್ಸವ ಸೇರಿದಂತೆ ಹಬ್ಬಗಳು ಹೆಚ್ಚಾಗಿ ನಡೆಯುವುದರಿಂದ ಈಗಿನಿಂದಲೇ ಚರಂಡಿಗಳ ಸ್ವಚ್ಛತಾ ಕಾರ್ಯ ಮಾಡುವುದರ ಜೊತೆಗೆ ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿ ಎಂದು ತಾಕೀತು ಮಾಡಿದರು.

ಹಂಪಾಪುರ, ಭೇರ್ಯ, ಸಾಲಿಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಬೋರ್‌ವೆಲ್ ಕೊರೆಸಿ. ಎಲ್ಲೆಲ್ಲಿ ಕುಡಿಯುವ ನೀರು, ಮೇವಿನ ಕೊರತೆ ಕಂಡು ಬಂದಲ್ಲಿ ತಕ್ಷಣವೇ ಸ್ಪಂದಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವಳಿ ತಾಲೂಕಿನಲ್ಲಿ ಆರೋಗ್ಯ ಕೇಂದ್ರಗಳಿಗೆ ನಿಗಿದಿತ ಸಮಯಕ್ಕೆ ವೈದ್ಯರು ಬರುತ್ತಿಲ್ಲ ಎಂಬ ಆರೋಪ ಕೇಳಿ ಬರುತ್ತಿದೆ. ಹೀಗಾಗಿ ತಾಲೂಕು ಆರೋಗ್ಯಾಧಿಕಾರಿಗಳು ಅಂತಹ ವೈದ್ಯರ ನಿಗಾ ವಹಿಸಿ ಔಷಧಿಗಳ ಕೊರತೆ ಇದ್ದರೆ ನನಗೆ ಮಾಹಿತಿ ನೀಡಿ ಎಂದರು.

ಸಭೆಯಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ತಾಪಂ ಇಓಗಳಾದ ವಿ.ಪಿ.ಕುಲದೀಪ್, ಎ.ಎನ್.ರವಿ, ಪಂಚಾಯತ್ ರಾಜ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಎಇಇ ಆನಂದ್, ಎಇ ಮೋಹನ್, ಕೃಷಿ ಸಹಾಯಕ ನಿರ್ದೇಶಕ ಕೆ.ಜಿ.ಮಲ್ಲಿಕಾರ್ಜುನ, ಚೆಸ್ಕಾಂ ಎಇಇ ಅರ್ಕೇಶ್ ಮೂರ್ತಿ, ಪಶುವೈದ್ಯ ಡಾ.ಹರೀಶ್, ಸಾಮಾಜಿಕ ಅರಣ್ಯ ಇಲಾಖೆ ವಲಯ ಅರಣ್ಯಾಧಿಕಾರಿ ಹರಿಪ್ರಸಾದ್, ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕಿ ಗೀತಾ, ಆರ್‌ಆರ್‌ಟಿ ಶಿರೆಸ್ತೇದಾರ್ ಎಂ.ವಿ.ವೆಂಕಟೇಶ್, ರಾಜಸ್ವ ನಿರೀಕ್ಷಕ ಶಶಿಕುಮಾರ್, ಪುರಸಭೆ ಇಂಜಿನಿಯರ್ ಮಧುಸೂದನ್ ಇತರರಿದ್ದರು.

ವೈಭವದ ನೂರಾಳೇಶ್ವರಸ್ವಾಮಿ ಜಾತ್ರಾ ಮಹೋತ್ಸವ



ಸರಗೂರು ತಾಲೂಕಿನ ಹುಸ್ಕೂರುಹಾಡಿ ಗ್ರಾಮದಲ್ಲಿ ನೂರಾಳೇಶ್ವರಸ್ವಾಮಿ ಜಾತ್ರಾ ಮಹೋತ್ಸವ, ಕೊಂಡೋತ್ಸವ ಗುರುವಾರ ವಿಜೃಂಭಣೆಯಿಂದ ನೆರವೇರಿತು.

ದಾಸೋಹ ಭವನದಲ್ಲಿ ಮಾಂಸಹಾರ ಸೇವಿಸಿದ್ದ ವ್ಯಕ್ತಿ ಬಂಧನ



ನಂಜನಗೂಡು, ಮಾ.5– ಇತ್ತೀಚೆಗೆ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದ ಮೆಟ್ಟಿಲ ಮೇಲೆ ಮಾಂಸಹಾರ ಸೇವಿಸಿದ್ದ ವ್ಯಕ್ತಿಯನ್ನು ನಂಜನಗೂಡು ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೇವಾಲಯದ ಬಳಿ ಹೂ ಮಾರುತ್ತಿದ್ದ ಪ್ರದೀಪ್ ಬಂಧಿತ ಆರೋಪಿ. ಈತ ಇತ್ತೀಚೆಗೆ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದ ಮೆಟ್ಟಿಲ ಮೇಲೆ ಕುಳಿತು ಮಾಂಸಹಾರ ಸೇವಿಸುತ್ತಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು ಇದರಿಂದ ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದರು. ಈ ಸಂಬಂಧ ದೇವಾಲಯದ ಇಓ ಕೃಷ್ಣ ಅವರು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಪ್ರದೀಪ್‌ನನ್ನು ವಶಕ್ಕೆ ಪಡೆದಿದ್ದಾರೆ.

ದೇವಾಲಯದ ಇಓ ಕೃಷ್ಣ ಮಾತನಾಡಿ, ದೇವಾಲಯದ ಭಕ್ತರ ಭಾವನೆಗೆ ಧಕ್ಕೆಯಾಗುವ ಯಾವುದೇ ಘಟನೆಗಳು ಸಂಭವಿಸಿಲ್ಲ. ದಾಸೋಹ ಭವನದ ಮೆಟ್ಟಿಲ ಮೇಲೆ ಮಾಂಸಹಾರ ಸೇವಿಸಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಜೊತೆಗೆ ಈಗಾಗಲೇ ದಾಸೋಹ ಭವನದ ಭದ್ರತಾ ಸಿಬ್ಬಂದಿಗೆ ನೋಟಿಸ್ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಎಚ್ಚರ ವಹಿಸುತ್ತೇವೆ ಎಂದರು.

ಒಳ ಮೀಸಲಾತಿ ಇಲ್ಲದೇ ನೇಮಕಾತಿ ಆದೇಶ ಹಿಂಪಡೆಯುವಂತೆ

ಮಾದಿಗ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ



ಒಳ ಮೀಸಲಾತಿ ಇಲ್ಲದೇ ನೇಮಕಾತಿ ಆದೇಶವನ್ನು ತಕ್ಷಣ ಹಿಂಪಡೆಯುವಂತೆ ಆಗ್ರಹಿಸಿ ತಾಲೂಕು ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿ ತಹಸೀಲ್ದಾರ್‌ರಿಗೆ ಮನವಿ ಸಲ್ಲಿಸಿದರು.

ತಿ.ನರಸೀಪುರ, ಮಾ.5– ಒಳ ಮೀಸಲಾತಿ ಇಲ್ಲದೇ ನೇಮಕಾತಿ ಆದೇಶವನ್ನು ತಕ್ಷಣ ಹಿಂಪಡೆಯುವಂತೆ ಒತ್ತಾಯಿಸಿ ತಾಲೂಕು ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣ ಸಮೀಪದ ಭೈರಾಪುರ ಗ್ರಾಮದ ಮುಖ್ಯದ್ವಾರದಲ್ಲಿರುವ ಬಾಬು ಜಗಜೀವನರಾಂ ಪುತ್ಥಳಿ ಬಳಿ ಜಮಾಯಿಸಿದ ಮಾದಿಗ ಸಮುದಾಯದ ಮುಖಂಡರು ಅಲ್ಲಿಂದ ಮೆರವಣಿಗೆ ಮೂಲಕ ಮೈಸೂರು ರಸ್ತೆ, ಕಾಲೇಜು ರಸ್ತೆ ಮೂಲಕ ತಾಲೂಕು ಆಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು.

ತಾಲೂಕು ಮಾದರ ಮಹಾಸಭಾ ಅಧ್ಯಕ್ಷ ಮೂಗೂರು ಬಲ್ಲಯ್ಯ ಮಾತನಾಡಿ, ಪ.ಜಾತಿ, ಸಮುದಾಯಗಳ ಹಿತ ಕಾಪಾಡಲು ಅಸಮರ್ಥರಾದ ಮತ್ತು ಎಲ್ಲಾ ಸಮುದಾಯಗಳ ಹಿತ ಕಾಪಾಡುವುದಾಗಿ ಸಂವಿಧಾನದ ಮೇಲೆ ಪ್ರಮಾಣ ಮಾಡಿ, ಕೇವಲ ಬಲಗೈ ಸಮಾಜದ ಪ್ರತಿನಿಧಿಯಂತೆ ವರ್ತಿಸುತ್ತಿರುವ ಅಪ್ಪಟ ಜಾತಿವಾದಿ, ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಸಂವಿಧಾನ ವಿರೋಧಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ರಾಜೀನಾಮೆ ಪಡೆಯಲು ಮತ್ತು ಸಮಾಜ ಕಲ್ಯಾಣ ಇಲಾಖೆ ಹಾಗೂ ಡಿಪಿಎಆರ್ ಇಲಾಖೆಯ ಐಎಎಸ್/ಕೆಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಒತ್ತಾಯಿಸಿದರು.

ಸಾಮಾಜಿಕ ಪ.ಜಾತಿ ಒಳ ಮೀಸಲಾತಿಯಂತೆ ಹುದ್ದೆಗಳನ್ನು ಭರ್ತಿ ಮಾಡಲೆಂದೇ 2024ರ ಅ.28 ರಿಂದ ತಡೆ ಹಿಡಿಯಲಾದ ಹುದ್ದೆಗಳಿಗೆ ಒಳ ಮೀಸಲಾತಿ ತಪ್ಪಿಸಿ, ಬಾಯಿಗೆ ಬಂದ ತುತ್ತನ್ನು ಕಸಿದು, ಶೇ.17 ಅಥವಾ 15ರಷ್ಟು ಒಳಮೀಸಲಾತಿ ಬೇಡಿಕೆ ಪರಿಗಣಿಸದೆ ತೀವ್ರ ವಿರೋಧದ ನಡುವೆ ಸಮುದಾಯದ ಸ್ವಾಭಿಮಾನಿ ಹಿರಿಯ ನಾಯಕರಾದ ಕೆ.ಹೆಚ್.ಮುನಿಯಪ್ಪ ಅವರ ಬೇಡಿಕೆ ಪರಿಗಣಿಸದೇ 2026 ಫೆ.26ರ ಸಚಿವ ಸಂಪುಟದ ದಲಿತ ಮತ್ತು ಮಾದಿಗ ವಿರೋಧಿ ನೀತಿಯ ನಿರ್ಣಯದಂತೆ ಶನಿವಾರ ಮತ್ತು ರವಿವಾರ ರಜೆ ಇದ್ದ ವೇಳೆ ಮೀಸಲಾತಿ ತಪ್ಪಿಸಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಫೆ.27 ರಂದು ಹೊರಡಿಸಿರುವ ಆದೇಶ ಕೂಡಲೇ ಹಿಂಪಡೆಯುವಂತೆ ಆಗ್ರಹಿಸಿದ ಅವರು, ಪರಿಷ್ಕೃತ ರೋಸ್ಟರ್ ಬಿಂದುಗಳನ್ನು ಗುರುತಿಸಿ, ಆದೇಶಿಸಿ 56,342 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು. ಕೆ.ಎಚ್.ಮುನಿಯಪ್ಪರವರು ಸಮಸ್ತ ಮಾದಿಗರ ಶಕ್ತಿಯಾಗಿದ್ದು ಅವರ ಹಿಂದೆ ಸಮಸ್ತ ಮಾದಿಗರ ಶಕ್ತಿ ಇದೆ ಎಂದರು.

ಈ ವೇಳೆ ತಹಸೀಲ್ದಾರ್ ಸುರೇಶಾಚಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಅರುಂಧತಿ ಸಹಕಾರ ಸಂಘದ ಅಧ್ಯಕ್ಷ ಕೆಂಚಪ್ಪ, ವಕೀಲರಾದ ಪ್ರಕಾಶ್, ಡಾ.ಮರಡಿಪುರ ರವಿಕುಮಾರ್, ಮಾಜಿ ಅಧ್ಯಕ್ಷ ಪುಟ್ಟಯ್ಯ, ಮಂಜುನಾಥ್, ಚಿನ್ನಸ್ವಾಮಿ, ಶಿವಣ್ಣ, ಗ್ರಾಪಂ ಮಾಜಿ ಸದಸ್ಯರಾದ ಮಹದೇವಸ್ವಾಮಿ, ಟಿ.ಎಂ. ಚೇತನ್, ಸುರೇಶ, ಭೈರಾಪುರ ಬಾಲು, ಸೋಸಲೆ ಮಾಜಿ ಗ್ರಾಪಂ ಉಪಾಧ್ಯಕ್ಷ ಹೇಮಾ ಭಾಸ್ಕರ್, ಜವಳಿ ಮಹದೇವ, ಮಲ್ಲೇಶ್, ಶಂಕರ್, ಕುಮಾರ, ರಾಚಯ್ಯ, ಸಿ.ಮಧು, ಮಹದೇವ, ನಿಂಗರಾಜು, ಸುನೀಲ್, ನಂದೀಶ್, ಶಂಭಯ್ಯ, ನಾರಾಯಣ, ಸಿದ್ದಯ್ಯ, ಬಾಬು, ಗೋಪಿ, ಭಾಸ್ಕರ್, ರಾಚಪ್ಪ ಮತ್ತಿತರರಿದ್ದರು.

ಮಣಿ ನಿಧನ



ಹೆಚ್.ಡಿ.ಕೋಟೆ, ಮಾ.5– ಪಟ್ಟಣದ ಡ್ರೈವರ್ ಕಾಲೋನಿ ನಿವಾಸಿ, ತಾಲೂಕು ಟೈಲರ್ ಸಂಘದ ಮಾಜಿ ಅಧ್ಯಕ್ಷ ಸ್ಕೈಲೆಟ್ ಮಣಿ(60) ಗುರುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಪಟ್ಟಣದ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೋಪಾಲಸ್ವಾಮಿ



ಹೆಚ್.ಡಿ.ಕೋಟೆ, ಮಾ.5– ಪಟ್ಟಣದ ಆಸ್ಪತ್ರೆ ಬಡಾವಣೆ ನಿವಾಸಿ ಗೋಪಾಲಸ್ವಾಮಿ(43) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಪಟ್ಟಣದ ರುದ್ರ ಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಮೆಗತಿಯಲ್ಲಿ ಸಾಗುತ್ತಿರುವ ಪೈಪ್‌ಲೈನ್ ದುರಸ್ತಿ ಕಾಮಗಾರಿ; ವಾಹನ ಸವಾರರು, ಪಾದಚಾರಿಗಳ ಸಂಚಾರಕ್ಕೆ ಸಂಚಕಾರ

● ಮೈಸೂರಿನ ಬನ್ನಿಮಂಟಪ ಹೈವೇ ವೃತ್ತದ ಬಳಿ ಜಾವಾ ರಸ್ತೆಯಲ್ಲಿ ನಡೆಯುತ್ತಿರುವ ನೀರಿನ ಪೈಪ್‌ಲೈನ್ ಕಾಮಗಾರಿ ● ತ್ವರಿತವಾಗಿ ಕೆಲಸ ಪೂರ್ಣಗೊಳಿಸುವ ಜಾಯಮಾನ ನಮ್ಮದಲ್ಲ!!

ಮೈಸೂರು,ಮಾ.5(ಪಿಎಂ)– ನೀರಿನ ಪೈಪ್‌ಲೈನ್ ದುರಸ್ತಿ ಕಾಮಗಾರಿ ಸಲುವಾಗಿ ಮೈಸೂರಿನ ಬನ್ನಿಮಂಟಪ ಹೈವೇ ವೃತ್ತದ ಬಳಿ ಜಾವಾ ರಸ್ತೆಯಲ್ಲಿ ಹಲವು ದಿನಗಳ ಹಿಂದೆ ಭಾರೀ ಗುಂಡಿ ತೆಗೆಯಲಾಗಿದ್ದು, ಇದರ ಪರಿಣಾಮ ರಸ್ತೆಯಲ್ಲಿ ರಾಶಿರಾಶಿ ಮಣ್ಣು ಬಿದ್ದಿದೆ. ಇದರಿಂದ ವಾಹನ ಸವಾರರು, ಪಾದಚಾರಿಗಳು ಇಲ್ಲಿ ಸುಗಮವಾಗಿ ಸಂಚರಿಸಲಾಗದೇ ಪರದಾಡುವ ಸನ್ನಿವೇಶ ನಿರ್ಮಾಣವಾಗಿದೆ.



ಬನ್ನಿಮಂಟಪ ಹೈವೇ ವೃತ್ತದ ಸಮೀಪದ ಜಾವಾ ರಸ್ತೆಯಲ್ಲಿ ನೀರಿನ ಪೈಪ್‌ಲೈನ್ ದುರಸ್ತಿ ಕಾಮಗಾರಿ ಸಲುವಾಗಿ ಗುಂಡಿ ತೆಗೆದಿರುವುದನ್ನು ಚಿತ್ರದಲ್ಲಿ ಕಾಣಬಹುದು.

ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಿಂದ ಈ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಆದರೆ ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸದೇ ವಿಳಂಬ ಮಾಡಲಾಗುತ್ತಿದೆ ಎಂಬ ಆರೋಪ ಇಲ್ಲಿ ನಿತ್ಯ ಸಂಚರಿಸುವ ವಾಹನ ಸವಾರರು ಹಾಗೂ ಸ್ಥಳೀಯರಿಂದ ಕೇಳಿ ಬಂದಿದೆ.

ಗುಂಡಿ ತೆಗೆದಿರುವ ಕಾರಣ ರಸ್ತೆಯ ಅರ್ಧ ಭಾಗದಷ್ಟು ಮಣ್ಣು ಗುಡ್ಡೆ ಹಿಡಿದಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಇನ್ನು ಪಾದಚಾರಿಗಳು ಇಲ್ಲಿ ಹಾದು ಹೋಗುವುದು ಅಸಾಧ್ಯವಾಗಿ ಪರಿಣಮಿಸಿದೆ. ಗುಂಡಿಯ ಕಾರಣಕ್ಕೆ ರಸ್ತೆಯಲ್ಲಿ ಸ್ಥಳಾವಕಾಶ ಕಡಿಮೆ ಇದ್ದು, ಇದರಿಂದ ಅಪಘಾತದ ಭೀತಿಯೂ ಎದುರಾಗಿದೆ. ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಎಚ್ಚರಿಕೆಯಿಂದ ಸಾಗಬೇಕಿದ್ದು, ತಪ್ಪಿದ್ದಲ್ಲಿ ಅವರು ಅಪಾಯಕ್ಕೆ ಸಿಲುಕುವುದು ಗ್ಯಾರಂಟಿಯಾಗಿದೆ.

ಮಳೆ ಬಂದಲ್ಲಿ ಗುಂಡಿಯಲ್ಲಿ ನೀರು ತುಂಬಿ ಅಪಾಯ ಸಂಭವಿಸುವ ಸನ್ನಿವೇಶವೂ ಇದೆ. ಗುಂಡಿ ತೆಗೆದು ಹಲವು ದಿನಗಳು ಕಳೆದರೂ ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸದೇ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ನಾಗರಿಕರು ದೂರಿದ್ದಾರೆ. ಮಳೆ ನೀರು ತುಂಬಿದರೆ, ಸವಾರರು ಇಲ್ಲವೇ ಪಾದಚಾರಿಗಳ ಪ್ರಾಣಕ್ಕೆ ಸಂಚಕಾರ ತಂದೊಡ್ಡುವ ಅಪಾಯವೂ ಇದೆ.

ಸೋರಿಕೆ ತಡೆ ಪರೀಕ್ಷೆಗೆ ಸಮಯಾವಕಾಶ ಅಗತ್ಯ: ಈ ಜಾಗದಲ್ಲಿ ನೀರಿನ ಪೈಪ್‌ಲೈನ್ ಒಡೆದು ಸೋರಿಕೆಯಾಗುತ್ತಿತ್ತು. ಹಾಗಾಗಿ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಒಂದೇ ದಿನದಲ್ಲಿ ಕಾಮಗಾರಿ ಪೂರ್ಣಗೊಳಿಸಿದರೆ ಸೂಕ್ತ ರೀತಿಯಲ್ಲಿ ನೀರಿನ ಸೋರಿಕೆ ಪರೀಕ್ಷೆ ಮಾಡುವುದು ಸಾಧ್ಯವಿಲ್ಲ. ಹಾಗಾಗಿ ಸಮಯಾವಕಾಶ ಅಗತ್ಯವಾಗುತ್ತದೆ ಎಂದು ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ಸ್ಪಷ್ಟಪಡಿಸಿದ್ದಾರೆ.


ಇಲ್ಲಿ ಹಿಂದೆ ಪೈಪ್‌ಲೈನ್ ಸೋರಿಕೆಯು ಸಣ್ಣದಾಗಿತ್ತು. ಆ ಬಳಿಕ ಮಣ್ಣು ಕುಸಿದಿತ್ತಲ್ಲದೆ, ಹೆಚ್ಚಿನ ಪ್ರಮಾಣದ ಸೋರಿಕೆ ಕಂಡುಬಂದಿತ್ತು. ಹಾಗಾಗಿ ದುರಸ್ತಿ ಮಾಡಲಾಗುತ್ತಿದೆ. ಹೊಸ ಪೈಪ್ ಅಳವಡಿಸಲಾಗಿದ್ದು, ಏರ್ ವಾಲ್ವ್ ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ. ಏರ್ ವಾಲ್ವ್ ಹಾಕಿದರೆ ಮುಂದಿನ ದಿನಗಳಲ್ಲಿ ಪೈಪ್ ಒಡೆಯುವುದನ್ನು ತಪ್ಪಿಸಬಹುದು. ಇನ್ನು ಎರಡು ಮೂರು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.

ಏತ ನೀರಾವರಿಯಡಿ ಕೆರೆ ತುಂಬಿಸಲು ಪ್ರಾಮಾಣಿಕ ಯತ್ನ

ಶೀಘ್ರ ಅನುದಾನ ಬಿಡುಗಡೆ: ಜಿ.ಟಿ.ದೇವೇಗೌಡರ ವಿಶ್ವಾಸ

ಮೈಸೂರು, ಮಾ.5– ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ತುಂಬಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಭರವಸೆ ನೀಡಿದರು.

ಮೈಸೂರು ತಾಲೂಕಿನ ದೊಡ್ಡಹಟ್ಟಿ ಹುಂಡಿ ಗ್ರಾಮದಲ್ಲಿ ಶ್ರೀಸಿದ್ದಪ್ಪಾಜಿ ದೇವಸ್ಥಾನದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದ ಅನೇಕ ಗ್ರಾಮಗಳಲ್ಲಿ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಗೆ ಮಂಜೂರಾತಿ ಕೋರಲಾಗಿದೆ ಎಂದರು.



ಮೈಸೂರು ತಾಲೂಕಿನ ದೊಡ್ಡಹಟ್ಟಿಹುಂಡಿ ಗ್ರಾಮದಲ್ಲಿ ಶ್ರೀಸಿದ್ದಪ್ಪಾಜಿ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡರನ್ನು ಅಭಿನಂದಿಸಲಾಯಿತು.

ಕೆರೆಗಳು ತುಂಬಿದರೆ ಅಂತರ್ಜಲ ವೃದ್ಧಿಯ ಜೊತೆಗೆ ರೈತರ ಜಮೀನುಗಳಿಗೂ ನೀರಾವರಿ ಸೌಲಭ್ಯ ದೊರೆಯಲಿದೆ. ಈಗಾಗಲೇ ಈ ವಿಚಾರದ ಬಗ್ಗೆ ಅನೇಕ ಬಾರಿ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿದ್ದೇನೆ. ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಪ್ರತಿ ಗ್ರಾಮಕ್ಕೂ ದಿನದ 24 ಗಂಟೆ ಕುಡಿಯುವ ನೀರು ಕಲ್ಪಿಸುವ ಹಳೆ ಉಂಡುವಾಡಿ ಯೋಜನೆಯು ಕಾಮಗಾರಿ ಪ್ರಗತಿಯಲ್ಲಿದ್ದು, ಈಗಾಗಲೇ 32 ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ. ಯೋಜನೆ ಪೂರ್ಣವಾದ ಮೇಲೆ ಎಲ್ಲಾ ಗ್ರಾಮಗಳಿಗೂ ಸಮರ್ಪಕ ನೀರು ಸೌಲಭ್ಯ ದೊರಕಲಿದೆ ಎಂದರು.

ಮಕ್ಕಳು ವಿದ್ಯಾವಂತರಾಗಿ, ಬುದ್ಧಿವಂತರಾಗಿ ದೇಶದ ಆಸ್ತಿಗಳಾಗಬೇಕು. ಸುಖ, ಸಂತೋಷದ ಜೊತೆಗೆ ಆರೋಗ್ಯದಿಂದ ಇರಬೇಕು. ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಹಾಗೂ ಮಾನವೀಯ ಮೌಲ್ಯಗಳನ್ನು ಕಲಿಸಿ, ಉತ್ತಮ ಪ್ರಜೆಗಳನ್ನಾಗಿ ಮಾಡಬೇಕು. ಗ್ರಾಮಗಳಲ್ಲಿ ಒಬ್ಬರಿಗೊಬ್ಬರು ದ್ವೇಷ, ಅಸೂಯೆ ಮಾಡದೆ ನೆಮ್ಮದಿಯಿಂದ ಕೂಡಿ ಬಾಳಬೇಕು. ನಿಮ್ಮ ಗ್ರಾಮದಲ್ಲಿ ಮೂರು ದಿನಗಳ ಕಾಲ ಹೋಮ, ಹವನ, ಪೂಜಾ ಕಾರ್ಯಕ್ರಮಗಳನ್ನು ಭಕ್ತಿಯಿಂದ ನೆರವೇರಿಸಿದ್ದೀರಿ. ಇದರಿಂದ ಊರು, ನಾಡು, ದೇಶಕ್ಕೆ ಒಳ್ಳೆಯದಾಗಲಿದೆ. ಶ್ರೀ ಸಿದ್ದಪ್ಪಾಜಿ ದೇವರ ಆಶೀರ್ವಾದದಿಂದ ಎಲ್ಲರೂ ಸುಖ, ಸಂತೋಷ, ನೆಮ್ಮದಿಯಿಂದ ಬದುಕುವಂತಾಗಲಿ ಎಂದು ಆಶಿಸಿದರು.

ಈ ವೇಳೆ ಗೋಪಾಲಪುರದ ಬಸವೇಗೌಡ, ಮಾದಹಳ್ಳಿ ಮಾದಪ್ಪ, ನಾಗರಾಜು, ಸತೀಶ್, ನುಗ್ಗಹಳ್ಳಿ ಮಂಜು, ಶಂಕರ್, ಪುಟ್ಟಸ್ವಾಮಚಾರಿ, ಚಿಕ್ಕಬೀಚನಹಳ್ಳಿ ಶಿವಕುಮಾರ್, ಶಂಕರ್, ಕುಮಾರ್, ಪಾಪಣ್ಣ, ಚಿಕ್ಕಸ್ವಾಮಿ, ಲಕ್ಕೇಗೌಡ, ಪುಟ್ಟೇಗೌಡ, ಬಸವೇಗೌಡ, ಚಂದ್ರ, ಸೋಮೇಶ್ವರ್, ಯೋಗೇಶ್, ಮಹದೇವು, ಉದಯ್, ಪುಟ್ಟಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಪಾಲಿಕೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಚೇರಿ ಉದ್ಘಾಟನೆ

●ಪದಾಧಿಕಾರಿಗಳ ಅಧಿಕಾರ ಸ್ವೀಕಾರ ●ಚಾಮರಾಜ ಕ್ಷೇತ್ರದಲ್ಲಿ 31 ಸಾವಿರ ಮಹಿಳೆಯರು ಗೃಹಲಕ್ಷ್ಮಿ ಸೌಲಭ್ಯ ಪಡೆಯುತ್ತಿದ್ದಾರೆ ; ಕಚೇರಿ ಉದ್ಘಾಟಿಸಿ ಶಾಸಕ ಕೆ.ಹರೀಶ್‌ಗೌಡ ಮಾಹಿತಿ



ಮೈಸೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿಯಲ್ಲಿ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಚೇರಿಯನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಮೈಸೂರು, ಮಾ.5(ಪಿಎಂ)– ಮೈಸೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿಯ ಕೊಠಡಿ ಸಂಖ್ಯೆ 14ರಲ್ಲಿ ಸಜ್ಜುಗೊಳಿಸಿರುವ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಚೇರಿಯನ್ನು ಗುರುವಾರ ಉದ್ಘಾಟಿಸಲಾಯಿತು.

ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರ ಸಮ್ಮುಖದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕಚೇರಿಯನ್ನು ಉದ್ಘಾಟಿಸಿದರು. ಇದೇ ವೇಳೆ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಮಾಜಿ ಉಪಮೇಯರ್ ಪುಷ್ಪವಲ್ಲಿ, ಉಪಾಧ್ಯಕ್ಷರಾಗಿ ಆರ್.ಗಿರೀಶ್, ಸದಸ್ಯರಾಗಿ ಎಂ.ಎನ್.ಮಹದೇವ, ಸುಶೀಲ ಮರಿಗೌಡ, ಜೆ.ವಿನಯ್ ಅಧಿಕಾರ ಸ್ವೀಕರಿಸಿದರು.

ಬಳಿಕ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಕೆ.ಹರೀಶ್‌ಗೌಡ, ಪಾಲಿಕೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರನ್ನು ಸರ್ಕಾರದ ಆದೇಶದಂತೆ ನಿಯೋಜನೆ ಮಾಡಲಾಗಿತ್ತು. ಇಂದು ಸಮಿತಿ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದ್ದು, ಕಚೇರಿಯನ್ನು ಸಹ ಉದ್ಘಾಟಿಸಲಾಗಿದೆ. ಈಗಾಗಲೇ ಚಾಮರಾಜ ಕ್ಷೇತ್ರದಲ್ಲಿ 31 ಸಾವಿರ ಮಹಿಳೆಯರು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯಡಿ ಪ್ರಯೋಜನ ಪಡೆಯುತ್ತಿದ್ದಾರೆ. ಇನ್ನು ಯಾರು ಅರ್ಹರು ಇದರಿಂದ ವಂಚಿತರಾಗಿದ್ದರೋ ಅವರಿಗೂ ಸಹ ಯೋಜನೆಯ ಸೌಲಭ್ಯ ಕಲ್ಪಿಸಲಾಗುವುದು. ಈ ಸಂಬಂಧ ಸಮಿತಿ ಪದಾಧಿಕಾರಿಗಳು ಪರಿಶೀಲನೆ ಮಾಡಲಿದ್ದಾರೆ ಎಂದು ತಿಳಿಸಿದರು.

ಗ್ಯಾರಂಟಿ ಸೌಲಭ್ಯಗಳು ಯಾರ್‍ಯಾರಿಗೆ ತಲುಪಬೇಕು ಅವರಿಗೆ 100ಕ್ಕೆ 100ರಷ್ಟು ತಲುಪಿಸುವ ಕೆಲಸ ಮಾಡಲಿದ್ದೇವೆ. ಒಂದು ತಿಂಗಳು ಮಾತ್ರ ತಾಂತ್ರಿಕ ಕಾರಣದಿಂದ ಗೃಹಲಕ್ಷ್ಮಿ ಹಣ ತಲುಪಿಸುವಲ್ಲಿ ವಿಳಂಬವಾಗಿತ್ತು. ಫಲಾನುಭವಿಗಳೇ ನಮಗೆ ಸಮಯಕ್ಕೆ ಸರಿಯಾಗಿ ಗೃಹಲಕ್ಷ್ಮಿ ಹಣ ತಮ್ಮ ಖಾತೆಗೆ ಜಮೆಯಾಗುತ್ತಿದೆ ಎಂದು ಹೇಳಿದ್ದಾರೆ ಎಂದರು.

ಗ್ಯಾರಂಟಿ ಯೋಜನೆ ಪರಿಷ್ಕರಣೆ ಆಗಲಿದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಆರ್ಥಿಕವಾಗಿ ಸ್ಥಿತಿವಂತರಾದವರನ್ನು ಕೈಬಿಡುವ ಬಗ್ಗೆ ಸರ್ಕಾರ ಮಟ್ಟದಲ್ಲಿ ನಮ್ಮ ನಾಯಕರು ಚರ್ಚೆ ಮಾಡುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದವರಿಗೆ ಗ್ಯಾರಂಟಿ ಯೋಜನೆ ಸೌಲಭ್ಯ ಕಲ್ಪಿಸುವುದು ಅಗತ್ಯ. ಆರ್ಥಿಕವಾಗಿ ಸ್ಥಿತಿವಂತರಾಗಿರುವವರು ಗ್ಯಾರಂಟಿ ಯೋಜನೆಗಳ ಪ್ರಯೋಜನವನ್ನು ಸ್ವಯಂ ಪ್ರೇರಿತವಾಗಿ ಕೈಬಿಟ್ಟರೆ ಒಳ್ಳೆಯದು ಎಂದು ಹೇಳಿದರು.

ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ಮುಖಂಡರಾದ ಹೆಚ್.ವಿ.ರಾಜೀವ್, ಶಿವಣ್ಣ, ರವಿ ಮಂಚೇಗೌಡನಕೊಪ್ಪಲು, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಮತ್ತಿತರರು ಹಾಜರಿದ್ದರು.

ವರದಕ್ಷಿಣೆ ಕಿರುಕುಳ; ಕೊಲೆ ಬೆದರಿಕೆ

ಪತಿ, ಅತ್ತೆ, ಮಾವನ ವಿರುದ್ಧ ಮಹಿಳೆ ಕೇಸ್ ದಾಖಲು

ಮೈಸೂರು, ಮಾ.5(ಎಂಕೆ)– ಮಹಿಳೆಯೊಬ್ಬರಿಗೆ ಪತಿ, ಅತ್ತೆ ಮತ್ತು ಮಾವ ವರದಕ್ಷಿಣೆ ಕಿರುಕುಳ ನೀಡಿ ಕೊಲೆ ಬೆದರಿಕೆಯೊಡ್ಡಿರುವ ಕುರಿತು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಮೈಸೂರಿನ ರಾಜರಾಜೇಶ್ವರಿನಗರದ ಸಿ.ಕೆ.ಅಮೂಲ್ಯ(26) ವರದಕ್ಷಿಣೆ ಕಿರುಕುಳಕ್ಕೆ ಒಳಗಾದವರು. ಬಿಇ ವಿದ್ಯಾಭ್ಯಾಸ ಮಾಡಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಅಮೂಲ್ಯರಿಗೆ ತಮ್ಮ ಮನೆಯ ಹಿಂಭಾಗದಲ್ಲಿ ವಾಸವಿದ್ದ ಪಿ.ರಾಜಣ್ಣ ಅವರ ಮಗ ರಾಹುಲ್ ಜೊತೆಗೆ 2024ರ ನ.11ರಂದು ಎಂಗೇಜ್‌ಮೆಂಟ್ ಹಾಗೂ 2025ರ ಫೆ.17ರಂದು ವಿವಾಹವಾಗಿದೆ.

ಬಿಇ ಮತ್ತು ಎಂಬಿಎ ವಿದ್ಯಾಭ್ಯಾಸ ಮಾಡಿದ್ದ ರಾಹುಲ್, ಬಿಬಿಎಂಪಿಯ ಐಟಿ ವಿಭಾಗದಲ್ಲಿ ಖಾಯಂ ಉದ್ಯೋಗಿಯಾಗಿದ್ದಾನೆಂದು ಸುಳ್ಳು ಹೇಳಿ ಮದುವೆ ಮಾಡಿದ್ದು, ಮದುವೆ ಮಾತುಕತೆ ವೇಳೆಯಲ್ಲಿ ಆದ ಮಾತಿನಂತೆ ಟಾಟಾ ನೆಕ್ಸಾನ್ ಕಾರು(ಕೆಎ.11.ಪಿ.2140), ಹೊಂಡಾ ಆಕ್ಟಿವಾ ಸ್ಕೂಟರ್(ಕೆಎ.11.ಇಎನ್.7200), 69 ಗ್ರಾಂ ಚಿನ್ನದ ಬ್ರೆಸ್ಲೆಟ್, 72 ಗ್ರಾಂ ಕುತ್ತಿಗೆ ಚೈನ್, 30 ಗ್ರಾಂನ ಮೂರು ಉಂಗುರ, 2 ಕೆ.ಜಿ ಬೆಳ್ಳಿ ತಟ್ಟೆ, 2 ಕೆ.ಜಿ ಬೆಳ್ಳಿ ಚೆಂಬು, ವಾಚ್ ಮತ್ತು ಬಟ್ಟೆ ಖರೀದಿಗೆ 2.50 ಲಕ್ಷ ರೂ.ನೀಡಲಾಗಿದೆ.


ಹಾಗೆಯೇ ಅಮೂಲ್ಯ ಮೈಮೇಲೆ 6 ಚಿನ್ನದ ಬಳೆಗಳು, 17 ಗ್ರಾಂನ ಮೂರು ಜೊತೆ ಓಲೆ, 7 ಗ್ರಾಂನ ಲೇಡಿಸ್ ಬ್ರೆಸ್ಲೆಟ್, 20 ಗ್ರಾಂನ ಓಲೆ, 35 ಗ್ರಾಂ ಶಾರ್ಟ್ ನೆಕ್ಲೆಸ್, 64 ಗ್ರಾಂ ಚೈನ್, 86 ಗ್ರಾಂನ ಲಾಂಗ್ ಚೈನ್, 34 ಗ್ರಾಂ ಚಿನ್ನದ ಬಳೆಗಳು, 13 ಗ್ರಾಂನ 4 ಉಂಗುರ ಹಾಕಿ, 40 ಲಕ್ಷ ರೂ.ಖರ್ಚು ಮಾಡಿ ಮದುವೆ ಮಾಡಿಕೊಡಲಾಗಿದೆ.

ಮದುವೆಯಾದ ಬಳಿಕ ಪತಿ, ಅತ್ತೆ ಮತ್ತು ಮಾವನೊಂದಿಗೆ ಬೆಂಗಳೂರಿನ ಪದ್ಮನಾಭನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಅಮೂಲ್ಯಗೆ ನಾಲ್ಕು ತಿಂಗಳ ಬಳಿಕ ತನ್ನ ಪತಿ ರಾಹುಲ್, ಬಿಬಿಎಂಪಿಯಲ್ಲಿ ತಾತ್ಕಾಲಿಕ ಗುತ್ತಿಗೆ ನೌಕರನಾಗಿದ್ದು, ಕೆಲಸದಿಂದಲೂ ತೆಗೆದುಹಾಕಲಾಗಿದೆ ಎಂಬ ವಿಷಯ ಗೊತ್ತಾಗಿದೆ. ಬಳಿಕ ಅಮೂಲ್ಯ ಈ ವಿಷಯವನ್ನು ತನ್ನ ತಂದೆ–ತಾಯಿಗೆ ತಿಳಿಸಿದ್ದು, ಈಗ ಏನೂ ಮಾಡಲು ಸಾಧ್ಯವಿಲ್ಲ ಹೊಂದಿಕೊಂಡು ಹೋಗುವಂತೆ ತಿಳಿಸಿದ್ದಾರೆ. ಅದರಂತೆ ವಾಪಸ್ ಗಂಡನ ಮನೆಗೆ ಬಂದ ಅಮೂಲ್ಯಗೆ ಪತಿ ರಾಹುಲ್ ಮತ್ತು ಆತನ ತಂದೆ ಮತ್ತು ತಾಯಿ ಯಾವುದಾದರೂ ಬಿಸಿನೆಸ್ ಮಾಡಬೇಕು, ನಿಮ್ಮ ತಂದೆ ಬಳಿ ಹಣ ಕೇಳು ಎಂದು ಕಿರುಕುಳ ನೀಡಿ, ನಂತರ ಕೊಲೆ ಮಾಡುವುದಾಗಿ ಬೆದರಿಕೆಯೊಡ್ಡಿದ್ದಾರೆ.

ನಂತರ ಹಿರಿಯರೊಂದಿಗೆ ಮಾತುಕತೆ ನಡೆಸಿ, ಚೆನ್ನಾಗಿ ನೋಡಿಕೊಳ್ಳುತ್ತೇವೆ. ಬೆಂಗಳೂರಿಗೆ ಹೋಗಿ ಬರುವುದಾಗಿ ಹೇಳಿ ಮೈಸೂರಿನ ತವರು ಮನೆಗೆ ಅಮೂಲ್ಯಳನ್ನು ಬಿಟ್ಟು ಹೋದ ರಾಹುಲ್ ಮತ್ತು ಆತನ ಮನೆಯವರು ಮೂರು ತಿಂಗಳಾದರೂ ವಾಪಸ್ ಕರೆದುಕೊಂಡು ಹೋಗಲು ಬಂದಿಲ್ಲ. ಅಲ್ಲದೆ ಬೆಂಗಳೂರಿನ ಪದ್ಮನಾಭನಗರದಲ್ಲಿ ಮೊದಲಿದ್ದ ಬಾಡಿಗೆ ಮನೆಯನ್ನು ಖಾಲಿ ಮಾಡಿ, ಮದುವೆ ಸಂದರ್ಭದಲ್ಲಿ ಪಡೆದಿದ್ದ ಒಡವೆಗಳ ಸಮೇತ ಬೇರೆ ಕಡೆ ವಾಸವಿದ್ದಾರೆ. ಅಮೂಲ್ಯ ಹೊಸ ಬಾಡಿಗೆ ಮನೆ ವಿಳಾಸ ಕೇಳಿದರೆ ಅವಾಚ್ಯ ಪದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಬಿಎನ್‌ಎಸ್ (ಭಾರತೀಯ ನ್ಯಾಯ ಸಂಹಿತೆ) 85, 352, 351(3) ಕಲಂ ಅಡಿಯಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿಕೊಂಡಿರುವ ಮಹಿಳಾ ಠಾಣೆ ಪೊಲೀಸರು ವಿಚಾರಣೆ ಕೈಗೊಂಡಿದ್ದಾರೆ.

ಪಶ್ಚಿಮ ಬಂಗಾಳ ರಾಜ್ಯಪಾಲರ ದಿಢೀರ್ ರಾಜೀನಾಮೆ

ಕೋಲ್ಕತ್ತಾ: ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.



ಪಶ್ಚಿಮ ಬಂಗಾಳ ರಾಜ್ಯಪಾಲರಾಗಿ ಮೂರೂವರೆ ವರ್ಷಗಳ ಕಾಲ ಸೇವೆ ಸಲ್ಲಿಸಿದ ಆನಂದ ಬೋಸ್ ಅವರು ಇಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದು ಲೋಕ ಭವನದ ಅಧಿಕಾರಿಗಳು ಪಿಟಿಐಗೆ ತಿಳಿಸಿದ್ದಾರೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಾಗ ರಾಜ್ಯಪಾಲರ ರಾಜೀನಾಮೆ ತೀವ್ರ ಕುತೂಹಲ ಸೃಷ್ಟಿಸಿದೆ.

ರಾಜ್ಯಪಾಲರ ಕಚೇರಿಯಲ್ಲಿ ಸಾಕಷ್ಟು ಸಮಯ ಕಳೆದಿದ್ದೇನೆ ಎಂದು ಆನಂದ ಬೋಸ್ ಹೇಳಿದ್ದು, ಇದು ಸಾಂವಿಧಾನಿಕ ಹುದ್ದೆಯಿಂದ ತೆರಳುವ ಅವರ ನಿರ್ಧಾರವನ್ನು ಸೂಚಿಸುತ್ತದೆ. ಬೋಸ್ ಅವರು 2022ರಿಂದ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಏತನ್ಮಧ್ಯೆ, ಬೋಸ್ ರಾಜೀನಾಮೆ ನಂತರ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅವರಿಗೆ ಪಶ್ಚಿಮ ಬಂಗಾಳದ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದೃಢಪಡಿಸಿದ್ದಾರೆ. ಬೋಸ್ ಅವರ ರಾಜೀನಾಮೆ ಬಗ್ಗೆ ಬ್ಯಾನರ್ಜಿ ಕಳವಳ ವ್ಯಕ್ತಪಡಿಸಿದ್ದು, ಬಂಗಾಳ ಚುನಾವಣೆಗೆ ಮುನ್ನ ಅಮಿತ್ ಶಾ ಅವರು ರಾಜಕೀಯ ಕಾರಣಗಳಿಗಾಗಿ ಒತ್ತಡವನ್ನು ಎದುರಿಸಿರಬಹುದು ಎಂದು ಆರೋಪಿಸಿದ್ದಾರೆ.

ಹುಟ್ಟುಹಬ್ಬ



ಮೈಸೂರು ನಗರ ಬಿಜೆಪಿ ಯುವಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ ಅವರ ಹುಟ್ಟುಹಬ್ಬವನ್ನು ಹೆಬ್ಬಾಳು ಬಡಾವಣೆಯಲ್ಲಿ ಅವರ ಸ್ನೇಹಿತರ ಬಳಗದಿಂದ ಅದ್ದೂರಿಯಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಯುವ ಮೋರ್ಚಾ ಮಾಜಿ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಯುವಮುಖಂಡರಾದ ಅರ್ಜುನಗೌಡ, ಚಿಲ್ಲಿ ದಿನೇಶ್, ಸುರೇಶ್, ಸತೀಶ್, ಪ್ರವೀಣ್ ಬುದ್ಧ, ಮನು ಹನುಮಾನ್, ಹರೀಶ್, ಭಟ್ಟ, ರವಿಕುಮಾರ್, ಹೆನ್ಸ್, ಮಹೇಶ್, ಆನಂದ ಮತ್ತಿತರರಿದ್ದರು.

ಇಂದು ಜೆಎಸ್‌ಎಸ್ ಕಾನೂನು ಕಾಲೇಜಲ್ಲಿ ಅಭಿನಂದನಾ ಸಮಾರಂಭ



ಕೆ.ಬಿ.ರೋಷ್ನಿ



ರಾಹುಲ್



ಮಹದೇವ



ಸುಹಾಸ್



ರಶ್ಮಿ

ಮೈಸೂರು, ಮಾ.5– ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಕಾನೂನು ಕಾಲೇಜು ಸಹಯೋಗದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿಗೆ ಶುಕ್ರವಾರ ಬೆಳಗ್ಗೆ 10.30ಕ್ಕೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.



ಸುಪ್ರಿಯಾ



ನಿತ್ಯ

ಕಾಲೇಜಿನ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ಕೆ.ಬಿ.ರೋಷ್ನಿ, ರಾಹುಲ್ ಆದಿನಾಥ್ ನ್ಯಾಮಗೌಡ್, ಮಹದೇವ ಕೆ.ಗೌಡ, ಕೆ.ಸಿ.ಸುಹಾಸ್, ಮುದಲಗಿ ರಶ್ಮಿ ವೀರಭದ್ರ, ಸುಪ್ರಿಯಾ ನಾವಲಿ ಹಾಗೂ ನಿತ್ಯ ಎನ್.ಗುಜ್ಜಾರ್ ಅವರನ್ನು ಅಭಿನಂದಿಸಲಾಗುವುದು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ–1 ಪ್ರೊಎಸ್.ಪಿ.ಮಂಜುನಾಥ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ್, ಲಾಗೈಡ್ ಕಾನೂನು ಮಾಸಪತ್ರಿಕೆ ಪ್ರಧಾನ ಸಂಪಾದಕರೂ ಆದ ವಕೀಲ ಹೆಚ್.ಎನ್.ವೆಂಕಟೇಶ್ ಭಾಗವಹಿಸಲಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ವಾದಂ (ತ) + ಮುಸ್ತಫಾ ಮುಸ್ತಫಾ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮೆಜೆಸ್ಟಿಕ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ಮಧ್ಯಪ್ರಾಚ್ಯದಲ್ಲಿ ಬಿಕ್ಕಟ್ಟು ಹಿನ್ನೆಲೆ

ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ವಿತರಣೆಯಲ್ಲಿ ಓಟಿಪಿ ಕಡ್ಡಾಯ

ಮೈಸೂರು,ಮಾ.5(ಪಿಎಂ)– ಗೃಹಬಳಕೆಯ ಅಡುಗೆ ಅನಿಲ ಸಿಲಿಂಡರ್ ವಿತರಣೆಯಲ್ಲಿ ಓಟಿಪಿ ಕಡ್ಡಾಯಗೊಳಿಸಲಾಗಿದೆ. ಈ ಸಂಬಂಧ ಕೇಂದ್ರದ ಪೆಟ್ರೋಲಿಯಂ ಸಚಿವಾಲಯದಿಂದ ತೈಲ ಕಂಪನಿಗಳಿಗೆ ಸಂದೇಶ ರವಾನೆಯಾಗಿದ್ದು, ಆ ಮೂಲಕ ಏಜೆನ್ಸಿಗಳಿಗೂ ಸಂದೇಶ ಬಂದಿದೆ. ವಾಣಿಜ್ಯ ಸಿಲಿಂಡರ್ ವಿತರಣೆ ಸಂಬಂಧ ಗ್ರಾಹಕರಿಗೆ ಪೂರೈಕೆ ಮಾಡಿರುವ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಸಹ ಮಾಡಬೇಕಿದೆ.



ಮೈಸೂರಿನ ನಗರದ ಅಮರ್‌ದೀಪ್ ಗ್ಯಾಸ್ ಏಜೆನ್ಸಿ ಮಾಲೀಕರೂ ಆದ ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಇರಾನ್ ಮೇಲೆ ಅಮೇರಿಕ ಮತ್ತು ಇಸ್ರೇಲ್ ಸಮರ ಸಾರಿದ ಪರಿಣಾಮ ಮಧ್ಯಪ್ರಾಚ್ಯದಲ್ಲಿ ನಿರ್ಮಾಣವಾಗಿರುವ ಬಿಕ್ಕಟ್ಟು ಭಾರತದಲ್ಲಿ ಇಂತಹ ಸನ್ನಿವೇಶ ಸೃಷ್ಟಿಯಾಗಲು ಕಾರಣವಾಗಿದೆ ಎಂದು ಹೇಳಿದರು.

ಈಗ ಶೇ.100ರಷ್ಟು ಓಟಿಪಿ ಕಡ್ಡಾಯಗೊಳಿಸಲು ಸೂಚನೆ ನೀಡಲಾಗಿದೆ. ಯಾವುದೇ ಉನ್ನತ ಅಧಿಕಾರಿಯಾದರೂ ಬುಕ್ಕಿಂಗ್ ಇಲ್ಲದೇ ಸಿಲಿಂಡರ್ ವಿತರಣೆ ಮಾಡುವಂತಿಲ್ಲವೆಂದೂ ನಿರ್ದೇಶನ ನೀಡಲಾಗಿದೆ. ಏಜೆನ್ಸಿಗಳಿಗಿದ್ದ ತ್ವರಿತ ಬುಕ್ಕಿಂಗ್ ಸೌಲಭ್ಯ ಸಹ ರದ್ದುಗೊಳಿಸಲಾಗಿದೆ. ವಾಣಿಜ್ಯ ಸಿಲಿಂಡರ್ ಸಂಬಂಧ ಗ್ರಾಹಕರಿಗೆ ಪೂರೈಕೆ ಮಾಡುವ ಬಗ್ಗೆ ಮಾಹಿತಿಯನ್ನು ಕಡ್ಡಾಯವಾಗಿ ನಮೂದು ಮಾಡಬೇಕು. ಮುಂಚೆ ಇದು ಕಡ್ಡಾಯ ಇರಲಿಲ್ಲ. ಜೊತೆಗೆ ವಾಣಿಜ್ಯ ಬಳಕೆ ಸಿಲಿಂಡರ್‌ಗೆ ನೀಡುತ್ತಿದ್ದ ರಿಯಾಯಿತಿ ಸಹ ಕೈಬಿಡಲಾಗಿದೆ. ಈ ಸಿಲಿಂಡರ್‌ಗೆ ಸಾಲ ಸೌಲಭ್ಯಕ್ಕೂ ಅವಕಾಶ ಇತ್ತು. ಈಗ ಅದನ್ನು ರದ್ದು ಮಾಡಲಾಗಿದೆ. ಹೀಗೆ ತೈಲ ಕಂಪನಿಗಳು ಕಟ್ಟುನಿಟ್ಟಿನ ನಿಯಮಾವಳಿಗಳನ್ನು ರೂಪಿಸಿ ಜಾರಿಗೊಳಿಸಲು ಏಜೆನ್ಸಿಗಳಿಗೆ ಸೂಚನೆ ನೀಡಿವೆ ಎಂದು ತಿಳಿಸಿದರು.

> ಸಾಕಷ್ಟು ಮಂದಿ ಗ್ರಾಹಕರು ಆನ್‌ಲೈನ್ ವಂಚನೆಯಾಗುವ ಆತಂಕದಲ್ಲಿ ಡೆಲಿವರಿ ಬಾಯ್‌ಗಳಿಗೆ ಓಟಿಪಿ ಹೇಳಲು ನಿರಾಕರಿಸುತ್ತಿದ್ದು, ಇದು ಡೆಲಿವರಿ ಬಾಯ್ಸ್‌ಗಳಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಹಣಕಾಸು ವ್ಯವಹಾರ ಸಂಬಂಧ ಓಟಿಪಿ ಹಂಚಿಕೊಳ್ಳದಂತೆ ಆಗಾಗ್ಗೆ ಆರ್‌ಬಿಐ ಸಂದೇಶ ನೀಡುತ್ತಿದೆ. ಹೀಗಾಗಿ ಸಿಲಿಂಡರ್ ಪಡೆಯುವ ವಿಷಯದಲ್ಲೂ ಓಟಿಪಿ ನೀಡಲು ಗ್ರಾಹಕರು ಹಿಂದೇಟು ಹಾಕುತ್ತಿದ್ದಾರೆ. ಸಿಲಿಂಡರ್ ಓಟಿಪಿ ಬಗ್ಗೆ ಬಹುತೇಕ ಗ್ರಾಹಕರಿಗೆ ಗೊಂದಲ ಇದ್ದು, ಸ್ಪಷ್ಟತೆ ಇಲ್ಲ. ಹಾಗಾಗಿ ಪೆಟ್ರೋಲಿಯಂ ಸಚಿವಾಲಯ ಹಾಗೂ ತೈಲ ಕಂಪನಿಗಳಿಗೆ ಪತ್ರ ಬರೆದು ಈ ಬಗ್ಗೆ ತಿಳುವಳಿಕೆ ಮೂಡಿಸುವಂತೆ ಮನವಿ ಮಾಡಿದ್ದೇನೆ.
>
> 
>
> **-ಮೆಹುಲ್ ಜೆ.ಪಟೇಲ್,** ರಾಜ್ಯಾಧ್ಯಕ್ಷರು, ಭಾರತೀಯ ಎಲ್‌ಪಿಜಿ ವಿತರಕರ ಸಂಘ(ಎಲ್‌ಡಿಎಐ).

ತೈಲ ಕಂಪನಿಗಳು ಏಜೆನ್ಸಿಗಳೊಂದಿಗೆ ಇಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚೆ ನಡೆಸಿ ಸೂಚನೆಗಳನ್ನು ನೀಡಿದ್ದು, ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಿವೆ. ಈ ಹಿಂದೆ ಓಟಿಪಿಗೆ ಸಡಿಲಿಕೆ ಇತ್ತು. ಶೇ.60ಷ್ಟು ಓಟಿಪಿ ಮಾಡಿದರೆ ಸಾಕಿತ್ತು. ಆದರೆ ಈಗ ಶೇ.100ರಷ್ಟು ಕಡ್ಡಾಯ ಮಾಡುವಂತೆ ಸೂಚನೆಗಳು ಬಂದಿದೆ. ಆರಂಭದಲ್ಲಿ ವಾರ ಕಾಲ ಶೇ.75ಕ್ಕೆ ಮಿತಿಗೊಳಿಸಿದ್ದು, ಮುಂದಿನ ದಿನಗಳಲ್ಲಿ ಶೇ.100ರಷ್ಟು ಕಡ್ಡಾಯ ಮಾಡುವ ಮುನ್ಸೂಚನೆ ನೀಡಲಾಗಿದೆ. ಇಂಡಿಯನ್ ಆಯಿಲ್ ಕಾರ್ಪೋರೇಷನ್ ಗ್ರಾಹಕರಿಗೆ ಶೇ.95ರಷ್ಟು ಓಟಿಪಿ ವ್ಯವಸ್ಥೆಯನ್ನು ಕಡ್ಡಾಯ ಮಾಡಲು ನಿರ್ಧರಿಸಲಾಗಿದೆ ಎಂದರು.

ಇ–ಕೈವೈಸಿ ಮಾಡಿಸದ ಗ್ರಾಹಕರಿಗೆ ಸಿಲಿಂಡರ್ ವಿತರಣೆ ಮಾಡದಂತೆ ಸೂಚನೆ ನೀಡಿದ್ದು, ಓಟಿಪಿ ವಿಚಾರ ಸಂಬಂಧ ಗ್ರಾಮೀಣ ಪ್ರದೇಶದಲ್ಲಿ ನೆಟ್‌ವರ್ಕ್ ಸಮಸ್ಯೆಯಾಗುವ ಬಗ್ಗೆ ವಿಡಿಯೋ ಕಾನ್ಫರೆನ್ಸ್‌ನಲ್ಲಿ ನಾವು ತೈಲ ಕಂಪನಿಗಳ ಗಮನಕ್ಕೆ ತಂದಿದ್ದೇವೆ ಎಂದು ತಿಳಿಸಿದರು.

ಖಮೇನಿ ಸಾವಿಗೆ ಭಾರತ ಸಂತಾಪ

ನವದೆಹಲಿ: ಫೆ.28ರಂದು ಇಸ್ರೇಲ್–ಅಮೆರಿಕಾದ ಮಿಸೈಲ್ ದಾಳಿಯಲ್ಲಿ ಹತ್ಯೆಯಾದ ಇರಾನ್ ಸುಪ್ರೀಂ ಲೀಡರ್ ಅಯತೊಲ್ಲಾ ಅಲಿ ಖಮೇನಿ ಅವರ ಸಾವಿಗೆ ಕೊನೆಗೂ ಇಂದು(ಮಾ.5) ಕೇಂದ್ರ ಸರ್ಕಾರ ಸಂತಾಪ ಸೂಚಿಸಿದ್ದು, ನವದೆಹಲಿಯಲ್ಲಿರುವ ಇರಾನ್ ರಾಯಭಾರಿ ಕಚೇರಿಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಭೇಟಿ ನೀಡಿದ್ದಾರೆ.

ಖಮೇನಿ ಹತ್ಯೆಯಾದ ಬಳಿಕ ಇಸ್ರೇಲ್–ಅಮೆರಿಕಾದ ವಾಯುದಾಳಿಯನ್ನು ಖಂಡಿಸದೇ ಮತ್ತು ಸಂತಾಪ ಸೂಚಿಸದೇ ಭಾರತ ಸರ್ಕಾರ ಮತ್ತು ಪ್ರಧಾನಿ ಮೋದಿ ಮೌನ ವಹಿಸಿದ್ದರು. ಈ ನಿಲುವನ್ನು ಕಾಂಗ್ರೆಸ್ ಸೇರಿ ವಿರೋಧ ಪಕ್ಷಗಳು ಪ್ರಶ್ನಿಸಿ, ಕೇಂದ್ರದ ವಿರುದ್ಧ ಕಿಡಿಕಾರಿದ್ದವು.

ಗುರುವಾರ ಮಧ್ಯಾಹ್ನ ವಿಕ್ರಮ್ ಮಿಶ್ರಿ ಇರಾನ್ ರಾಯಭಾರಿ ಕಚೇರಿಗೆ ಭೇಟಿ ನೀಡಿ, ಅಲ್ಲಿನ ರಾಯಭಾರಿ ಡಾ.ಮೊಹಮ್ಮದ್ ಫತಾಲಿ ಅವರನ್ನು ಭೇಟಿಯಾಗಿ ಭಾರತ ಸರ್ಕಾರದ ಪರವಾಗಿ ಸಂತಾಪ ಸೂಚಿಸಿದ್ದಾರೆ. ಈ ವೇಳೆ ಫತಾಲಿ ಹಿಂದೂ ಮಹಾಸಾಗರದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಅಮೆರಿಕಾವನ್ನು ಕಟುವಾಗಿ ಟೀಕಿಸಿದ್ದಾರೆ ಎನ್ನಲಾಗಿದೆ. ಆದರೆ ಭಾರತ ಈವರೆಗೂ ಈ ಘಟನೆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇನ್ನೂ ಫಿನ್‌ಲ್ಯಾಂಡ್ ಅಧ್ಯಕ್ಷರ ಜೊತೆಗಿನ ಮಾತುಕತೆಯಲ್ಲಿ ಮಾತನಾಡಿರುವ ಪ್ರಧಾನಿ ಮೋದಿ, ಮಧ್ಯಪ್ರಾಚ್ಯದ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಇಂತಹ ವಿವಾದಗಳಿಗೆ ಪರಿಹಾರ ಕಂಡುಕೊಳ್ಳಲು ಭಾರತ ಯಾವಾಗಲೂ ಸಂವಾದ ಮತ್ತು ರಾಜತಾಂತ್ರಿಕತೆಯ ಮೂಲಕವೇ ಕರೆ ನೀಡಿದೆ. ಎಲ್ಲದಕ್ಕೂ ಮಿಲಿಟರಿ ಕಾರ್ಯಾಚರಣೆ ಪರಿಹಾರವಲ್ಲ ಎಂದಿದ್ದಾರೆ.





